ಭಯ

ಸರಳ ವಿಶ್ಲೇಷಣೆ

ಬೆಂಗಳೂರು ವಿಶ್ವವಿದ್ಯಾಲಯದ
ಪ್ರಚಾರೋಪನ್ಯಾಸ ಶಾಖೆ, ಬೆಂಗಳೂರು

ಡಾ|| ಎಂ. ಶಿವರಾಂ

೪

೧೯೭೯

ಭಯ

ಸರಳ ವಿಶ್ಲೇಷಣೆ

ಡಾ। ಎಂ. ಶಿವರಾಂ

ಬೆಂಗಳೂರು ವಿಶ್ವವಿದ್ಯಾಲಯದ
ಪ್ರಚಾರೋಪನ್ಯಾಸ ಶಾಖೆ
ಬೆಂಗಳೂರು
೧೯೬೯

ಬೆಂಗಳೂರು ವಿಶ್ವವಿದ್ಯಾಲಯದ
ಪ್ರಚಾರೋಪನ್ಯಾಸ ಮಾಲೆ

ಅಧ್ಯಕ್ಷರು : ಡಾ|| ರಂ. ಶ್ರೀ. ಮುಗಳಿ

ಪ್ರಕಟಣೆ ಸಂಖ್ಯೆ : ೪

ಹೆಸರು : ಭಯ—ಸರಳ ವಿಶ್ಲೇಷಣೆ

ಲೇಖಕರು : ಡಾ|| ಎಂ. ಶಿವರಾಂ

ಬೆಲೆ : ೦–೫೫ ಪೈಸೆ

ಮುದ್ರಣ :
ಚೇತನಾ ಪ್ರಿಂಟರ್ಸ್
ಗಾಂಧೀನಗರ, ಬೆಂಗಳೂರು-೯.

ಮುನ್ನುಡಿ

ಕಾಲೇಜುಗಳಲ್ಲಿ ಜ್ಞಾನ ಬೋಧನೆಯ ಎಲ್ಲ ಹಂತಗಳ ವ್ಯವಸ್ಥೆ ವಿಶ್ವವಿದ್ಯಾಲಯದ ಮುಖ್ಯ ಹೊಣೆ. ಇದರೊಂದಿಗೆ ಜ್ಞಾನ ಪ್ರಸಾರದ ಇನ್ನೊಂದು ಪೂರಕ ಹೊಣೆಯೂ ಇದೆ. ಇದರ ನಿರ್ವಹಣೆಯ ಅಂಗವಾಗಿ, ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಶಾಖೆಯನ್ನು ಎರಡು ವರ್ಷಗಳ ಹಿಂದೆ ಸ್ಥಾಪಿಸಿ ಅದರ ವತಿಯಿಂದ ನಗರದ ಹಲವಾರು ಕೇಂದ್ರಗಳಲ್ಲಿ ಮತ್ತು ಸಮೀಪದ ಹಳ್ಳಿಗಳಲ್ಲಿ ತಜ್ಞರಿಂದ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಯಿತು. ಇಂಥ ಸಭೆಗಳಲ್ಲಿ ದೊರೆತ ಆಶಾದಾಯಕ ಪ್ರತಿಕ್ರಿಯೆ ಒಂದು ಹೊಸ ಪ್ರಶ್ನೆಯನ್ನು ಮುಂದೆ ಇಟ್ಟಿತು : ತಜ್ಞರ ದೀರ್ಘಕಾಲದ ಚಿಂತನೆಯ ಫಲ ಈ ಉಪನ್ಯಾಸ; ಇದು ಸಕಲರಿಗೂ ಬೇಕೆಂದಾಗ ಲಭ್ಯವಾಗಬೇಡವೇ? ಅದರಿಂದ ಭಾಷೆ ಪರಿಪುಷ್ಟವಾಗುವುದಲ್ಲದೇ ಜ್ಞಾನ ಪ್ರಸಾರ ಕಾರ್ಯ ಇನ್ನಷ್ಟು ಸಮರ್ಪಕವಾಗಿ ನೆರವೇರುವುದು. ಈ ದೃಷ್ಟಿಯಿಂದ ಉಪನ್ಯಾಸಕಾರರನ್ನು ತಮ್ಮ ಭಾಷಣದ ವಿಷಯದ ಆಧಾರದ ಮೇಲೆ ಕಿರುಹೊತ್ತಗೆಗಳನ್ನು ಬರೆದು ಕೊಡಬೇಕೆಂದು ಬಿನ್ನವಿಸಿದ್ದಾಯಿತು.

ನಮ್ಮ ವಿಶ್ವವಿದ್ಯಾಲಯದ ಪ್ರಚಾರ ಪುಸ್ತಕ ಮಾಲೆಯ ಆರಂಭ ಈ ರೀತಿ ಆಗಿದೆ. ಇದಕ್ಕೆ ಒಂದು ರೂಪವಿತ್ತು ಕಿರು ಹೊತ್ತಗೆಗಳ ಸಂಕಲನವನ್ನು ಪ್ರಕಟಿಸಲು ಉತ್ಸಾಹದಿಂದ ಕಾರ್ಯೋದ್ಯುಕ್ತರಾಗಿರುವ ಪ್ರಚಾರೋಪನ್ಯಾಸ ಶಾಖೆಯ ಸಕಲ ಕಾರ್ಯಕರ್ತರಿಗೂ ಲೇಖಕರಿಗೂ ವಿಶ್ವವಿದ್ಯಾಲಯವು ಋಣಿಯಾಗಿದೆ.

ಆಧುನಿಕ ಜ್ಞಾನ ಜನಸಾಮಾನ್ಯರಿಗೆ ಈ ಮಾಲೆಯ ಮೂಲಕ ಸುಲಭವಾಗಿ ಲಭಿಸಲೆಂದೂ, ಅವರ ಜೀವನ ಸತ್ವಪೂರ್ಣವಾಗಲೆಂದೂ ಹಾರೈಸುತ್ತೇನೆ.

ಬೆಂಗಳೂರು ವಿಶ್ವವಿದ್ಯಾಲಯ
೧೯-೩-೧೯೬೯

ವಿ. ಕೃ. ಗೋಕಾಕ್
ಉಪಕುಲಪತಿ

ನಾಲ್ಕು ಮಾತು

ಬೆಂಗಳೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಸಮಿತಿಯ ಕಾರ್ಯವು ಪ್ರಾರಂಭವಾಗಿ ಸುಮಾರು ಎರಡು ವರ್ಷಗಳಾದವು. ಪ್ರಾರಂಭದಿಂದಲೇ ಈ ಉಪನ್ಯಾಸಗಳನ್ನು ಕಿರುಹೊತ್ತಗೆಯ ರೂಪದಲ್ಲಿ ಪ್ರಕಟಿಸಬೇಕೆಂದು ಸಂಕಲ್ಪಿಸಲಾಗಿತ್ತು. ಆ ಪ್ರಕಾರ ಆಯಾ ಉಪನ್ಯಾಸಕರು ತಮ್ಮ ಉಪನ್ಯಾಸಗಳನ್ನು ಬರೆದು ಕೊಡಬೇಕೆಂದು ಅವರನ್ನು ಕೇಳಿಕೊಂಡಿದ್ದೆವು. ಅವರಿಂದ ಈಗ ಹಸ್ತಪ್ರತಿಗಳು ಬರುತ್ತಲಿವೆ. ಹೀಗೆ ಪ್ರಕಾಶನ ಯೋಜನೆ ಮೂರ್ತಸ್ವರೂಪ ತಾಳುತ್ತಲಿರುವುದನ್ನು ಕಂಡು ನನಗೆ ತುಂಬ ಸಂತೋಷವಾಗಿದೆ.

ವಿಜ್ಞಾನಸಹಿತವಾದ ಜ್ಞಾನವನ್ನು ಹರಡುವುದು ಈ ವಿಶ್ವವಿದ್ಯಾಲಯದ ಪ್ರಮುಖ ಕರ್ತವ್ಯಗಳಲ್ಲಿ ಒಂದಾಗಿದೆ. ಜ್ಞಾನವು ಅಪಾರವಾಗಿ ಬೆಳೆಯುತ್ತಿದೆ. ಯಾವೊಬ್ಬ ಜ್ಞಾನವಂತನು ಕೂಡ ತನ್ನ ಜ್ಞಾನಶಾಖೆಯಲ್ಲಿ ತನಗೆಲ್ಲ ತಿಳಿದಿದೆ ಎನ್ನುವಂತಿಲ್ಲ. ಇದರ ಜೊತೆಗೆ ಜನಸಾಮಾನ್ಯರಲ್ಲಿ ಜ್ಞಾನವನ್ನು ಪಡೆಯಬೇಕೆಂಬ ಲವಲವಿಕೆಯೂ ಹೆಚ್ಚುತ್ತಲಿದೆ. ಪ್ರಜಾಪ್ರಭುತ್ವದ ದಾರಿಯಲ್ಲಿ ಸ್ವತಂತ್ರ ಭಾರತವು ಮುನ್ನಡೆಯುತ್ತಿರುವಾಗ ಪ್ರತಿಯೊಬ್ಬ ಪ್ರಜೆಗೂ ತನಗೆ ಬೇಕಾದ ಜ್ಞಾನ

ವನ್ನು ದೊರಕಿಸಲು ಅವಕಾಶವಿರಬೇಕು. ಈ ಅವಕಾಶವನ್ನು ಜನಪ್ರಿಯವಾದ ಉಪನ್ಯಾಸ ಮತ್ತು ಪ್ರಕಟಣೆಗಳ ಮೂಲಕ ವಿಶ್ವವಿದ್ಯಾಲಯವು ಒದಗಿಸುತ್ತದೆ. ತಜ್ಞರು ಮಾತ್ರ ಅರಿತು ಕೊಳ್ಳುವ ವಿಜ್ಞಾನ ವಿಷಯಗಳು ಯಾವಾಗಲೂ ಇರುತ್ತವೆ. ಆದರೆ ತಜ್ಞರಲ್ಲದ ಅನಭಿಜ್ಞರು ಅರಿತುಕೊಳ್ಳಬಹುದಾದ ಅಂಶಗಳೂ ಇರುತ್ತವೆ. ಅವನ್ನು ಜನ ಸಾಮಾನ್ಯರ ಮನಸ್ಸಿಗೆ ಬೋಧೆಯಾಗುವಂತೆ ಸರಿಯಾದ ದೃಷ್ಟಾಂತಗಳಿಂದಲೂ ಸುಲಭ ಗ್ರಾಹ್ಯವಾದ ಶೈಲಿಯಿಂದಲೂ ತಿಳಿಹೇಳುವುದು ತಜ್ಞರ ಕರ್ತವ್ಯ ವಾಗಿದೆ. ಈ ಕರ್ತವ್ಯಪಾಲನೆಗೆ ಅತ್ಯಂತ ಉತ್ಸಾಹದಿಂದಲೂ ಶ್ರದ್ಧೆಯಿಂದಲೂ ತಜ್ಞರು ಮುಂದೆ ಬರುತ್ತಿದ್ದಾರೆ ಎಂಬುದು ಒಂದು ಶುಭ ಸೂಚನೆಯಾಗಿದೆ.

ಈ ಪ್ರಕಾಶನ ಯೋಜನೆಯಲ್ಲಿ ಮೊದಲಿನಿಂದಲೂ ಆಸಕ್ತಿ ವಹಿಸಿ ಇದಕ್ಕೆ ಅವಶ್ಯಕವಾದ ಎಲ್ಲ ಬಗೆಯ ಸಹಾಯ ಮತ್ತು ಪ್ರೋತ್ಸಾಹಗಳನ್ನು ನೀಡುತ್ತಿರುವ ಬೆಂಗಳೂರು ವಿಶ್ವವಿದ್ಯಾಲ ಯದ ಉಪಕುಲಪತಿಗಳಾದ ಡಾ|| ವಿ. ಕೃ. ಗೋಕಾಕರಿಗೆ ಪ್ರಚಾರೋಪನ್ಯಾಸ ಸಮಿತಿ ಅತ್ಯಂತ ಋಣಿಯಾಗಿದೆ. ಅದ ರಂತೆ ಆತ್ಮೀಯತೆಯಿಂದ ಈ ಕಾರ್ಯಕ್ಕೆ ನೆರವಾಗುತ್ತಿರುವ ಈ ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾದ ಶ್ರೀ ಪಿ. ಮಲ್ಲಿಕಾರ್ಜು ನಪ್ಪ ಅವರಿಗೂ ನಮ್ಮ ಹಾರ್ದಿಕ ಕೃತಜ್ಞತೆಗಳು ಸಲ್ಲುತ್ತವೆ.

'ಭಯ—ಸರಳ ವಿಶ್ಲೇಷಣೆ' ಈ ಕಿರುಹೊತ್ತಿಗೆಯನ್ನು ತುಂಬ ಶ್ರಮವಹಿಸಿ ಸುಲಭ ಮತ್ತು ಹೃದಯಂಗಮ ಶೈಲಿ ಯಲ್ಲಿ ಬರೆದು ಕೊಟ್ಟಿರುವ ಡಾ|| ಎಂ. ಶಿವರಾಂ ಅವರಿಗೆ

ಸಮಿತಿಯ ಪರವಾಗಿ ಮನಃಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ. ಇದನ್ನು ತ್ವರೆಯಿಂದ ಅಚ್ಚುಕಟ್ಟಾಗಿ ಮುದ್ರಿಸಿದ ಚೇತನಾ ಪ್ರಿಂಟರ್ಸ್ ಅವರಿಗೂ ನಾನು ಕೃತಜ್ಞನಾಗಿದ್ದೇನೆ.

ಬೆಂಗಳೂರು ವಿಶ್ವವಿದ್ಯಾಲಯ

ರಂ. ಶ್ರೀ. ಮುಗಳಿ
ಅಧ್ಯಕ್ಷರು,
ಪ್ರಚಾರೋಪನ್ಯಾಸ ಸಮಿತಿ.

೧೮-೬-೧೯೬೯

ಸೊ ಬಿಭೇತ್, ತಸ್ಮಾತ್ ಏಕಾಕೀ ಬಿಭೇತಿ
ಯನ್ಮದನ್ನನ್ನಾಸ್ತಿ ಕಸ್ಮಾತ್ ಬಿಭೇಮೀತಿ ತತ
ಏವಾಸ್ಯ ಭಯಂ ವೀವಾಯ
ದ್ವಿತೀಯಾದ್ವೈ ಭಯಂ ಭವಂತಿ

ಬೃಹದಾರಣ್ಯಕ ೧, ೪, ೨

(ಆತ್ಮನು ಹೆದರಿದನು. ನಾನೊಬ್ಬನೇ ಎಂದು ಹೆದರಿದನು
ಇನ್ನೊಬ್ಬರಿಲ್ಲ. ಅಂದಮೇಲೆ ಯಾರಿಂದ ಭಯ ಎನ್ನಿಸಿತು
ಆಗ ಭಯವು ನಿವಾರಣೆಯಾಯಿತು
ಎರಡನೆಯದು ಎಂದಾಗ ಭಯವು ಉಂಟಾಗುತ್ತದೆ)

ಭಯ

ಪರಿಚಯ ಪೂರ್ವಕ

ಗಂಟಲಿನಲ್ಲಿ ಕ್ಯಾನ್ಸರ್ ಬೆಳೆದು, ಕೀರ್ತಿಶೇಷ ಅಣ್ಣಾದೊರೈ ಅವರು, ನರಳಿ ನಿಧನರಾದರು. ತದನಂತರ ಒಂದು ತಿಂಗಳಿನಲ್ಲಿ, ಸುಮಾರು ನಲವತ್ತಕ್ಕೂ ಮಿಕ್ಕ ಮಧ್ಯವಯಸ್ಕರು, "ಯಾಕೋ ಗಂಟಲಲ್ಲಿ ಒಂದು ತರಹಾ ಆಗುತ್ತಾ ಇದೆ. ನುಂಗುವುದಕ್ಕೆ ಏನೂ ಬಾಧೆಯಾಗುಲ್ಲ, ಏನೂ ಇರಲಾರದು ಅಂತ ನನಗೂ ಗೊತ್ತು. ಆದರೂ, ಯಾಕೆ ಹೀಗಾಗುತ್ತೆ ಎಂದು ಪರೀಕ್ಷೆಮಾಡಿ ಹೇಳ್ತೀರಾ?" ಎಂದು ಪೀಠಿಕೆ ಹಾಕುತ್ತಾ ಪರೀಕ್ಷೆಗಾಗಿ ಬಂದಿದ್ದರು. ಸಾವಧಾನವಾಗಿ, ಅವರುಗಳಿಗೆ ನಂಬಿಕೆ ಬರುವಂತೆ, ಏನೇನೆಲ್ಲಾ ಪರೀಕ್ಷೆಗಳನ್ನು ಮಾಡಿ, ಪ್ರಯೋಗಗಳನ್ನು ಹೂಡಿ, "ಎಲ್ಲವೂ ಆರೋಗ್ಯವಾಗಿದೆ, ಇದು ಅಣ್ಣಾದೊರೈ ತರಹದ್ದಲ್ಲ" ಎಂದು ಹೇಳಿದಾಗ, ಅವರುಗಳ ಕಾತರದ ಮುಖವು ಹಗೂರಾಗುತ್ತಿತ್ತು. "ಆ ಭಯವೇನೂ ಇತ್ತಿಲ್ಲ ಡಾಕ್ಟರೇ! ಆದರೂ ಎಚ್ಚರಿಕೆಯಿಂದಿರಬೇಕು ಅಂತ ನೀವೇ ಹೇಳಲಿಲ್ಲವೇ? Prevention is better than cure; A stitch in time saves nine ಅಂತ" ಎಂದು ಜಾಣತನದಿಂದ ತಮ್ಮ ಮನಸ್ಸಿನಲ್ಲಿದ್ದ ಭಯುವನ್ನು ಮುಚ್ಚಿಡುತ್ತಿದ್ದರು. ಮುಚ್ಚಿಡಲು ಪ್ರಯತ್ನಿ

ಸುತ್ತಿದ್ದರು. ಕ್ಯಾನ್ಸರ್ ಭಯಾನಕವಾದ ರೋಗವೆಂಬುದು ದಿಟ. ಆದರೆ ಲಕ್ಷ ಜನರಲ್ಲಿ ಒಬ್ಬಿಬ್ಬರಿಗೆ ತಾಕುತ್ತದೆ. ಆದರೆ ಒಬ್ಬ ಕ್ಯಾನ್ಸರ್ ರೋಗಿಗೆ, ಕಡೆಯ ಪಕ್ಷ ನೂರು ಆರೋಗ್ಯವಾಗಿರುವವರು "ನನಗೂ ಕ್ಯಾನ್ಸರ್ ಬಂದಿದೆಯೇ?" ಎಂಬ ಭಯದಿಂದ ನರಳುತ್ತಾರೆ.

ಮನಸ್ಸಿನ ದುಗುಡದಿಂದ ಬ್ಲಡ್ ಪ್ರೆಷರ್ ಹೆಚ್ಚಾಗುತ್ತದೆ. ಜತೆವಯಸ್ಸಿನವನಿಗೆ ಬ್ಲಡ್ ಪ್ರೆಷರ್ ಖಾಯಿಲೆ ಬಂದಿದೆ ಎಂದು ತಿಳಿದಾಗ, ತನ್ನ ಬ್ಲಡ್ ಪ್ರೆಷರ್ ಕೂಡ ಭಯದಿಂದ ಸ್ವಲ್ಪ ಏರುತ್ತದೆ. ಆಗ ಪರೀಕ್ಷೆ ಮಾಡಿಸಿಕೊಂಡರೆ ಅವನ ಪ್ರೆಷರ್ ಸ್ವಲ್ಪ ಹೆಚ್ಚಾಗಿಯೇ ಇರುತ್ತದೆ. "ನನಗೂ ಈ ದರಿದ್ರ ಬೇನೆ ಬಂತು" ಎಂಬ ಕಾತರವು ಬ್ಲಡ್ ಪ್ರೆಷರನ್ನು ಏರಿಸಿಯೇ ಇಡುತ್ತದೆ. ಇದೊಂದು ವಿಷ ಚಕ್ರ. "ಕೇವಲ ಭಯದಿಂದ ಈ ಬೇನೆಯನ್ನು ಮೇಲೆ ಹಾಕಿಕೊಳ್ಳಬಹುದು" ಎಂದು ಸುಲಭವಾಗಿ ಸಿದ್ಧಾಂತ ಮಾಡಬಹುದು. ಬ್ಲಡ್ ಪ್ರೆಷರ್ ವ್ಯಾಧಿ ಬಂದು ಬಿಟ್ಟಿದೆ ಎನ್ನುವ ಭಯದಿಂದ ನರಳುವವರು ಸಾವಿರ ಜನರಿದ್ದರೆ, ಒಬ್ಬನು ಮಾತ್ರ ದಿಟವಾದ ಹೈ ಬ್ಲಡ್ ಪ್ರೆಷರ್ ಖಾಯಿಲೆಯಿಂದ ನರಳುತ್ತಾನೆ.

ಯಾಕೋ ಸುಸ್ತಾಗುತ್ತದೆ ಎಂದು ಬಳಲುತ್ತ ಬಂದಾಕೆಯನ್ನು ಪರೀಕ್ಷೆ ಮಾಡಿದ ನಂತರ "ಸ್ವಲ್ಪ ಕ್ಷಯದ ಚಿಹ್ನೆಗಳಿವೆ" ಎಂದು ಹೇಳಿ, "ಚಿಕಿತ್ಸೆಯನ್ನು ಮಾಡಿದರೆ ಮೂರು ತಿಂಗಳುಗಳಲ್ಲಿ ಪೂರ್ಣ ವಾಸಿಯಾಗುತ್ತದೆ" ಎಂದು ಭರವಸೆ

ಕೊಡುತ್ತೇವೆ. ಆದರೂ ಮೊದಲೆರಡು ವಾರಗಳಲ್ಲಿ ಆಕೆಯ ತೂಕವು ಗಮನೀಯವಾಗಿ ಕಡಿಮೆಯಾಗುತ್ತದೆ. ಆ ಬೇನೆಯು ಬಂದು ಗುಣವಾದವರನ್ನು ಸಾಕ್ಷಾತ್ ಕಂಡ ಮೇಲೆ, ಚಿಕಿತ್ಸೆಯು ಯಶಸ್ವಿಯಾಗುತ್ತದೆ. ತೂಕವು ಏರುತ್ತದೆ. ಕ್ಷಯದ ಭಯದಿಂದ ಮೊದಲೆರಡು ವಾರದಲ್ಲಿ ತೂಕವು ಇಳಿಯಿತು ಎಂದು ಧೈರ್ಯವಾಗಿ ಹೇಳಬಹುದು.

ಅಂದರೆ ರೋಗದ ಭಯವು, ಎಷ್ಟೋ ಬಾರಿ ರೋಗಕ್ಕಿಂತಲೂ ಮಿಗಿಲಾಗಿ ಮನುಷ್ಯನನ್ನು ನರಳಿಸುತ್ತದೆ. ಸಂಕಟಪಡಿಸುತ್ತದೆ. ಭಯದ ಭಯಂಕರ ಪರಿಣಾಮಗಳಲ್ಲಿ, ವಿನಾಕಾರಣ ನರಳಿಸುವುದೂ, ಮುಖ್ಯವಾದುದು.

ಸೊಟ್ಟಗಾಗಿದ್ದ ಗುಂಡು ಸೂಜಿಯನ್ನು ಶ್ರೀಮಂತ ಯುವಕನೊಬ್ಬ ಆಕಸ್ಮಿಕವಾಗಿ ನುಂಗಿದ. ಅಂತಹ ಸೂಜಿಯು ಕರುಳಿನಲ್ಲಿ ಎಲ್ಲಿಯಾದರೂ ಚುಚ್ಚಿಕೊಂಡರೆ, ನಂತರ ತಾಪತ್ರಯಗಳು ಬಹಳ. ಶಸ್ತ್ರಚಿಕಿತ್ಸೆಯು ಅಗತ್ಯವಾಗಬಹುದು. ಪ್ರಾಣಾಪಾಯವೂ ಉಂಟು. ಆರು ಗಂಟೆಗಳಿಗೊಮ್ಮೆ X ray ಗಳನ್ನು ತೆಗೆಸುತ್ತಾ, ಮಲವಿಸರ್ಜನೆಯನ್ನು ಮಾಡಿದಾಗ, ಗುಂಡುಸೂಜಿ ಬಿದ್ದಿತೇ ಎಂದು ಪರೀಕ್ಷಿಸು ಎಂದು ಎಚ್ಚರಿಕೆ ಕೊಟ್ಟೆ. ನಾಲ್ಕನೆಯ X ray ಫೋಟೋದಲ್ಲಿ ಗುಂಡು ಸೂಜಿಯು ಕಾಣಿಸಲಿಲ್ಲ. ಅಂದರೆ ವಿಸರ್ಜನೆಯಾಗಿರಲೇಬೇಕು. “ ಮಲವನ್ನು ನೀರು ಹಾಕಿ ತೊಳೆದು ಗುಂಡು ಸೂಜಿ ಇತ್ತೇ, ನೋಡಿದೆಯಾ ” ಎಂದು ಕೇಳಿದೆ. “ ಆದ

ನ್ನೆಲ್ಲಾ ಯಾರು ಪರೀಕ್ಷೆ ಮಾಡ್ತಾರೆ, ಡಾಕ್ಟರ್! ಇದ್ದರೆ ಇರುತ್ತೆ ಹೋದರೆ ಹೋಗುತ್ತೆ. X ray ನಲ್ಲಿ ಹೇಗೂ ಕಾಣಿ ಸುತ್ತಲ್ಲ!" ಎಂದು ಯಾವ ಆತಂಕವೂ ಇಲ್ಲದೆ ಅವ ಹೇಳಿದ.

ಯಾವ ಭಯವೂ ಇತ್ತಿಲ್ಲ ಅವನಿಗೆ. ಗುಂಡು ಸೂಜಿಯು ಮಲದಲ್ಲಿ ಬೀಳುತ್ತದೆ. ಮಸಲಾ ಕರುಳಿಗೆ ಸಿಕ್ಕಿಕೊಂಡರೆ, ಆಪರೇಷನ್ ಮಾಡಿ ತೆಗೆಯುತ್ತಾರೆ ಎಂದು ಅವನ ಧೈರ್ಯ. ಆ ಧೈರ್ಯದಿಂದಲೇ ಅವನ ಕರುಳುಗಳೂ ತಮ್ಮ ಪಾಡಿಗೆ ಸುಗಮವಾಗಿ ಕೆಲಸಮಾಡಿ, ಗುಂಡುಸೂಜಿಯನ್ನು ಹೊರಗೆ ಹಾಕಿತ್ತು. ಅವನೇನಾದರೂ ಭಯದ ಪ್ರಕೃತಿಯವನಾಗಿದ್ದರೆ ಏನಾಗಿ ಬಿಡುತ್ತೋ ಎಂಬ ಹೆದರಿಕೆಯು ಅವನ ಕರುಳನ್ನೂ ಕಿವಿಚುತ್ತಿತ್ತು. ಆಗ ಸೊಟ್ಟ ಸೂಜಿಯು ಕರುಳಿಗೆ ನೆಟ್ಟಿ ಕೊಳ್ಳುತ್ತಲೂ ಇತ್ತು.

ಅಂದರೆ "ಭಯ"ವಿರದಿದ್ದವರು, ದುಷ್ಪರಿಣಾಮವಾಗ ಬಹುದಾದ ಬೇನೆಗಳು ಬಂದರೂ, ಸುಲಭವಾಗಿ ಗುಣ ಹೊಂದ ಬಹುದು, ಎಂದು ನಿರ್ಧಾರ ಮಾಡಿದಂತಾಯಿತು.

ಮನುಷ್ಯನ ಬಾಳಿನಲ್ಲಿ, ಭಯವು ಈ ರೀತಿ, ಬೇನೆಗಿಂತಲೂ ಹೆಚ್ಚು ಕಷ್ಟ ಕೊಡಬಹುದು. ಬೇನೆಯ ಶಾಸ್ತ್ರೀಯ ಚಿಕಿತ್ಸೆಯು ಯಶಸ್ವಿಯಾಗದಂತೆ ಪರಿಣಾಮವನ್ನು ಮಾಡಬಹುದು. ಹಾಗೂ "ಭಯ"ವಿಲ್ಲದಿದ್ದರೆ, ಸಂಭವಿಸಬಹುದಾದ ದುಷ್ಪರಿ

ಣಾಮಗಳನ್ನು ತಪ್ಪಿಸಲೂ ಸಾಧ್ಯ; ಎಂಬ ಮೂರು ಮುಖ್ಯ ವಿಷಯಗಳನ್ನು ಪ್ರತಿಯೊಬ್ಬ ಡಾಕ್ಟರೂ ಕಲಿಯುತ್ತಾನೆ.

ಕಾರಣ "ಭಯ" ಎಂದರೇನು? ಇದರ ಅಗತ್ಯವಿದೆಯೇ? ದೇವರು ಇದನ್ನು ಯಾಕೆ ನಿರ್ಮಿಸಿದ? ಇದನ್ನು ನಿವಾರಿಸಿಕೊಳ್ಳುವುದು ಹೇಗೆ? ಇವನ್ನು ಕುರಿತು ವಿಶ್ಲೇಷಣೆ ನಡಸಿದರೆ, "ಭಯ" ಪರಿಹಾರವನ್ನು ಮಾಡಿಕೊಳ್ಳಲು ಅನುಕೂಲವಾಗಬಹುದು.

ಅಂತಹ ವಿಶ್ಲೇಷಣೆಯೇ, ಈ ಕಿರುಹೊತ್ತಗೆಯ ಧ್ಯೇಯ.

೧

ಭಯ ಎಂದರೇನು ? ಎಲ್ಲರ ಅನುಭವದಲ್ಲಿ ಕಂಡುಬಂದ ಈ "ಭಯ"ವನ್ನು ವಿವರಿಸುವುದು ಸ್ವಲ್ಪ ಕಷ್ಟವೇ !

ಇದೊಂದು ರೀತಿಯ ಮಾನಸಿಕ ಅವಸ್ಥೆ, ಒಂದು ತೆರನ ಮನಸ್ಸಿನ ಸ್ಥಿತಿ. ಇಂತಹ ಸ್ಥಿತಿಯಲ್ಲಿ ಮನಸ್ಸಿಗೆ ನೆಮ್ಮದಿ ಇರುವುದಿಲ್ಲ. ಕಾತರ, ಆತಂಕ, ದುಗುಡ, ಚಪಲತೆಗಳು ಮನಸ್ಸನ್ನು ಕದಡಿ ಕಾಡುತ್ತವೆ.

ಪ್ರಕೃತಿಯಲ್ಲಿ ಎಲ್ಲ ಪ್ರಾಣಿಗಳಲ್ಲಿಯೂ ಭಯವನ್ನು ಕಾಣಬಹುದು. ಹಸಿವು, ದಾಹ, ಕಾಮಗಳಂತೆ ಭಯವೂ ಪ್ರಾಣಿಗಳಲ್ಲಿರುವ ಹುಟ್ಟುಗುಣ. Instincts ಎಂಬ ಈ ಹುಟ್ಟುಗುಣಗಳು, ಜನ್ಮತಾಳಿದಾಗಲೇ ಆಳ ಮನಸ್ಸಿನಲ್ಲಿ ಸ್ಥಾಪಿತವಾಗಿರುತ್ತವೆ.

ಸಹ-ಜ-ವಾದ, ಹುಟ್ಟುವಾಗಲೇ ಜತೆಯಲ್ಲಿ ಬಂದ ಈ instincts ಗಳು, ಸಾಫಲ್ಯಪಡೆಯಲು, ಹಾಗೂ ಈಡೇರಿಸಿಕೊಳ್ಳಲೋಸುಗ, ಮನೋವಿಕಾರಗಳನ್ನು ಉತ್ಪಾದಿಸುತ್ತವೆ. ಇಂತಹ ಮನೋವಿಕಾರಗಳನ್ನು ರಾಗಗಳು ಭಾವಗಳು (emotions) ಎಂದು ಕರೆಯುತ್ತಾರೆ. ಜನ್ಮತಾಳಿದನಂತರ ಮಾನವನು ರೂಢಿಸಿಕೊಂಡ ಮಾನಸಿಕ ಪ್ರತಿಕ್ರಿಯೆಗಳನ್ನು ಮನೋಭಾವಗಳು, (emotions) ಎಂದು ಕರೆಯಬೇಕು.

ಹುಟ್ಟಿದಕೂಡಲೇ ಮಗುವು ಅಳುತ್ತದೆ. ತಾಯಿಯ ಗರ್ಭದಲ್ಲಿದ್ದಾಗ ಮಗುವಿನ ಶ್ವಾಸಕೋಶಗಳಿಗೆ ಉಸಿರಾಡುವ ಕೆಲಸವಿರಲಿಲ್ಲ. ಆದರೆ ಹುಟ್ಟಿದ ಮೇಲೆ ಉಸಿರಾಡಬೇಕು. ಅಳುವುದರಿಂದ, ಅಳುವಿನಹಾಗೆ ಉಸಿರನ್ನು ಬಿಕ್ಕಿ ಬಿಕ್ಕಿಸುವುದರಿಂದ, ಮಗುವಿನ ಶ್ವಾಸಕೋಶಗಳಿಗೆ ಗಾಳಿಯು ಪ್ರವೇಶಿಸುತ್ತದೆ. ಶ್ವಾಸಕೋಶಗಳಿಗೆ ಗಾಳಿಯನ್ನು ತುಂಬುವುದನ್ನು ಕಲಿಸಲು ಪ್ರಕೃತಿಯು ರಚಿಸಿದ ಉಪಾಯವೆಂದರೆ, ಅಳುವುದು. ಮಗುವು ಬೆಳೆದಮೇಲೆ ಅಳುವಿನ ಉಪಾಯವನ್ನು ಉಪಯೋಗಿಸಿಕೊಂಡು, ತಾಯಿಯಿಂದ ಆಗತ್ಯವಾದ ಆಹಾರವನ್ನು ಹೊಟ್ಟೆಗೆ ತುಂಬಿಕೊಳ್ಳುತ್ತದೆ. ಹೊಟ್ಟೆಯು ತುಂಬಿದಮೇಲೆ ಮನಸ್ಸು ಸಂತೃಪ್ತಿಯನ್ನು ಹೊಂದಿದಾಗ, ಮಗುವು ನಗುತ್ತದೆ. ಮನಮೋಹಕವಾದ ಶಿಶುವಿನ ನಗುವು ತಾಯಿ ಮಗುವಿನ ಬಂಧನವನ್ನು ಭದ್ರಗೊಳಿಸುತ್ತದೆ.

ಆದರೆ ಮಾನವ ಮಕ್ಕಳು ಮಾತ್ರ ಅಳು, ನಗುಗಳನ್ನು ಹೂಡುವುದು. ಇತರ ಪ್ರಾಣಿಗಳಾವುವೂ ನಗುವುದೂ ಇಲ್ಲ, ಅಳುವುದೂ ಇಲ್ಲ. ಅಂದರೆ ಪ್ರಕೃತಿಯು ಜೀವನದ ಪ್ರಗತಿಯಲ್ಲಿ ಮಾನವನ ಹಂತಕ್ಕೆ ಬಂದಾಗ, ಹುಟ್ಟುಗುಣಗಳ ಪೂರೈಕೆಗಾಗಿ, ಮಿದುಳು, ಮನೋಭಾವಗಳನ್ನು (emotions) ರಚಿಸಿ ರೂಢಿಸಿಕೊಂಡಿತು ಎನ್ನಬಹುದು.

ಮಗುವು ಅತ್ತಾಗ ಕೂಡಲೇ ಹಾಲು ದೊರೆಯದೆ ಇದ್ದರೆ, ಮಗುವಿಗೆ ಕೋಪ ಬರುತ್ತದೆ. ಕೋಪದಿಂದ ಸುತ್ತುಮುತ್ತ

ಲಿನ ಬಟ್ಟೆಗಳನ್ನು ಎಳೆದು ಹರಿದು ಬಿಸಾಡಲು ಪ್ರಯತ್ನಿಸುತ್ತದೆ. ಈ ತೆರನ ಕೋಪ ಪ್ರದರ್ಶನವು ಜನ್ಮತಾಳಿದಾಗಲೇ ಮಗುವಿಗೆ "ಸಹ-ಜ"ವಾಗಿರುತ್ತದೆ. ಈ ತೆರನ ಸಹಜ ಕೋಪ ಪ್ರದರ್ಶನವನ್ನು ಎಲ್ಲ ಪ್ರಾಣಿಗಳಲ್ಲಿಯೂ ಕಾಣಬಹುದು. ಕೋಪವೂ rage ಒಂದು ಮನೋಭಾವವೇ, ಆದರೆ ಇದು ರೂಢಿಸಿಕೊಂಡ ಮೆದುಳಿನ ಪ್ರತಿಕ್ರಿಯೆಯಲ್ಲ! ಹುಟ್ಟುಗುಣಗಳಾದ instincts ನಂತೆ rage ಪ್ರದರ್ಶನವೂ ಆಜನ್ಮಸಿದ್ಧವಾದುದು.

ಮನೋಭಾವಗಳು-ರಾಗಗಳು-ಹಲವಾರು ತೆರನಾದವು. ಸುಖ, ದುಃಖ; ಪ್ರೇಮ, ದ್ವೇಷ; ನಿರ್ಲಜ್ಜೆ, ನಾಚಿಕೆ; ಕರುಣೆ, ಕ್ರೂರ; ಹುಟ್ಟಿದಮೇಲೆ ಬಾಳಿನ ಅನುಭವದಿಂದ ರೂಢಿಸಿಕೊಳ್ಳುವ ಮನೋವಿಕಾರಗಳು ಇವು, ದ್ವಂದ್ವಾ ಸ್ವರೂಪವುಳ್ಳವುಗಳು. ಇಂತಹ ಮನೋಭಾವಗಳಿಗೆ, ಮನಸ್ಸಿನಲ್ಲಿರುವ ಹುಟ್ಟುಗುಣಗಳಾದ ಆಹಾರ, ನಿದ್ರಾ, ಭಯ, ಕಾಮಗಳು ಪ್ರೇರಕಗಳಾಗುತ್ತವೆ. ತೋರ ಮನಸ್ಸಿನಲ್ಲಿ ವಿಚಿತ್ರ ರೂಪುಗಳನ್ನು ಹೊಂದುತ್ತವೆ.

ಹುಟ್ಟುಗುಣವಾದ ಹಸಿವನ್ನು ಪೂರೈಸಲೋಸುಗ, ಭಿಕ್ಷೆಗೆ ಅಗತ್ಯವಾದ, ಅಭಿಮಾನಶೂನ್ಯತೆಯ ಕುರುಹಾದ ದೈನ್ಯ ಮನೋಭಾವವನ್ನು ಹೊಂದಬಹುದು. ಅಥವಾ ಹೋರಾಡಿ ಅನ್ನ ಸಂಪಾದಿಸುವ ಶೌರ್ಯ ಮನೋಭಾವವನ್ನು ಹೊಂದಬಹುದು. ಕಾಮ ಪೂರೈಕೆಗಾಗಿ ಲಜ್ಜೆ, ನಾಚಿಕೆ, ಭಯ

ಎಲ್ಲವನ್ನೂ ತೊರೆದು, ಮಾನ, ಅವಮಾನ ಎನ್ನುವುದನ್ನು ಲಕ್ಷಿಸದೆ, ಏಕಾಗ್ರಚಿತ್ತತೆಯ ಶೌರ್ಯಮನೋಭಾವವನ್ನು ಕಾಣಿಸಬಹುದು ಅಥವಾ ದ್ವೇಷ ಮನೋಭಾವವನ್ನು ವಿಫಲನಾದಾಗ ಬೆಳೆಸಿಕೊಳ್ಳಬಹುದು.

ಅಂದರೆ ಮಾನವನ ಹುಟ್ಟುಗುಣಗಳಲ್ಲಿ ಭಯವು ಮುಖ್ಯವಾದುದೊಂದು. ಈ ಹುಟ್ಟುಗುಣವು ಚಿತ್ರ ವಿಚಿತ್ರ, ದ್ವಂದ್ವಾತ್ಮಕವಾದ ಮನೋಭಾವಗಳನ್ನು ಕಾಣಿಸಬಲ್ಲುದು ಎಂದಂತಾಯಿತು.

ಮೊದಲೇ ಸೂಚಿಸಿದಂತೆ ಭಯವು ಮನಸ್ಸಿನ ಆಳದಲ್ಲಿದ್ದು ಅದನ್ನು ಸಮಾಜದಿಂದ ಮುಚ್ಚಿಡುವುದಕ್ಕೋಸ್ಕರ, ಮನುಷ್ಯನು ತೋರ ಮನಸ್ಸಿನಲ್ಲಿ ಶೌರ್ಯವನ್ನು ಪ್ರದರ್ಶಿಸುತ್ತಾನೆ. ಉತ್ತರಕುಮಾರನಂತೆ. ಸಮಾಜದಲ್ಲಿ "ಹೇಡಿ" ಎಂದರೆ ಮೂದಲಿಕೆಗೆ ಗುರಿಯಾದ ವ್ಯಕ್ತಿ. "ಧೀರ" ಎಂದರೆ ಮನ್ನಣೆಗೆ ಪಾತ್ರನಾದವ. ಮೂದಲಿಕೆಗೆ ಗುರಿಯಾಗಲು ಯಾರು ಬಯಸುತ್ತಾರೆ? ಮನ್ನಣೆಯು ಬೇಡವೆಂದು ಯಾರು ಒಪ್ಪಿಕೊಳ್ಳುತ್ತಾರೆ? ಆದಕಾರಣ ಆಳ ಮನಸ್ಸಿನಲ್ಲಿ ಹೇಡಿತನವಿದ್ದರೆ ತೋರ ಮನಸ್ಸಿನಲ್ಲಿ ಪರಮ ಶೌರ್ಯ ಪ್ರದರ್ಶನವನ್ನು ಪ್ರದರ್ಶಿಸಲು ಯತ್ನಿಸುತ್ತಾನೆ.

ಅದೇ ರೀತಿಯಲ್ಲಿ ಆಳ ಮನಸ್ಸಿನಲ್ಲಿ ಧೈರ್ಯವಿದ್ದವನು, ತೋರ ಮನಸ್ಸಿನಲ್ಲಿ ಯಾವ ಬೂಟಾಟಿಕೆಯನ್ನೂ ಪ್ರದರ್ಶಿಸ

ಬೇಕಾಗಿಲ್ಲ. ಕಾರಣ ತೋರಮನಸ್ಸಿನಲ್ಲಿ ಭಯವಾದರೆ, ಭಯವಾಯಿತು ಎಂದು ಹೇಳಿಕೊಳ್ಳುತ್ತಾನೆ. ಸಮಾಜವು ತನ್ನ ಭಯವನ್ನು ಕಂಡು ಮೂದಲಿಸುತ್ತದೆ ಎಂಬ ಭಯವೂ ಅವನಿಗಿರುವುದಿಲ್ಲ. ಏಕೆಂದರೆ ಆಳಮನಸ್ಸಿನಲ್ಲಿ ಆಧ್ಯಾತ್ಮಿಕ ಆರೋಗ್ಯವು ತೃಪ್ತಿಕರವಾಗಿರುವುದದಿಂದ ಎಂತಹ ಸಂಕಟವೇ ಬರಲಿ, ವೆಂಟಕರಮಣನು ಕೈ ಹಿಡಿದು ನಡಸುತ್ತಾನೆ ಎಂಬ ಧೈರ್ಯವಿರುತ್ತದೆ.

ಈ ನೀತಿಯ ನಿದರ್ಶನವನ್ನು ನಮ್ಮ ಮನೆಗಳಲ್ಲಿ ಕಾಣಬಹುದು. "ಕಳ್ಳ ಬಂದುಬಿಡ್ತಾನೆ ಏನು ಮಾಡೋದು? ಮಂಕುಬೂದಿ ಎರಚುವವನು ಬಂದರೆ ನನ್ನಗತಿ ಏನಪ್ಪಾ? ಆರತಕ್ಷತೆ ಇಟ್ಟುಕೊಂಡಿದ್ದೀನಿ ಆ ಸಂಜೆ ಮಳೆ ಬಂದುಬಿಟ್ಟರೆ ಹೇಗಪ್ಪಾ?" ಎಂದು ಭಯವನ್ನು ನಿರ್ಲಜ್ಜೆಯಿಂದ ತೋರಿಸುವ ಹಿಂದೂ ಹೆಂಗಸು, ಗಂಡನಿಗೋ ಮಗುವಿಗೋ ನಿಶಿರಾತ್ರಿಯಲ್ಲಿ ಖಾಯಿಲೆಯು ಉಲ್ಬಣಗೊಂಡರೆ ಡಾಕ್ಟರ ಮನೆಗೆ ಒಬ್ಬಳೇ, ದೆವ್ವ ಪಿಶಾಚಿಗಳ ಭಯವಿಲ್ಲದೆ, ಕಳ್ಳಕಾಕರ ಹೆದರಿಕೆಯಿಲ್ಲದೆ ನಡೆದು ಹೋಗಿ, ನೆರವು ಮತ್ತು ಸಹಾಯವನ್ನು ಪಡೆಯುತ್ತಾಳೆ. ಅವ್ಯಕ್ತವಾದ ಆಧ್ಯಾತ್ಮಿಕ ಆರೋಗ್ಯದಿಂದ ಆಕೆ ಆಳಮನಸ್ಸಿನ ಹೇಡಿತನವನ್ನು ನಿವಾರಿಸಿಕೊಂಡಿರುತ್ತಾಳೆ. ತೋರಮನಸ್ಸಿನಲ್ಲಿ ಭಯವನ್ನು ಹೇಳಿಕೊಳ್ಳಲು ಆಕೆ ನಾಚಿಕೆ ಪಡುವುದಿಲ್ಲ. ಇಂತಹ ಹಗುರು ಭಯವನ್ನು ಆಕೆ ಶೃಂಗಾರದ ಸಲಕರಣೆಯನ್ನಾಗಿ ಪರಿವರ್ತಿಸಿಕೊಳ್ಳುವುದೂ ಉಂಟು. ವಿಚಾ

ರವನ್ನುಮಾಡಿ ಅಲ್ಲ. Instinctively ಸಹಜ ಸ್ವಭಾವದಿಂದ, ಹುಟ್ಟುಗುಣದಿಂದ.

ತೋರ ಮನಸ್ಸಿನಲ್ಲಿ ಕಾಣಬರುವ ಭಯವು ಬಾಳಿನ ಅನುಭವದಿಂದ ರೂಢಿತವಾದುದು-"Conditioned reflex" ಈ ವಿಷಯವನ್ನು ನಿದರ್ಶನಗಳೊಂದಿಗೆ ಮುಂದೆ ವಿವರಿಸಲಾಗುವುದು.

ಆಳ ಮನಸ್ಸಿನ ಭಯವು (instinctive) ಹುಟ್ಟುಗುಣ. ಇದು ಮೂರು ವಿಧಾನಗಳಲ್ಲಿ ವ್ಯಕ್ತವಾಗಬಹುದು.

೧ ದೇಹದಲ್ಲಿ ನಡೆಯುವ ಅಗತ್ಯ ಕಾರ್ಯಗಳು ಮನಸ್ಸಿನ ನೇರ ಹತೋಟಿಗೆ ಹೊರತಾದುವು. The wisdom of the body ಎಂದು ಕ್ಯಾನನ್ ಮಹಾ ವಿಜ್ಞಾನಿಯು ಸಿದ್ಧಾಂತ ಪಡಿಸಿದಂತೆ, ದೇಹವು ಅತಿ ಜಾಣತನದಿಂದ, ತನ್ನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುತ್ತದೆ. ಅಂತಹ ಕಾರ್ಯಕ್ರಮಗಳಲ್ಲಿ ಮೂಲಭೂತವಾದ ಅವ್ಯವಸ್ಥೆ ಉಂಟಾದರೆ ಆಗ ಮನಸ್ಸಿನಲ್ಲಿ ತೀವ್ರ ಭಯವು ತಲೆದೋರುತ್ತದೆ.

ಉದಾಹರಣೆ.—ರಕ್ತ ಸಂಚಾರದ ಅಡಚಣೆಯು ಹೃದಯಕ್ಕೆ ಬಡಿಯಿತು ಎನ್ನಿ. Heart attack ಅನ್ನುತ್ತಾರಲ್ಲ ಅದು. ಆಗ 'Fear of impending death' ಸಾವಿನ ತೀವ್ರ ಭಯವು ಅಂತಹವನನ್ನು ಆವರಿಸಿ ಮುತ್ತುತ್ತದೆ. ಸಾವಿನ ಭಯವು ಏಕೆ ಬಂತು ಎಂಬುದು ಅವನಿಗೆ ತಿಳಿಯುವು

ದಿಲ್ಲ. ಆದರೆ ಆ ಘೋರ ಭಯದಿಂದ ಅವ ವಿಹ್ವಲನಾಗುತ್ತಾನೆ. ನಿಃಶ್ಚೇತನನಾಗುತ್ತಾನೆ.

ಅದೇ ರೀತಿಯಲ್ಲಿ ಕೆಲವು ವೇಳೆ ಇನ್‌ಜಕ್ಷನ್ನುಗಳನ್ನು ತೆಗೆದುಕೊಂಡಾಗ anaphylactic reaction ಆಗುತ್ತದೆ. ಆಗಲೂ ರೋಗಿಯು ಹೇಗೆ ಹೇಗೋ ಆಗುತ್ತೆ ಎಂದು ಅತಿ ಭಯದಿಂದ ಮುತ್ತಲ್ಪಟ್ಟು ಅತಿ ಕಾತರನಾಗುತ್ತಾನೆ. ಆಗ ಚುಚ್ಚಲ್ಪಟ್ಟ ವಸ್ತುವು ದೇಹಕ್ಕೆ ಆ ಕಾಲದಲ್ಲಿ ವಿಷವಾಗಿರುತ್ತದೆ. ಅಂತಹ ವಿಷವನ್ನು ನಿವಾರಿಸಲು ದೇಹವು ಅತಿ ಜರೂರಾದ ರಾಸಾಯನಿಕ ಹಾಗೂ ಭೌತಿಕ, ಕಾರ್ಯಕ್ರಮಗಳನ್ನು ಏರ್ಪಡಿಸುತ್ತದೆ. ಸಾಮಾನ್ಯವಾದ ಮಿಕ್ಕ ದೇಹದ ಕಾರ್ಯಕ್ರಮಗಳು ಆಗ ಸ್ತಭ್ಧವಾಗಿರುತ್ತದೆ. ಮನೆಯಲ್ಲಿ ಚೇಳು ಕಾಣಿಸಿಕೊಂಡರೆ ಅದರ ಸಂಹಾರಕ್ಕೆ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಾರೆಯೇ ವಿನಾ, ಸೊಳ್ಳೆ ಗುಂಯ್‌ಗುಡುತ್ತಿದೆ ಎಂದು ಅದರ ಶಿಕಾರಿಯನ್ನು ಕೈಗೊಳ್ಳುತ್ತಾರೆಯೇ ?

ಅಂದರೆ Internal homeostasis ದೇಹದ ಒಳಗಿನ ಸಮಾಧಾನ ಸ್ಥಿತಿಯು ಅಪಘಾತಕ್ಕೀಡಾದಾಗ ಸಾವಿನ ಭಯವು ಘೋರ ರೂಪದಲ್ಲಿ ಮುತ್ತಿಕೊಳ್ಳುತ್ತದೆ.

೨ ತಂದೆಯು ಅಕಸ್ಮಾತ್ ಸತ್ತುಹೋದರೆ, ಆ ಕ್ಷಣದಲ್ಲಿ, ಆ ಕಾಲದಲ್ಲಿ ಐದಾರು ಸಾವಿರ ಮೈಲು ದೂರದಲ್ಲಿರುವ ಮಗನಿಗೆ ಎಂತದೋ ಭಯವೂ ಆತಂಕವೂ ಉಂಟಾಗುತ್ತದೆ.

ಯಾಕೆ ಈ ರೀತಿ ಭಯವಾಗುತ್ತಿದೆ ಎಂದು ತಿಳಿಯದೆ ಅವ ವಿಹ್ವಲನಾಗುತ್ತಾನೆ. ಮೂರು ದಿನಗಳ ನಂತರ ಅದೇ ಹೊತ್ತಿನಲ್ಲಿ ತಂದೆಯು ನಿಧನನಾದುದು ಕೇಬಲ್ ಮೂಲಕ ತಿಳಿದಾಗ, ಈ ಕಾರಣದಿಂದ ಮೂರು ದಿನಗಳ ಹಿಂದೆ ಹಾಗೆ ಒದ್ದಾಡಿದೆ ಎನ್ನುವುದು ತಿಳಿಯುತ್ತದೆ. ವಿರಳವಾದರೂ ಸಾಕಷ್ಟು ಇಂತಹ ನಿದರ್ಶನಗಳಿಂದ, telepathic communication ಇಂದ ದುಃಖದ ಸುದ್ದಿಯು ತತ್‌ಕ್ಷಣ ಮುಟ್ಟಿತು. ಕಾರಣ ತಿಳಿಯದೆ ಇದ್ದುದರಿಂದ, ಅಜ್ಞಾನದಿಂದ, ಭಯವು ಬಂತು ಎನ್ನಬಹುದು.

೩. ತೋರ ಮನಸ್ಸಿನಲ್ಲಿ ಸುಖ ಸಂತೋಷಗಳನ್ನು ಸಮೃದ್ಧಿಯಾಗಿ ಅನುಭವಿಸುತ್ತಿರುವಾಗ, ಇಂತಹ ಸುಖ ಸಂತೋಷಗಳು ತಾತ್ಕಾಲಿಕ ಎಂಬ ಅರಿವು ಆಳ ಮನಸ್ಸಿನಲ್ಲಿ ಹೆಡೆಯೆತ್ತುತ್ತದೆ. ಆಗ ಆಳಮನಸ್ಸಿನಲ್ಲಿ ಭಯವಾಗುತ್ತದೆ. ಮಧುಚಂದ್ರ ವಿಹಾರಕ್ಕೆ ಹೋದ ಯೌವ್ವನ ಮತ್ತು ಸಂಪತ್ ಸಮೃದ್ಧಿ ಇದ್ದ ಜತೆಗೂ ಈ ಭಯವು ಆಳ ಮನಸ್ಸಿನ ಪದರಗಳಲ್ಲಿ ಕುಟುಕಲಾರಂಭಿಸುತ್ತದೆ. ಕ್ಷುಲ್ಲ ಕಾರಣಗಳಿಗಾಗಿ ಜಗಳವಾಡುವುದು, ವಿನಾಕಾರಣ ಮನಃಸ್ತಾಪ ಉಂಟಾಗುವುದೂ, ಆಳಮನಸ್ಸಿನ ಪದರಗಳಲ್ಲಿರುವ ಈ ಭಯದಿಂದಲೇ ! ಆದಿದೈಹಿಕ(ab-original) ಆದ ಅಮರ ಸಂಭ್ರಮದಲ್ಲಿ ಆಧ್ಯಾತ್ಮಿಕ ಅರಿವು ಭಯದ ಮೂಲಕ ಈ ಎಚ್ಚರಿಕೆಯನ್ನು ಕೊಡುತ್ತದೆ.

೨

ಭಯದ ಲಕ್ಷಣಗಳು

ಭಯದಿಂದ ಆವೃತನಾದವನು ಕೆಲವು ನರಳುವಿಕೆಗಳನ್ನು ಪಟ್ಟಿ ಮಾಡಿ ಹೇಳುತ್ತಾನೆ. ಹೇಳಿದ್ದನ್ನೇ ಮರಳಿ ಮರಳಿ ಹೇಳುತ್ತಾನೆ.

"ಎದೆ ಹೊಡೆದುಕೊಳ್ಳುತ್ತೆ. ಡಬ ಡಬ ಅಂತ ತಬಲ ಬಾರಿಸಿದ ಹಾಗೆ."

"ಉಸಿರು ಸಿಕ್ಕಿ ಹಾಕಿಕೊಳ್ಳುತ್ತೆ, ಸಾರ್! ಮೇಲುಸಿರು ಮೇಲೆ, ಕೆಳಗಿನ ಉಸಿರು ಕೆಳಗೇ ನಿಂತು ಬಿಡುತ್ತೆ, ಡಾಕ್ಟರೇ."

"ಕಟ್ಟು ಬೆವರು ಸುರಿದು ಹೋಗುತ್ತೆ, ಡಾಕ್ಟರೇ!"

"ಜಂಘಾ ಬಲ ಉಡುಗಿ ಹೋಗುತ್ತೆ. ಕುಸಿದು ಕೂತುಕೊಳ್ಳುವ ಹಾಗಾಗುತ್ತೆ. ಸೊಂಟವೇ ಸಡಿಲವಾದ ಹಾಗಾಗುತ್ತೆ."

"ಹೇಗೆ ಹೇಗೋ ಆಗುತ್ತೆ. ಮುಖ್ಯ ನೆಮ್ಮದಿ ಇಲ್ಲ. ಕೂತರೆ ನಿಲ್ಲೋ ಹಾಗೆ ಆಗುತ್ತೆ, ಎಲ್ಲಿಯಾದರೂ ಓಡಿ ಹೋಗಲೇ ಎನ್ನಿಸುತ್ತೆ."

ಅಂತಹ ಭಯ ಗ್ರಸ್ತನನ್ನು ನೋಡಿದವರು ಕೆಳಕಂಡ ಚಿಹ್ನೆಗಳನ್ನು ಕಾಣುತ್ತಾರೆ:—

ಬೇಗ ಬೇಗ ಮೇಲೆ ಮೇಲೆ ಉಸಿರಾಡುತ್ತಿರುತ್ತಾನೆ. ಮಧ್ಯೆ ಮಧ್ಯೆ ನಿಟ್ಟುಸಿರು ಬಿಟ್ಟು ಹುಶ್ಶಪ್ಪ ಎನ್ನುತ್ತಾನೆ.

ಅವನ ಕಣ್ಣುಗಳು ಬಲು ಚಂಚಲವಾಗಿ ಬಿರು ಬಿರು ನೋಡುತ್ತವೆ. ಕಣ್ಣು ಪಾಪಗಳು ದೊಡ್ಡದಾಗಿರುತ್ತದೆ.

ಮುಖವೆಲ್ಲ ಬಿಳಿಚಿಕೊಂಡು, ಚರ್ಮವು ತೋಯ್ದಿರುತ್ತದೆ.

ಕುರ್ಚಿಯ ಮೇಲೆ ಕೂತರೆ, ತುಟ್ಟ ತುದಿಯಲ್ಲಿ, ಬೇಗ ಎದ್ದು ಓಡಿಹೋಗಲು ಅನುಕೂಲವಾಗಿರುವಂತೆ, ಹಗೂರಾಗಿ ಕುಳಿತಿರುತ್ತಾನೆ.

ಈ ತೆರನ ಲಕ್ಷಣಗಳಿಗೆಲ್ಲಾ ಮೂಲಭೂತಕಾರಣವೆಂದರೆ, ಭಯ. ಭಯ ತೋರಿದಾಗ, ದೇಹವು ಆಗಬಹುದಾದ ಅಪ ಘಾತಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳುವುದು. ಊಹಿಸಲ್ಪಟ್ಟ ಈ ಅಪಘಾತವು ಬಹುಪಾಲು ಸಂಭವಿಸುವುದೇ ಇಲ್ಲ.

ಇಂತಹ ದೈಹಿಕ ಸ್ಥಿತಿಯಲ್ಲಿ ಚಟುವಟಿಕೆಯ ಓಡಾಟಗಳಿಂದ ಮಾಂಸಖಂಡಗಳ ವ್ಯಾಯಾಮವಾಗಿ, ಸ್ವಲ್ಪ ಸಮಾಧಾನವು ಬರಬಹುದು.

ಆದರೆ ಯೋಚನೆ ಮಾಡುವುದರಿಂದ, ಅಥವಾ ಊಹಾಪೋ ಹಗಳಿಂದ ಸ್ವಲ್ಪವೂ ಸಮಾಧಾನ ಬರುವುದಿಲ್ಲ.

ಮಾತಾಡುವುದರಿಂದ ಕೂಗಾಡುವುದರಿಂದ ಅಲ್ಪ ಸಮಾ ಧಾನವು ದೊರೆಯಬಹುದು.

ಭಯವಾವರಿಸಿದಾಗ, ವಪೆಯು (Diaphragm) ನಿಶ್ವಾಸ ಮಾಡಿದ ನಂತರ ಇರುವ ಎತ್ತರದ ಮಟ್ಟದಲ್ಲಿ ಸ್ಥಿರವಾಗುತ್ತದೆ. ಹಾಗಾಗಿ ಉಸಿರಾಡಲು ಕಷ್ಟ. ಆ ಕಾರಣದಿಂದಲೇ ಹೃದ ಯವು ಎತ್ತಲ್ಪಟ್ಟು ಡಬ ಡಬಕ್ಕೆ ಆರಂಭಿಸುತ್ತದೆ.

೩

ಭಯದ ಪರಿಣಾಮಗಳು

ತೀವ್ರವಾಗಿ ಭಯವು ಪ್ರಾಣಿಯನ್ನು ಆವರಿಸಿದಾಗ, ಸ್ವಂತ ಬುದ್ಧಿಯು ಸ್ತಬ್ಧವಾಗಿ ಕೆಲಸ ಮಾಡುವುದಿಲ್ಲ. ಹಾಗಾಗಿ ಹಿಂದು ಮುಂದು ವಿವೇಚನೆ ಮಾಡದೆ ಕೆಲಸವನ್ನು ಮಾಡುವಂತಾಗುತ್ತದೆ. ಹಾಗಾದಾಗ ಕೆಲಸವೂ ಹಾಳು.

ಕಾಡಿನಲ್ಲಿ ಜಿಂಕೆಯ ಹಿಂಡೊಂದು ಹುಲ್ಲು ಮೇಯುತ್ತಿರುತ್ತದೆ. ಹತ್ತಿರದಲ್ಲೇ ಕುಂಟಾಗಿರುವ ಸಿಂಹವೊಂದು ಭಯಂಕರವಾಗಿ ಗರ್ಜಿಸುತ್ತದೆ. ಕುಂಟಾಗಿರದೆ ಆರೋಗ್ಯವಂತವಾಗಿರುವ ಸಿಂಹವು ಬೇಟೆ ಮಾಡಿ ಜಿಂಕೆಯನ್ನು ತಿನ್ನುತ್ತದೆ. ಸಿಂಹವು ಕುಂಟಾದಾಗ, ಜಿಂಕೆಯು ಓಡಿಹೋಗಿ ತಪ್ಪಿಸಿಕೊಂಡು ಹೋಗಲು ಸುಲಭ. ಆ ಕಾರಣದಿಂದ ಸಿಂಹವು ಗರ್ಜಿಸುತ್ತದೆ. ಹತ್ತಿರದಲ್ಲೇ ಯಮನ ಗರ್ಜನೆಯನ್ನು ಕೇಳಿದಾಗ ಜಿಂಕೆಗಳು ಹೆದರುತ್ತವೆ. ಹೆದರಿ ಚೆಲ್ಲಾಪಿಲ್ಲಿಯಾಗಿ ತಟ್ ಅಂತ ಓಡಿಹೋಗುತ್ತವೆ. ಯಾವ ದಿಕ್ಕಿನಿಂದ ಗರ್ಜನೆಯು ಕೇಳಿಸಿತು; ಎಷ್ಟು ದೂರದಿಂದ ಕೇಳಿಸಿರಬಹುದು; ಯಾವ ದಿಕ್ಕಿಗೆ ಓಡಿಹೋದರೆ ಕ್ಷೇಮ; ಇವೆಲ್ಲವನ್ನೂ ಜಿಂಕೆಗಳು ಯೋಚಿಸುವುದೇ ಇಲ್ಲ. ಹುಚ್ಚು ಹೆದರಿದಾಗ ಅವುಗಳ ಹುಟ್ಟುಗುಣವಾದ, (instinctive ಆದ) ಓಡಿಹೋಗುವ ಕಾರ್ಯವನ್ನು ಶುರು ಮಾಡುತ್ತವೆ. ಹಾಗಾದಾಗ ಕೆಲವು ಜಿಂಕೆಗಳು ಕುಂಟುಬಿದ್ದಿ

ರುವ ಸಿಂಹದ ಬಾಯ ಬಳಿಗೇ ಓಡಿಹೋಗುತ್ತವೆ. ಸಿಂಹದ ಬಾಯಿಗೆ ಸುಲಭವಾಗಿ ಸಿಕ್ಕಿ ಬೀಳುತ್ತವೆ.

ಮಗಳ ಮದುವೆಯನ್ನು ಅದ್ದೂರಿಯಿಂದ ಮಾಡಲು ನನ್ನ ಸ್ನೇಹಿತನೊಬ್ಬನು ಸಂಭ್ರಮ ಪಡುತ್ತಿದ್ದ. ಸ್ವಲ್ಪ ಜೋರು ಆಸಾಮಿ. ಅಡಿಗೆಯವರನ್ನೂ ಪರಿಚಾರಕರನ್ನೂ ಹೆದರಿಸಿ ಇಟ್ಟಿದ್ದ. ಬೇಗ ಬೇಗ ಬಡಿಸಬೇಕು. ಒಂದು ಭಕ್ಷವಾದ ಮೇಲೆ ಇನ್ನೊಂದನ್ನು ತಡವಿಲ್ಲದೆ ತರಬೇಕು ಎಂದು ಏರ್ಪಡಿಸಿದ್ದ. ಪರಿಚಾರಕ ಚಿರೋಟಿಯನ್ನು ತಂದು ಬಡಿಸಿದ. ಹಿಂದೆ ಸಕ್ಕರೆಯನ್ನು ತಂದಿರಲಿಲ್ಲ ಹಾಲಿನ ಪರಿಚಾರಕ ಸಿದ್ಧವಾಗಿದ್ದ. ನನ್ನ ಸ್ನೇಹಿತ ಆ ಪರಿಚಾರಕರನ್ನು ತಿಂದುಬಿಡುವಂತೆ ನೋಡಿ ರೇಗಿದ. ಒಬ್ಬ ಪರಿಚಾರಕ ಕೆಟ್ಟೆನೋ ಬೆಂದೆನೋ ಎಂದು ಓಡಿಹೋಗಿ ಜಟ್ಟಂತ ಸಕ್ಕರೆ ತಟ್ಟೆಯನ್ನು ತಂದು ಬಡಿಸಿದ. ಚಿರೋಟಿಗಳ ಮೇಲೆ ಧಾರಾಳವಾಗಿ ಸುರಿದ.

ಯಾವೊಬ್ಬ ಅತಿಥಿಯೂ ಚಿರೋಟಿಯನ್ನು ತಿನ್ನಲಾಗಲಿಲ್ಲ. ಕಾರಣ, ಬೆದರಿದ ಪರಿಚಾರಕ ಅವಸರದಲ್ಲಿ ಸಕ್ಕರೆಯ ಬದಲು ಹತ್ತಿರದಲ್ಲೇ ಇದ್ದ ಉಪ್ಪನ್ನು ತಟ್ಟೆಗೆ ಹಾಕಿ, ತಂದು ಎಲ್ಲರಿಗೂ ಬಡಿಸಿದ್ದ !

ಭಯಬಿದ್ದ ಜಿಂಕೆಯು ಕುಂಟು ಸಿಂಹದ ಬಾಯಿಗೆ ಬಿತ್ತು. ಭಯಬಿದ್ದ ಪರಿಚಾರಕ ಮನವಿಹ್ವಲನಾಗಿ, ಔತಣದ ಊಟವನ್ನು ಹಾಳುಮಾಡಿದ.

ಭಯದ ಪರಿಣಾಮಗಳಲ್ಲಿ ಒಂದು: ಮಾಡುವ ಕೆಲಸವನ್ನು ಹಾಳಾಗಿಸುವುದು.

ಕಪಿಗಳ ಮರಿಗಳು ತಾಯ ಹೊಟ್ಟೆಯನ್ನು ಅಪ್ಪಿ ಹಿಡಿದುಕೊಂಡಿರುವುದನ್ನು ನೋಡಿದ್ದೀರಿ. ಸ್ವಂತ ರಕ್ಷಣೆಯನ್ನು ಮಾಡಿಕೊಳ್ಳಲು ಸಾಧ್ಯವಾಗದಿರುವಾಗ, ಮರಿಗಳು ತಾಯ ರಕ್ಷಣೆಯನ್ನು ಈ ರೀತಿ ಭದ್ರಪಡಿಸಿಕೊಳ್ಳುತ್ತವೆ. ಈ ಜಾಯಮಾನವನ್ನು ಜೀವಶಾಸ್ತ್ರದಲ್ಲಿ topism ಎಂದು ಕರೆಯುತ್ತಾರೆ. ಪ್ರಾಣಿಗಳು ದೇಹದಲ್ಲಿ ಯಾವ ಯಾವ ನಡವಳಿಕೆಗಳನ್ನು ತೋರಿಸುತ್ತದೆಯೋ ಅಂತಹುದೇ ನಡವಳಿಕೆಗಳನ್ನು ಪ್ರಗತಿಹೊಂದಿದ ಮಾನವನು ಮನಸ್ಸಿನ ನಡವಳಿಕೆಯಲ್ಲಿ ತೋರಿಸುತ್ತಾನೆ. ಟೈಫಾಯಿಡ್ಡೋ, ನ್ಯೂಮೋನಿಯಾವೊದಂತಹ ಸ್ವಲ್ಪ ಉಲ್ಬಣವಾದ ಬೇನೆಯು ಬಡಿದಾಗ ರೋಗಿಗೆ ಭಯವೂ ಸಹಜವಾಗಿ ಉಂಟಾಗುತ್ತದೆ. ಪವಾಡದಂತಹ ಔಷಧಿಗಳು ಸಂಶೋಧಿಸಲ್ಪಟ್ಟಿವೆ. ಈ ಬೇನೆಯು ಬೇಗ ಗುಣವಾಗುತ್ತದೆ ಎಂದು ಅವ ವಿಚಾರವನ್ನುಮಾಡಿ ಧೈರ್ಯವನ್ನು ತಂದುಕೊಂಡರೂ ಒಳಗನಕ ಭಯವು ಇದ್ದೇ ಇರುತ್ತದೆ. ಆ ಭಯದಿಂದಾಗಿ ಅವ ಸ್ವಂತ ಸಂರಕ್ಷಣೆಯನ್ನು ಮಾಡಿಕೊಳ್ಳಲು ಬಾರದ ಮಗುವಿನಂತಾಗುತ್ತಾನೆ. ಮಗುವು ಅಮ್ಮನನ್ನು ಅಪ್ಪಿಕೊಳ್ಳುವಂತೆ ರೋಗಿಯು ವೈದ್ಯರನ್ನು ಮನಸ್ಸಿನಲ್ಲಿ ಅಪ್ಪಿಕೊಳ್ಳುತ್ತಾನೆ. ಆಗ ವೈದ್ಯನು ಹೇಳಿದ್ದೇ ಪಥ್ಯ, ಅವನು ನುಡಿದಿದ್ದೇ ಸತ್ಯ. ಅವನು ಹಾಕಿದ ಗೆರೆಯನ್ನು ರೋಗಿ ದಾಟುವುದೇ ಇಲ್ಲ.

ಚಾಚೂತಪ್ಪದೆ ವೈದ್ಯರಾಗಲೀ, ಹಿರಿಯರಾಗಲೀ ಹೇಳಿದುದನ್ನು ಮಾಡುವವರು ಆಳ ಮನಸ್ಸಿನಲ್ಲಿ ಭಯಬಿದ್ದವರು ಅಥವಾ ಶುದ್ಧ ಮಂಕುಗಳು. ಸ್ವಂತವಾಗಿ ವಿವೇಚನೆಯನ್ನು ಮಾಡಲು ಅಶಕ್ತರಾದವರು. ಭಯದ ಇನ್ನೊಂದು ಪರಿಣಾಮ :—ಇನ್ನೊಬ್ಬರ ನೆರವನ್ನು ಪಡೆಯಲೋಸುಗ ಅವರ ಹಿಂಬಾಲಕರಾಗುವುದು.

"ಮರಿ! ನೀನು ಈಸರ್ತಿ ರ್‍ಯಾಂಕ್ ಗಿಟ್ಟಿಸುತ್ತಿ" ಎಂದು ಮನೆಯಲ್ಲಿನ ಅಜ್ಜ, ಸೋದರತ್ತೆ, ಅಕ್ಕಂದಿರು ಎಲ್ಲರೂ ಸಿದ್ಧಾಂತ ಮಾಡಿದರು. ಮನೆಗೆ ಒಬ್ಬನೇ ಗಂಡುಮಗ, ಮರಿ. ಸಾಕಷ್ಟು ಜಾಣ ಹುಡುಗ, ಆದರೆ ಕೊನೆಯ ಪರೀಕ್ಷೆಯಲ್ಲಿ ಯಶಸ್ವಿಯಾಗಿ ಉತ್ತೀರ್ಣನಾಗುತ್ತೇನೆಂಬ ಭರವಸೆ ಇರಲಿಲ್ಲ. ಕೇವಲ ಮೂರನೆ ವರ್ಗದಲ್ಲಿ ಪ್ಯಾಸು ಮಾಡಿದರೆ ಮನೆಯವರೆದುರಿನಲ್ಲಿ ಅವಮಾನವಾಗುತ್ತೆ ಎಂಬ ಭಯವು ಮುತ್ತಿತು. ಓದುವುದನ್ನೇನೋ ಮುಂದುವರಿಸುತ್ತಲೇ ಇದ್ದ. ಆದರೆ ಪರೀಕ್ಷೆಯ ಹಿಂದಿನ ದಿನ ಅವನಿಗೆ ಕೆಂಡಾಮಂಡಲ ಜ್ವರ ಬಂತು. ಪಾಂತಿಯಾಯಿತು, ಡಾಕ್ಟರು ಬಂದರು, ಚಿಕಿತ್ಸೆ ಮಾಡಿದರು. ಜ್ವರ ಇಳಿಯಲೇಇಲ್ಲ. ಪರೀಕ್ಷೆಗಳು ಎರಡು ದಿನ ನಡೆದವು. ಪರೀಕ್ಷೆಗೆ ಮರಿ ಹೋಗಲಾಗಲಿಲ್ಲ. ಮೂರನೆಯ ದಿನ ಹೋದರೂ ಒಂದೇ, ಬಿಟ್ಟರೂ ಒಂದೆ. ಹೇಗೂ ಪ್ಯಾಸಾಗುವಂತಿರಲಿಲ್ಲ. ಮೂರನೆಯ ದಿನದಿಂದ ಜ್ವರವೂ ಇಳಿಯಿತು, ಆರೋಗ್ಯವು ಯಥಾಸ್ಥಿತಿಗೆ ಹಿಂತಿರುಗಿತು.

ಇದು ಒಂದು ಪರೀಕ್ಷೆಯ ವರದಿಯಲ್ಲ. ವರ್ಷಕ್ಕೆ ಎರಡುಸಲ ನಡೆಯುವ ಪರೀಕ್ಷೆಗಳಿಗೆ ಅವ ಕುಳಿತಿದ್ದ. ಐದು ಬಾರಿ ಪರೀಕ್ಷೆಗೆ ಕುಳಿತಾಗಲೂ ಇದೇ ಆಯಿತು. ಜ್ವರಕ್ಕೆ ಕಾರಣ ಪರೀಕ್ಷೆಯ ಫಲಿತಾಂಶದ ಭಯ ಎಂದು ಐದನೆಯ ಪರೀಕ್ಷೆಯ ಹೊತ್ತಿಗೆ ವೈದ್ಯನಿಗೆ ತೋರಿತು. ಆರನೆಯ ಪರೀಕ್ಷೆಯ ವೇಳೆಗೆ ರೋಗಿಗೆ ಜ್ವರದ ಈ ಕಾರಣವನ್ನು ವಿಶದೀಕರಿಸಿ ತಿಳಿಸಲಾಯಿತು. ನಿನ್ನ ರ್‍ಯಾಂಕಿನಿಂದ ಮನೆಯವರಿಗಾಗುವ ಹಿಗ್ಗಿಗಿಂತಲೂ ನಿನ್ನ ಜ್ವರದಿಂದ ಅವರಿಗಾದ ಆಘಾತ ಅಧಿಕ ಎಂದೂ ತೋರಿಸಿಕೊಡಲಾಯಿತು. ಜ್ವರದ ಬಡಿತದಿಂದಾಗಿ ನಿನ್ನ ಮನಃಸಾಮರ್ಥ್ಯವು ಕುಂಟಿತಗೊಂಡಿದೆ, ಆದುದರಿಂದ ರ್‍ಯಾಂಕ್ ಬರದೆ ಇದ್ದರೆ ಯಾರೂ ಅಸಮಾಧಾನ ಪಡುವುದಿಲ್ಲ ಎಂದು ಹೇಳಿದ್ದಾಯಿತು. ಆರನೆಯ ಸರ್ತಿ ಪರೀಕ್ಷೆಗೆ ಕುಳಿತ. ಧೈರ್ಯದಿಂದ ಕುಳಿತ. ರ್‍ಯಾಂಕಿನ ಆಸೆಯನ್ನು ಬಿಟ್ಟೇ ಕುಳಿತ. ಆ ಸರ್ತಿ ಎರಡನೇ ರ್‍ಯಾಂಕ್ ಪಡೆದು ಪ್ಯಾಸ್ ಆದ.

ಆಳ ಮನಸ್ಸಿನಲ್ಲಿ ಭಯವು ಉಂಟಾದಾಗ ಅದು ದೇಹದ ಮೇಲೆ ಪ್ರತಿಕ್ರಿಯೆಯನ್ನು ಸಾಧಿಸುತ್ತೆ. ಆಗ ದೇಹವು ಅನಾರೋಗ್ಯಗೊಂಡು ಭಯವನ್ನು ಉಂಟುಮಾಡಿದ ಕಾರಣದಿಂದ ದೂರ ಸರಿಯಲು ಅನುಕೂಲ ಮಾಡಿಕೊಡುತ್ತೆ. ಮೇಲೆ ವಿವರಿಸಿದ ಮರಿಯ ನಿದರ್ಶನದಿಂದ ಭಯದ ಇಂತಹುದೊಂದು ಪರಿಣಾಮವನ್ನು ಅರಿಯಬಹುದು.

ಭಯಕ್ಕೆ ಕಾರಣಗಳು

ಎಳೆಯ ಮಗುವು ಕಣ್ಣಿಗೆ ಕಂಡುದನ್ನೆಲ್ಲಾ ಹಿಡಿಯಲು ಪ್ರಯತ್ನಿಸುತ್ತದೆ. ಆಗ ಅದಕ್ಕೆ ಭಯವಾಗುವುದಿಲ್ಲ. ಆದರೆ ಕತ್ತಲೆಯಾದಾಗ ಹೆದರಿ ಅಮ್ಮಾ ಅಮ್ಮಾ ಎಂದು ಅಳುತ್ತೆ. ಏಕೆಂದರೆ ಕತ್ತಲೆಯಲ್ಲಿ ಯಾವುದೂ ಕಾಣಿಸುವುದಿಲ್ಲ. ಕತ್ತಲೆಯೇ ಒಂದು ದೆವ್ವದಂತೆ ಕಾಡುತ್ತದೆ. ಭಯ ಬೀಳಿಸುತ್ತದೆ. ಅಂದರೆ ಅಜ್ಞಾನದಿಂದ ಭಯ ಉಂಟಾಗುತ್ತದೆ ಎನ್ನಬಹುದು. ಹಗ್ಗ ಹಾವು ಎನ್ನುವ ಸಂಶಯ ಬಂದಾಗ, ಹಗ್ಗವೇ ಆಗಿದ್ದರೂ, ಅಜ್ಞಾನದ ಫಲವಾಗಿ, ಅದು ಹಾವು ಆಗಿರಬಹುದು ಎಂಬ ಭಯವೂ ಉಂಟಾಗುತ್ತದೆ. Fear of the Unknown.

ನನ್ನ ಗೆಳೆಯ ಪೋಲೀಸ್ ಇನ್ಸ್‌ಸ್ಪೆಕ್ಟರ್ ಶ್ಯಾಮರಾಯನ ನಿದರ್ಶನದಿಂದ ಭಯದ ಕಾರಣಗಳನ್ನು ಸುಲಭವಾಗಿ ತಿಳಿಯಬಹುದು.

ಶ್ಯಾಮು ನಾನೂ ಸಮ ಸಮ ವಯಸ್ಕರು. ನೆರೆಹೊರೆಯಲ್ಲಿ ಅಕ್ಕಪಕ್ಕದ ಮನೆಗಳಲ್ಲಿ ಬಾಲ್ಯದಿಂದಲೂ ಇದ್ದವರು. ನಾಲ್ಕು ವರ್ಷದ ಹುಡುಗನಾಗಿದ್ದಾಗ ಶ್ಯಾಮುವಿನ ತಾಯಿ ನಮ್ಮನೆಗೆ ಓಡೋಡಿ ಬಂದು ನಮ್ಮ ಅಮ್ಮನನ್ನು ಕರೆದು

ಕೊಂಡು ಹೋದರು. ಹಿಂತಿರುಗಿದ ಮೇಲೆ ನಮ್ಮಮ್ಮ ಹೇಳಿ
ದಳು: ಶ್ಯಾಮು ಬಲು ತುಂಟ ಹುಡುಗ, ಬಲು ಧೈರ್ಯ
ಮಧ್ಯಾಹ್ನ ಅಡಿಗೆ ಮನೆಯಲ್ಲಿ ಆಡುತ್ತಿದ್ದನಂತೆ. ಬಡುವಿನ
ಹತ್ತಿರ ಚೇಳೊಂದು ಹರಿಯುತ್ತಿತ್ತಂತೆ. ಚೇಳು ಎಂದರೆ
ಅವನಿಗೆ ಗೊತ್ತೇ ಇಲ್ಲ. ಅದನ್ನ ಹಿಡಿಯುಕ್ಕೆ ಹೋದನಂತೆ.
ಅದು ಕುಟುಕಿತಂತೆ. ಲಬೋ ಲಬೋ ಅಳುಕ್ಕೆ ಶುರು ಮಾಡಿದ
ನಂತೆ. ಎಳೆ ಮಗು ಏನಾಗುತ್ತೋ ಚೇಳು ಕಚ್ಚಿದರೆ, ಅಂತ
ಹೆದರಿಕೊಂಡು ಅವನಮ್ಮ ಬಂದು ನನ್ನ ಕರೆದರು. ಮಂತ್ರ
ಹಾಕಿಬಿಟ್ಟು ಬಂದೆ. ಈಗ ಸ್ವಲ್ಪ ನೋವು ಕಡಿಮೆ ಅಂತ
ಹೇಳಿದ" ಎಂದು ಹೇಳಿದ್ದು ಈಗಲೂ ಚೆನ್ನಾಗಿ ಜ್ಞಾಪಕ ಇದೆ.

ಬೆಳೆದ ಮೇಲೆ ಶ್ಯಾಮರಾಯ ಪದವೀಧರನಾಗಿ ಪೋಲೀಸ್
ಇಲಾಖೆಗೆ ಸೇರಿದ. ನಾನು ವೈದ್ಯ ಕಾಲೇಜಿಗೆ ಸೇರಿಕೊಂಡೆ.
ಆಮೇಲೆ ಪರಸ್ಪರ ಮಿಲನವು ವಿರಳವಾಗಹತ್ತಿತು. ಕೆಲವು
ವರ್ಷಗಳಾದ ಮೇಲೆ ದೈನಂದಿನ ಪತ್ರಿಕೆಗಳಲ್ಲಿ ಶ್ಯಾಮರಾಯನ
ಸಾಹಸವನ್ನು ಓದಿದೆ.

ಗೋರಿಬಿದನೂರು ಬಳಿಯ ಹಳ್ಳಿಯೊಂದರಲ್ಲಿ ಕಳ್ಳರ
ತಂಡವು ನೆಲೆಸಿತ್ತೆಂದೂ, ದೂರದ ಊರುಗಳಿಗೆ ಹೋಗಿ ಭಾರಿ
ದರೋಡೆ, ಕಳ್ಳತನಗಳನ್ನು ಮಾಡಿ ಹಳ್ಳಿಗೆ ಹಿಂತಿರುಗುತ್ತಿದ್ದ
ರೆಂದೂ, ಶ್ಯಾಮರಾಯನು ದಾಸಯ್ಯನ ವೇಷ ಹಾಕಿಕೊಂಡು ಆ
ಹಳ್ಳಿಯಲ್ಲಿ ಒಂದು ವರ್ಷ ಇದ್ದನೆಂದೂ, ಹಾಗೆ ಅವರ ಚಲನ
ವಲನಗಳನ್ನು ಚೆನ್ನಾಗಿ ತಿಳಿದುಕೊಂಡನೆಂದೂ ಬರೆದಿತ್ತು.

ನಂತರ ಹಿಂತಿರುಗಿ ತನ್ನ ಇಲಾಖೆಯುವರಿಗೆ ಸುದ್ದಿಯುನ್ನು ತಿಳಿಸಿ, ಇಂತಹ ದಿನ ನಿಮ್ಮ ಪಟಾಲಮು ಹಳ್ಳಿಯ ಸುತ್ತಲೂ ಅವಿತುಕೊಂಡಿರಲಿ. ನಾನು ಶಂಖ ಬಾರಿಸಿದಾಗ ಮಾರಿ ಗುಡಿಯುನ್ನು ಸುತ್ತುವರಿಯುಲಿ. ಆಗ ಮಾರಿ ಪೂಜೆಗೆ ಕಳ್ಳ ನಾಯಕರೆಲ್ಲರೂ ಸೇರಿರುತ್ತಾರೆ ಎಂದು ಏರ್ಪಾಡು ಮಾಡಿದ ನಂತೆ. ನಂತರ ಒಬ್ಬನೇ ದಾಸಯ್ಯನ ವೇಷದಲ್ಲಿ ಹಿಂತಿರುಗಿದ ನಂತೆ. ಅವನು ರೂಪಿಸಿದ ಕಾರ್ಯಕ್ರಮದ ಪ್ರಕಾರ ಪೋಲೀಸ್ ವ್ಯವಸ್ಥೆ ನಡೆಯಿತಂತೆ. ಕಳ್ಳರ ತಂಡವೇ ಸಿಕ್ಕಿ ಬಿದ್ದಿತಂತೆ.

ಹಲವಾರು ಖೂನಿಗಳನ್ನು ಲೀಲಾಜಾಲವಾಗಿ ಮಾಡಿದ ವರು ಆ ಕಳ್ಳರ ತಂಡದಲ್ಲಿದ್ದರು. ಏನಾದರೂ ಸ್ವಲ್ಪ ಅನು ಮಾನ ಬಂದಿದ್ದರೂ, ಒಂದು ವರ್ಷ ವ್ಯವಧಾನವು ಸಿಕ್ಕಿ ದ್ದಾಗ, ಅವರುಗಳು ಶ್ಯಾಮರಾಯನ ತಲೆಯನ್ನು ಹೊಡೆದು ಹಾಕಿ ಬಿಡುತ್ತಿದ್ದರು. ಹೀಗೆ ಅಹರ್ನಿಶಿ ಜೀವ ಭಯುವನ್ನು ತೋರೆದು ಶ್ಯಾಮರಾಯ ಕಳ್ಳರ ತಂಡದೊಂದಿಗೇ ಇದ್ದು, ಅವರನ್ನು ಬುಟ್ಟಿಗೆ ಹಾಕಿದ. ಪರಮ ಸಾಹಸಿ ಅವನು.

ಎಂದೆಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಈ ಸಾಹಸ ದಿಂದಾಗಿ ಪೋಲೀಸ್ ಇನ್ಸ್‌ಪೆಕ್ಟರಾಗಿ ಅವನನ್ನು ಏರಿಸ ಲಾಗಿತ್ತು.

ನನ್ನ ಹಳೆಯ ಗೆಳೆಯನೊಬ್ಬ ಪತ್ರಿಕೆಗಳಲ್ಲಿ ಒಳ್ಳೆಯ

ಹೆಸರು ಖರುವಂತೆ ಮಾಡಿಕೊಂಡನಲ್ಲ ಎಂದು ನಾನು ಬಲು ಹಿಗ್ಗಿದೆ.

ನಲವತ್ತೈದು ವರ್ಷದ ಪ್ರಾಯವಿದ್ದಾಗ ಶ್ಯಾಮರಾಯ ನಮ್ಮ ಊರಿಗೆ ವರ್ಗವಾಗಿ ಬಂದ. ಒಂದು ಬೆಳಿಗ್ಗೆ ಸೊಂಟವು ಹಠಾತ್ತನೆ ಹಿಡಿದುಕೊಂಡಿತಂತೆ. ಆಗ ಮಂಚದ ಪಕ್ಕದಲ್ಲಿ ನಿಂತಿದ್ದವನು, ನೆಲದ ಮೇಲೆ ಬಿದ್ದಿದ್ದ ಷರಟಿನ ಗುಂಡಿಯನ್ನು ಎತ್ತಿಕೊಳ್ಳಲು ಬಗ್ಗಿದನಂತೆ. ನಂತರ ಎದ್ದಾಗ ಸೊಂಟದಲ್ಲಿ ಕಳಕ್ ಎಂದಿತಂತೆ. ಆಮೇಲೆ ಸೊಂಟವು ಸೆಟೆದುಕೊಂಡಿತಂತೆ. ನೃತ್ಯ ನಟರಾಜನ ತರಹ ಬಲಮುಂಡಿಯನ್ನು ತುಸು ಬಗ್ಗಿಸಿ ಕೊಂಡು ಅವ ನಿಂತುಬಿಟ್ಟ. ಬೆವರಿಳಿಸುತ್ತಾ ನಿಂತುಬಿಟ್ಟ. ಸ್ವಲ್ಪ ಅಳ್ಳಾಡಲೂ ಆಗದೆ ನಿಂತಿದ್ದ. ಅವನ ಹೆಂಡತಿಯ ಕಾತರದ ಟೆಲಿಫೋನ್ ಕರೆಯನ್ನು ಕೇಳಿ ಅಲ್ಲಿಗೆ ಹೋದೆ.

" ಎಂತಹಾ ಶೂರ ಪೋಲೀಸಿನವನೋ ? ಸ್ವಲ್ಪ ಸೊಂಟ ಹಿಡಿದುಕೊಂಡರೆ ಏನು ಅಬ್ಬರ ಮಾಡುತ್ತೀ " ಎಂದು ಹಂಗಿಸಿದೆ.

" ಇಲ್ಲ ಕಣೋ, ಇದು ಸ್ವಲ್ಪ ಅಲ್ಲ ಕಣೋ ? ಸೊಂಟಕ್ಕೆ ಕಬ್ಬಿಣದ ಪಟ್ಟಿಯನ್ನು ಮೊಳೆ ಹಾಕಿ ಜಡಿದಂತಾಗಿದೆ. ಜೋರಾಗಿ ಉಸಿರು ಬಿಟ್ಟರೂ ಮರಣ ಸಂಕಟವಾಗುತ್ತೆ. ಮೈ ಅಳ್ಳಾಡಿಸುವುದಕ್ಕೆ ಆಗುಲ್ಲ. ಅಸಾಧ್ಯ ನೋವು. ಏನಾದರೂ ಮಾಡಿ. ಯಾವುದಾದರೂ ಇನ್ಜಕ್ಷನ್ ಕೊಟ್ಟು ನೋವು ಕಡಿಮೆ

ಯಾಗುವಂತೆ ಮಾಡಪ್ಪ, ನಿನಗೆ ಪುಣ್ಯ ಬರುತ್ತೆ" ಎಂದು ಹೇಳುತ್ತಾ ಹೇಳುತ್ತಾ ಹೆಂಗಸರಂತೆ ಅಳುಕ್ಕೆ ಶುರು ಮಾಡಿದ. ಅವನನ್ನು ಮೂದಲಿಸಿದ್ದಕ್ಕೆ ತುಂಬಾ ವ್ಯಥೆಯಾಯಿತು. ಬಹಳ ಕಠಿಣವಾದ ನೋವನ್ನು ಅನುಭವಿಸುತ್ತಿದ್ದಾನೆ ಎಂದು ಮಂದ ಟ್ಟಾಯಿತು. ನೋವು ನಿವಾರಕ ಇನ್ಜಕ್ಷನನ್ನು ಸೊಂಟಕ್ಕೆ ಕೊಟ್ಟು ಬಾಧೆಯನ್ನು ಕಡಿಮೆ ಮಾಡೋಣ ಎಂದುಕೊಂಡು ಸಾಮಗ್ರಿಗಳನ್ನು ಸಿದ್ಧಮಾಡಿಕೊಳ್ಳಲು ಆರಂಭಿಸಿದೆ.

ಅಷ್ಟರಲ್ಲೇ "ಅಯ್ಯೋ! ಅಯ್ಯೋ! ಅಲ್ಲಿ ನೋಡೇ! ಲೇ! ಲೇ! ಯಾರಾದರೂ ಗಂಡಸರನ್ನು ಕರೆಯೇ" ಎಂದು ವಿಕಾರ ವಾಗಿ ಬೊಬ್ಬೆ ಇಟ್ಟ ಶ್ಯಾಮರಾಯ. ಅವನತ್ತ ಕಾತರದಿಂದ ತಿರುಗಿದೆ. ಗೋಡೆಯ ಕಡೆಗೆ ಬೆರಳು ತೋರಿಸಿದ.

"ಲೇ! ಲೇ! ಬಾರೇ ಬೇಗ, ಚೇಳು ಕಣೆ" ಎಂದು ಅರ ಚಿದ. ಅರಚಿದವ, ಅಲ್ಲಿನ ತನಕ ಶಿಲಾ ಪ್ರತಿಮೆಯಂತೆ ಗೂಟ ಬಡಿದವನ ಹಾಗೆ ನಿಂತಿದ್ದವ, ಕೊಠಡಿಯಿಂದ ಹೊರ ಹಜಾರಕ್ಕೆ ಬಾಣಂತಿ ಜಿಂಕೆಯಂತೆ, ಛಂಗಿ ಹಾರಿ ಹೋದ. ಚೇಳಿನ ಭಯವು ಸೊಂಟದ ಹಿಡಿತವನ್ನು ಮರೆಸಿಯೇ ಬಿಟ್ಟಿತ್ತು.

ಶ್ಯಾಮರಾಯನ ಹೆಂಡತಿಯು ಅಡಿಗೆ ಮನೆಯನ್ನು ಗುಡಿಸು ತ್ತಿದ್ದಳು. ಗಂಡನ ಕೂಗನ್ನು ಕೇಳಿ ಕೈಲಿದ್ದ ಮೊಂಡು ಕಸ ಪರಿಕೆಯೊಂದಿಗೆ ಪ್ರತ್ಯಕ್ಷಳಾದಳು. ಆ ವೇಳೆಗೆ ಶ್ಯಾಮರಾಯ ಹಜಾರದಲ್ಲಿದ್ದ ನನ್ನ ನೋಡಿದಳು ಆಕೆ. ಸಾವು ನೋವು

ಗಳನ್ನು ದಿನಾಗಲೂ ಕಾಣುವ ವೈದ್ಯ ನಾನು, ಆದರೂ ಚೇಳು ಜಿರಳೆ ಎಂದರೆ ಎಂತಹದೋ ಭೀಭತ್ಸ. ಚೇಳಿನ ಮೇಲೆ ಕೈ ಮಾಡಲಿಲ್ಲ. ಆಕೆಗೆ ಚೇಳನ್ನು ತೋರಿಸಿದೆ. ಲಕ್ಷಣವಾದ ಮುಖ ಆಕೆಯದು. ಆದರೆ ಈಗ ಅದನ್ನು ಶಿಂಡರಿಸಿಕೊಂಡು ಮೊಂಡು ಪರಕೆಯಿಂದ ಚೇಳನ್ನು ಬಾರಿಸಿದಳು. ಮಹಿಷಾಸುರ ಮರ್ದನವನ್ನು ಗೈದ ಆದಿ ಶಕ್ತಿಯ ಅಂಶವೊಂದು ಈ ಚೇಳನ್ನು ಇಂದು ಸಂಹಾರ ಮಾಡಿತು ಎಂದುಕೊಂಡೆ.

ಆನಂತರ ಛಂಗಿದ ಶ್ಯಾಮರಾಯನನ್ನು ನೆನೆಸಿಕೊಂಡು ನಗಲಾರಂಭಿಸಿದೆ. ಹಜಾರಕ್ಕೆ ಹೋಗಿ ಅವನ ಸೊಂಟವನ್ನು ನೀವುತ್ತಾ, ಈಗ ಸಡಿಲವಾಯಿತಲ್ಲಾ, ಔಷಧಿ ಬೇಡವಲ್ಲ ಎಂದು ನಕ್ಕೆ. ಚೇಳನ್ನು ಕಂಡರೆ ಎಷ್ಟು ಭಯವೋ ನಿನಗೆ, ಮೀಸೆ ಬೇರೆ ದಂಡ ನಿನ್ನ ಪೌರುಷಕ್ಕೆ ಎಂದೆ.

"ಯಾವಾಗಲೂ ಸ್ವಲ್ಪ ಹೆಂಗರುಳಿನ ಸ್ವಭಾವದವರು" ಎಂದು ನನ್ನ ಅತ್ತಿಗೆಯೂ ದನಿ ಗೂಡಿಸಿ ನಕ್ಕಳು. ನಮ್ಮಿಬ್ಬರಿಗೂ ಕಾಫಿ ತರಲು ಅಡಿಗೆಯ ಮನೆಗೆ ಹೋದಳು.

ಕಳ್ಳರ ತಂಡವನ್ನು, ಜೀವದ ಮೇಲಿನ ಆಸೆಯನ್ನು ತೊರೆದು, ಹಿಡಿದ ಶ್ಯಾಮರಾಯನು ಧೀರನಲ್ಲವೇ? ಶೂರನಲ್ಲವೇ? ಅವನಿಗೆ ಅಂಜುಬುರುಕ ಎಂದನ್ನಲು ಸಾಧ್ಯವೇ ಇಲ್ಲ. ಅವ ಹುಡುಗತನದಿಂದಲೂ ಧೈರ್ಯ ಪ್ರಕೃತಿಯವನೇ, ಆದರೆ ಬಾಲ್ಯದಲ್ಲಿ ಚೇಳು ಕುಟುಕಿದಾಗ, ಅದರ ನೋವು ಅವನ

ಮನಸ್ಸಿನಲ್ಲಿ ಅಚ್ಚಳಿಯದೆ ಬರೆಹಾಕಿದಂತಾಯಿತು. ಅನಂತರ ಯಾವುದಕ್ಕೂ ಹೆದರದ ಈ ಶೂರ ಚೇಳು ಎಂದರೆ ವಿಹ್ವಲ ನಾಗುತ್ತಿದ್ದ. ಯಾರೂ ಇಲ್ಲದೆ, ಅವನೊಬ್ಬನೇ ಇರುವ ಪ್ರಸಂಗ ಬಂದಿದ್ದರೆ, ಚೇಳನ್ನು ಅವನೇ ಹೊಡೆದುಹಾಕುತ್ತಿದ್ದ. ಆದರೆ ನೆರವಿರುವಾಗ, ಎಂದೋ ಅನುಭವಿಸಿದ ನೋವು,ಹಸಿರಾಗಿ ನೆನಪಿನಲ್ಲಿದ್ದು, ಒಂದು ಕ್ಷಣ ಓಡಿ ಹೋಗುವಂತೆ ಪ್ರೇರೇಪಿಸಿತ್ತು. ಬಾಳಿನಲ್ಲಿ ಹೊಡೆದಾಡಿ ಜಯಿಸು, ಇಲ್ಲವೇ ಓಡಿ ಹೋಗು ಎಂಬುದೇ ಮೂಲಭೂತ ಸಂರಕ್ಷಣಾ ನಿಯಮ. ಓಡಿ ಹೋಗುವ ಉಪಾಯವೇ ಸುಲಭವಾಗಿ ಸೂಕ್ತವಾಗಿ ಆತನಿಗೆ ಕಂಡಿತ್ತು.

ಆಳ ಮನಸ್ಸಿನಲ್ಲಿ ಅವ ಧೈರ್ಯಶಾಲಿ. ಕರ್ತವ್ಯದ ನಿಷ್ಠೆಯು ಆಧ್ಯಾತ್ಮಿಕ ಬಲವನ್ನು ಪಡೆದಿತ್ತು. ಜೀವದ ಭಯವನ್ನೂ ಮರೆಸುತ್ತಿತ್ತು. ದಾಸಯ್ಯನಾಗಿ ಕಳ್ಳರ ಹಳ್ಳಿಯಲ್ಲಿ ಇದ್ದಾಗ, ಹಾವು ಚೇಳುಗಳು ಅಲ್ಲಿ ಇರುತ್ತಿರಲಿಲ್ಲವೇ ? ಅಲ್ಲಿ ಅವ ಧ್ಯೇಯ ಸಾಧನೆಗಾಗಿ, ಮಿಕ್ಕ ಚಿಲ್ಲರೆ ವಿಷಯಗಳನ್ನು ಮರೆತಿದ್ದ.

ಆದರೆ ಮನೆಯ ಸುರಕ್ಷಿತ ವಾತಾವರಣದಲ್ಲಿ ಅದೂ ಸೊಂಟವು ಸಿಡಿಮಿಡಿದಿದ್ದಾಗ, ಸ್ವಂತ ರಕ್ಷಣೆಯ ಶಕ್ತಿಯು ಸರಿಯಾಗಿಲ್ಲದಿದ್ದಾಗ, ಅವ ಬಾಲ್ಯದ ನೆನಪಿನಿಂದ ಚುಚ್ಚಲ್ಪಟ್ಟು, ಆ ಕ್ಷಣದಲ್ಲಿ ಹೆದರಿ, ಓಡಿಹೋದ.

ಅಂದರೆ ತೋರಮನಸ್ಸಿನಲ್ಲಿ ಅಸಾಧ್ಯ ಭಯವನ್ನು ಪ್ರದರ್ಶಿ

ಸಿದ. ಆದರೆ ಆಳಮನಸ್ಸಿನಲ್ಲಿ ಅಂತಹ ಭಯವು ಇದ್ದೇ ಇರಲಿಲ್ಲ.

ಆಳಮನಸ್ಸಿನಲ್ಲಿ ಧೈರ್ಯವಿದ್ದವರು, ಭಯವಿಲ್ಲದವರು, ತೋರಮನಸ್ಸಿನಲ್ಲಿ ಭೀರುಗಳಂತೆ ವರ್ತಿಸುವುದು ಸ್ವಾಭಾವಿಕ. ಅಂತೆಯೇ ಆಳಮನಸ್ಸಿನಲ್ಲಿ ಭಯಗ್ರಸ್ತರಾದವರು, ತೋರ ಮನಸ್ಸಿನಲ್ಲಿ ಶೌರ್ಯದ ಬಡಾಯಿಯನ್ನು ಕೊಚ್ಚಿಕೊಳ್ಳುತ್ತಾರೆ. ನಿಜವಾದ ಬಂಡವಾಳವಿಲ್ಲದ ಬಡಾಯಿಗಾರರು ಇವರು. ಸುತ್ತುಮುತ್ತಲಿನ ಸಮಾಜದಲ್ಲಿ ಇಂತಹವರನ್ನು ಅಗಣಿತ ಸಂಖ್ಯೆಯಲ್ಲಿ ಕಾಣಬಹುದು.

ಆಳಮನಸ್ಸಿನ ಭಯವು (Instinctive) ಹುಟ್ಟುಗುಣ. ತೋರ ಮನಸ್ಸಿನ ಭಯವು (Conditioned) ರೂಢಿಸಿಕೊಂಡು ಕಲಿತು ಬಂದಿದ್ದು. ಎರಡೂ ತೆರನ ಭಯಗಳು ವಿಧ ವಿಧ ಹಂತದಲ್ಲಿ ಎಲ್ಲರಲ್ಲಿಯೂ ಇರುತ್ತವೆ. ಮೂಲಭೂತವಾಗಿ "ಅಜ್ಞಾನವೇ" ಎರಡಕ್ಕೂ ಕಾರಣ.

ಭಯದ ಮಾನಸಿಕ ಸ್ಥೂಲ ವಿಶ್ಲೇಷಣೆ

ಭಯವು ಮನೋವಿಕಾರವೆಂದಮೇಲೆ ಭಯದ ಮಾನಸಿಕ ವಿಶ್ಲೇಷಣೆ ಏನುಬಂತು? ಮಾನಸಿಕ ಭಯ, ದೇಹದ ಭಯ ಎಂದು ಬೇರೆ ಬೇರೆ ಇರಲು ಸಾಧ್ಯವೇ ಎಂಬ ಅನುಮಾನವು ಸಹಜವಾಗಿ ಬರಬಹುದು. ಅಂತಹ ಅನುಮಾನವನ್ನು ಪರಿಹರಿಸಬೇಕು.

ದೇಹದ ಸುಸೂತ್ರ ಕಾರ್ಯಕ್ರಮವು ಅಂದರೆ, ಬದುಕಿರಲು ಅಗತ್ಯವಾದ ಮುಖ್ಯ ಕಾರ್ಯಕ್ರಮಗಳು: ಉದಾ. ಹೃದಯ ಬಡಿತ; ಕರುಳಿನ ಪಚನದ ಕೆಲಸ; ಲಿವರಿನ ರಾಸಾಯನಿಕ ಪ್ರಯೋಗಗಳು; ಮೂತ್ರ, ಮಲ, ಬೆವರು ಮುಂತಾದ ಪರಿಶುದ್ಧಿ ಕಾರ್ಯಗಳು; ನಿರ್ನಾಳ ಗ್ರಂಥಿಗಳ ಕೆಲಸಗಳು; ಹಲವು ಹಂತದಲ್ಲಿ ಉಸಿರಾಡುವ ಕೆಲಸ; ಇವೆಲ್ಲವೂ ಮನುಷ್ಯನ ತೋರಮನಸ್ಸಿನ ಹತೋಟಿಗೆ ಒಳಪಡದೆ ನಡೆಯುವ ಕಾರ್ಯಕ್ರಮಗಳು. ಇವುಗಳ ಕಾರ್ಯಕ್ರಮದಲ್ಲಿ ಯಾವುದಾದರೂ ಪರಿಣಾಮಕಾರಿಯಾದ ಅಪಘಾತವೋ, ಆಕಸ್ಮಿಕವೋ ಸಂಭವಿಸಿದರೆ ಆಗ ದೇಹವು ಬದುಕಿರಲು ತೊಂದರೆಯಾಗಬಹುದು. ಅಂದರೆ ಸಾವು ಆಗಬಹುದು. Internal homeostasis ಎಂಬ ದೇಹದ ಒಳಕಾರ್ಯಕ್ರಮದ ಸಮಾಧಾನಸ್ಥಿತಿಯು ಅವ್ಯವಸ್ಥಿತವಾ

ಗುತ್ತದೆ. ಆಗ ದೇಹದ ನೆಮ್ಮದಿಯು ತಳಮಳಗೊಳ್ಳುತ್ತದೆ. ಈ ಸುದ್ದಿಯು ಆಳಮನಸ್ಸಿಗೆ ಮುಟ್ಟುತ್ತದೆ. ಅಲ್ಲಿಂದ ತೋರ ಮನಸ್ಸಿಗೆ ಹರಡುತ್ತದೆ. ತೋರಮನಸ್ಸಿಗೆ ಆಗಬಹುದಾದ ಆಕಸ್ಮಿಕದ, ಆಗುತ್ತಿರುವ ಅಪಘಾತದ ಅರಿವು ಸ್ಪಷ್ಟವಾಗಿ ಇರುವುದಿಲ್ಲ. "ಆಗಬಾರದ್ದು ಏನೋ ಆಗಿಹೋಗುತ್ತಿದೆ" ಎಂಬ "ಅಜ್ಞಾನ"ದಿಂದ ಉಂಟಾದ ಭಯವು ತೋರಮನಸ್ಸನ್ನು ಕದಡಿ, ಪ್ರಾಪಂಚಿಕ ಎಲ್ಲ ವ್ಯವಹಾರಗಳಿಂದಲೂ ಸೆರೆ ಬಿಡಿಸಿ, ಮನಸ್ಸನ್ನು ದೇಹದತ್ತ ಸೆಳೆಯುತ್ತದೆ. ಹೃದಯದ ಅಪಘಾತ; (anaphylactic) ಪ್ರತಿಕ್ರಿಯೆ, ಇವು ಬಡಿದಾಗ "ಕೆಂಪ್, ಕೇಂಪ್ ಹೋತಾಯ್" ಎಂದು ಬೆದರಿ ಬಡಬಡಿಸುತ್ತಾರೆ. ಈಗ ಕಂಡು ಅನುಭವಿಸುತ್ತಿರುವ ಪ್ರಪಂಚವು, ಇನ್ನು ಮುಂದೆ ಕಾಣಿಸುವುದಿಲ್ಲ. ಮುಂದೆ ಕಾಣಬಹುದಾದ ಪ್ರಪಂಚದ ಜ್ಞಾನವು ಲವಲೇಶವೂ ಇಲ್ಲ—ಇದೇ ಸಾವು. ಇದೇ ನಮ್ಮ ಇಂದಿನ ಅರಿವಿನ ಮುಕ್ತಾಯ ಎಂಬ ಭಯವು, ಸಿಂಬಳವನ್ನು ನೊಣಗಳು ಮುತ್ತುವಂತೆ ಮನುಷ್ಯನನ್ನು ಮುತ್ತುತ್ತವೆ.

ಈ ಭಯವು ಮಾನಸಿಕ ವಿಕಾರವಾದರೂ, ಇದರ ಉತ್ಪತ್ತಿಯು ದೇಹದ ಒಳ ಆಡಳಿತದ ಅವ್ಯವಸ್ಥೆಯಿಂದ; ಅಪಘಾತ ಆಕಸ್ಮಿಕಗಳಿಂದ. ಭಯದ ವಿಶ್ಲೇಷಣೆಯನ್ನು ಮಾಡುವಾಗ, ಮಾನಸಿಕ, ದೈಹಿಕ ಎಂದು ಭಯದ ಉತ್ಪತ್ತಿಯ ಮೂಲ ಕಾರಣಗಳನ್ನು ಸ್ಪಷ್ಟವಾಗಿ ಅರಿಯಲು ಈ ರೀತಿ ಹೆಸರಿಸಲಾಗಿದೆ.

ಮನುಷ್ಯನ ಹುಟ್ಟುಗುಣ, ಹುಟ್ಟರಿವು, ಸಹಜ ಪ್ರತಿಕ್ರಿಯೆಗಳು ಎಂಬ (instinctive) ಮನೋಭಾವಗಳಲ್ಲಿ, ರಾಗಗಳಲ್ಲಿ; ಆಹಾರ, ಭಯ, ಕಾಮ ಎಂಬುವು ಮುಖ್ಯವಾದುವು. ಆಹಾರ ಎಂದಾಗ ದಾಹವನ್ನೂ ಸೇರಿಸಿಕೊಳ್ಳಬಹುದು.

ಆಹಾರ, ನಿದ್ರಾ,ಭಯ, ಕಾಮ ಎಂದು ನಮ್ಮ ಹಿರಿಯ ಋಷಿಗಳು, ಮನನ ಮಾಡಿದ ಅತಿಮಾನವರು, ವಿಶ್ಲೇಷಿಸಿದ್ದರು. ಇವುಗಳಲ್ಲಿ "ನಿದ್ರಾ" ಕಲ್ಪನೆಯು ಇಂದಿನ ವೈಜ್ಞಾನಿಕ ಅರಿವಿಗೆ ಸಮಂಜಸವಾದಂತಿಲ್ಲ. ನಿದ್ರಾವಸ್ಥೆಯೇ ಮನುಷ್ಯನ ಸಹಜಸ್ಥಿತಿ. ಜೀವದಿಂದಿದ್ದರೂ, ತಾಯ ಗರ್ಭದಲ್ಲಿರುವಾಗ ಒಂದು ತೆರನ ನಿಧ್ರಾವಸ್ಥೆಯಲ್ಲಿಯೇ ಮಾನವನು ಇರುತ್ತಾನೆ. ದೇಹಪೋಷಣೆಯ ಸಲುವಾಗಿ, ಆಹಾರ ಸಂಪಾದನೆಯ ನಿಮಿತ್ತ, ಅವ ಎಚ್ಚರಗೊಂಡು ಪ್ರಾಪಂಚಿಕ ಬದುಕಿನಲ್ಲಿ ಭಾಗವಹಿಸುತ್ತಾನೆ ಎನ್ನುವ ಸಿದ್ಧಾಂತವನ್ನು ಸುಮಾರು ಜನ ಜೀವಶಾಸ್ತ್ರಜ್ಞರು (physiologists) ಒಪ್ಪುತ್ತಾರೆ.

ತಾತ್ಕಾಲಿವಾದ, ಕೇವಲ ೭೦–೧೦೦ ವರ್ಷಗಳ ಅವಧಿಯುಳ್ಳ,ಒಂದು ಜನ್ಮದಲ್ಲಿ ಹಸಿವಿನಪೂರೈಕೆಗಾಗಿ ಆದ ಎಚ್ಚರವು ಹಸಿವನ್ನಲ್ಲದೆ ಇತರ ಆದಿಮೂಲವಾದ, ಬಾಳಿನ ಮರ್ಮವನ್ನು ಅರಿಯಲು, ವಿಕಾಸಗೊಳ್ಳಲು ಕಾಲಾವಧಿ ಸಾಲದು. ಆದುದರಿಂದ ನಾವು ಗಳಿಸಿದ ಅರಿವನ್ನು ಬಳುವಳಿಯಾಗಿ ಪಡೆದ, ನಮ್ಮ ಮಕ್ಕಳು, ಈ ಎಚ್ಚರವನ್ನು ನಮಗಿಂತ ಹೆಚ್ಚಾಗಿ ವಿಕಸಿಸಗೊಳ್ಳಲಿ; ಈ ಎಚ್ಚರವನ್ನು ವಿಶಾಲ ಕ್ಷೇತ್ರಗಳಿಗೆ ಹರಡಲಿ, ಎಂಬ

ಹಂಬಲವು ಆಳಮನಸ್ಸಿನ ಆಳ ಆಳದಲ್ಲಿ ಇದ್ದಿರಬೇಕಾದುದು, ಸ್ವಾಭಾವಿಕ. ಹೀಗಾಗಬೇಕಾದರೆ ಮಕ್ಕಳು ಆಗಬೇಕು. ನಾವು ಕಲಿತು ರೂಢಿಸಿಕೊಂಡಿದುದನ್ನು ಬಳುವಳಿಯಾಗಿ ಪಡೆಯಲು, ನಮ್ಮ ದೇಹದಿಂದ ಉತ್ಪನ್ನವಾದ ಮಕ್ಕಳಾದರೂ ಆಯಿತು. ನಾವು ಬರೆದಿಟ್ಟುದನ್ನು ಓದಿ ಕಲಿತು ಮುಂದು ವರಿಯುವ ಯಾರ ಮಕ್ಕಳಾದರೂ ಆಯಿತು, ಮುಖ್ಯ ಮಾನವನ ಇಡೀ ಸಂಸ್ಕಾರದ ಮಕ್ಕಳಾದರೂ ಆಯಿತು.

ಮಕ್ಕಳಾಗಲು "ಕಾಮ"ವು ಅಗತ್ಯವಾಯಿತು. ಅನ್ನದಾತುರಕಿಂತ ಹೊನ್ನಿನಾತುರ ಮಿಗಿಲು. ಹೊನ್ನಿನಾತುರಕಿಂತ, ಹೆಣ್ಣು ಗಂಡೊಲವು. ಮೂಲಭೂತವಾದ instincts ಆದ, ಕಾಮವು ಈ ದೃಷ್ಟಿಯಿಂದ ಅತ್ಯಗತ್ಯವಾದುದು.

ಆಹಾರ, ಕಾಮ, ಇವುಗಳೆರಡೂ ಎಚ್ಚರವನ್ನು ವಿಸ್ತರಿಸುವ, ಎಚ್ಚರವನ್ನು ವಿಶಾಲಗೊಳಿಸುವ, ಎಚ್ಚರವನ್ನು ವಿಶ್ವವ್ಯಾಪಿಯಾಗಿಸುವ, ಎಚ್ಚರವನ್ನು ಬ್ರಹ್ಮಾಂಡಕ್ಕೂ ಅನ್ವಯಿಸುವ ಮುಖ್ಯ ಪ್ರಚೋದನೆಗಳು.

ಈ ದೃಷ್ಟಿಯಿಂದ ನೋಡಿದರೆ, ಇಂದಿನ ವೈಜ್ಞಾನಿಕ ಅರಿವಿನ ಹಂತದಲ್ಲಿ, ನಿದ್ರಾವಸ್ಥೆಯೇ ಸಹಜಾವಸ್ಥೆ ಎನ್ನುವುದು ಸಮಂಜಸವಾಗಿ ಕಾಣುವುದಿಲ್ಲ. ಸಂಪೂರ್ಣವಾಗಿ ಎಚ್ಚರಗೊಳ್ಳುವುದೇ, ಪೂರ್ಣ ಜಾಗೃತನಾಗುವುದೇ ಮಾನವನ ದೈವೀಧ್ಯೇಯ ಎಂದು ಒಪ್ಪಿಕೊಳ್ಳಬೇಕು. ಇದನ್ನು ಒಪ್ಪಿಕೊಂಡರೆ

"ನಿದ್ರಾ" ಕೂಡ instinctive ಮನೋವಿಕಾರವೇ! ಆಗ ಆಹಾರ ನಿದ್ರಾಭಯ ಕಾಮ ಎನ್ನುವುದು ಸತ್ಯಸಮ್ಮತ.

ಈ ಹುಟ್ಟುಗುಣಗಳು, instincts ತೋರಮನಸ್ಸಿಗೆ ಹರಡಿದ ಮೇಲೆ ತೋರಮನಸ್ಸು ಅವುಗಳ ಪೂರೈಕೆಗೆ ಅಗತ್ಯವಾದ ಪ್ರತಿಕ್ರಿಯೆಗಳನ್ನು ಹೂಡುತ್ತದೆ. Emotions ಎಂದೆನಿಸಿಕೊಳ್ಳುವ ಮನೋಭಾವಗಳು, ರಾಗಗಳು, ಇಂತಹ ಪ್ರತಿಕ್ರಿಯೆಯ ಒಂದು ವಿಧಾನ. ಇವುಗಳು ದೇಹವನ್ನು ಅಗತ್ಯ ರೀತಿಯಲ್ಲಿ ನಡಸಿ, instincts ಅನ್ನು ಪೂರೈಸುವುದೋ ಅಥವಾ ಹತೋಟಿಯಲ್ಲಿಡುವುದೋ, ಯಾವುದಾದರೂ ಒಂದು ಮಾರ್ಗವನ್ನು ಅನುಸರಿಸುತ್ತದೆ. Instincts ಎನ್ನುವ ಸಹಜ ಸ್ವಭಾವದ ಬೇಡಿಕೆಗಳು ಪೂರೈಸಿದರೆ ದೇಹ ಮತ್ತು ಮನಸ್ಸು ನೆಮ್ಮದಿಯಿಂದಿರುತ್ತವೆ. ಹತೋಟಿಯಲ್ಲಿಟ್ಟು ಮನಸ್ಸಿನ ಒಳ ಪದರಗಳಲ್ಲಿ instincts ಅನ್ನು ಹುದುಗಿಸಿಟ್ಟರೆ, ಮುಂದೆಂದಾದರೂ ಅವು ವಿಚಿತ್ರ ರೂಪಿನಲ್ಲಿ ಮನೋದೈಹಿಕ ಬೇನೆಗಳಾಗಿ ಕಾಡಬಹುದು.

Emotions ಎಂದೆನ್ನುವ ಮನೋಭಾವಗಳು; ಸುಖ ದುಃಖ; ಪ್ರೀತಿ ದ್ವೇಷ; ಭೀರು ಧೀರ; ಕರುಣೆ ಕ್ರೂರ; ಲಜ್ಜೆ ನಿರ್ಲಜ್ಜೆ ಇತ್ಯಾದಿಗಳು ದ್ವಂದ್ವರೂಪಿನವು. ಸಂಭವಿಸಿರುವ, ಅಥವಾ ಸಂಭವಿಸಬಹುದಾದ ನೋವಿನಿಂದ ಕೆಲವು ಮನೋಭಾವಗಳು ಉತ್ಪಾದಿತವಾಗುತ್ತವೆ. ಉದಾಹರಣೆ: ದುಃಖ;

ದ್ವೇಷ, ಭೀರುತನ, ಸಂಕಟ, ಕೊರಗು, ಅಳು, ಆತಂಕ, ಇಂತಹವು. ಸಂಭವಿಸಿರುವ ಅಥವಾ ಸಂಭವಿಸಬಹುದಾದ ಸುಖದಿಂದ, ಇತರ ಮನೋಭಾವಗಳು ಮೂಡುತ್ತವೆ. ಉದಾಹರಣೆ: ಸಂತೋಷ, ಹಿಗ್ಗು, ಪ್ರೇಮ,ಧೈರ್ಯ, ಸಂತೃಪ್ತಿ, ನಗು ಸಮಾಧಾನ ಇತ್ಯಾದಿಗಳು.

ಪ್ರೀತಿ ದ್ವೇಷಗಳು ಒಂದೇ ನಾಣ್ಯದ ಎರಡು ಮುಖಗಳು ಎಂಬುದನ್ನು ಹಿರಣ್ಯಕಶಿಪುವಿನ ಕತೆಯು ಸುರಸವಾಗಿ ನಿದರ್ಶಿಸುತ್ತದೆ. ನಿನ್ನನ್ನು ದ್ವೇಷಿಸಿ ಶತ್ರುವಾದರೆ ಬೇಗ ನಿನ್ನ ಬಳಿಗೆ ಬಂದು ಸೇರುತ್ತೇನೆ. ಆದುದರಿಂದ ಶತ್ರುವಾಗುತ್ತೇನೆ ಎಂದ ಜಯ ವಿಜಯರು, ತಮ್ಮ ಪೂರ್ಣ ಪ್ರೇಮದ ನಿದರ್ಶನಕ್ಕೆ, ಸಾರ್ಥಕತೆಗೆ ದ್ವೇಷವನ್ನೇ, ಶತ್ರುತನವನ್ನೇ ಬಳಸಿಕೊಂಡರು. ಒಲಿದರೆ ನಾರಿ, ಮುನಿದರೆ ಮಾರಿ ಎಂಬ ನಾಣ್ಣುಡಿಯೂ ಇದಕ್ಕೆ ಸಾಕ್ಷಿ. You kill the thing you love most ಎಂದು Oscar Wilde ಹೇಳಿದ್ದೂ ಶತಾಂಶ ಸತ್ಯ.

ಭೀರು, ಧೀರ ಎಂಬ ಮನೋವಿಕಾರಗಳು, ಶ್ಯಾಮರಾಯನ ನಿದರ್ಶನದಲ್ಲಿ, ಹೇಗೆ ಆಳ ಮತ್ತು ತೋರಮನಸ್ಸುಗಳಲ್ಲಿ ಏರುಪೇರು ಸಂಬಂಧವನ್ನು ಹೊಂದಿದೆ ಎಂಬುದನ್ನು ಕಂಡಿದ್ದೇವೆ. ಇದೇ ನಿಯಮವು ಉಳಿದ ಎಲ್ಲ ದ್ವಂದ್ವ ರೂಪವಾದ ಮನೋಭಾವಗಳಿಗೂ ಅನ್ವಯಿಸುತ್ತದೆ.

ಸಂಭವಿಸಬಹುದಾದ ನೋವಿನಿಂದ, ಸಂಭವಿಸಿರುವ ನೋವಿನಿಂದ ಹಲವಾರು ಮನೋಭಾವಗಳು ಉಂಟಾಗುತ್ತವೆ

ಎಂದು ಹೇಳಿದೆವು. ಇಂತಹ ನೋವು, ದೈಹಿಕವಾಗಿರಬಹುದು. ಉಗುರುಸುತ್ತು ಎದ್ದವನು ಸಂಕಟಪಡುತ್ತಾನೆ, ದುಃಖ ಮನೋಭಾವದಿಂದಿರುತ್ತಾನೆ. ಹೊಟ್ಟೆಯು ನೋವು ಬಂದ ವನ ಮುಖದಲ್ಲಿ ಸಂಕಟವನ್ನು ಸುಲಭವಾಗಿ ಕಾಣಬಹುದು.

ನೋವು ಮನಸ್ಸಿಗೂ ತಾಕಬಹುದು. ನಮ್ಮದು ಎಂದು ನಾವು ಮನಸ್ಸಿನಲ್ಲಿ ಅಂದುಕೊಂಡಿರುವ ವಸ್ತುಗಳು ಮುಂದೆ ಇಲ್ಲವಾಗುವಂತಾದರೆ ಮನಸ್ಸಿಗೆ ನೋವು ಉಂಟಾಗುತ್ತದೆ. ಖೇದವಾಗುತ್ತದೆ. ನಂಟರು ಇಷ್ಟರು ಸ್ನೇಹಿತರು ಇವರುಗಳ ನಿಧನವಾದಾಗ ಮನಸ್ಸಿಗೆ ದುಃಖವಾಗುತ್ತದೆ. ಮನಃಸ್ತಾಪ ದಿಂದ ಅವರನ್ನುದೂರವಿಡಬೇಕಾದಾಗಲೂ ಮನಸ್ಸಿಗೆ, ಕೋಪದ ಜತೆಗೆ ನೋವೂ ಉಂಟಾಗುತ್ತದೆ. ನಮ್ಮ ಅಂಗಾಂಗಗಳನ್ನು ಕಳೆದುಕೊಂಡಾಗಲೂ ನೋವಾಗುತ್ತದೆ, ಮನಸ್ಸಿನಲ್ಲಿ ಕೂಡ. ಗಣನೆಗೆ ಬರದೇ ಇರಬೇಕಾದ, ತಲೆಯ ಕೂದಲು ಬಣ್ಣ ಗೆಟ್ಟಿತು, ಬಿದ್ದುಹೋಯಿತು ಎಂದು ಎಷ್ಟು ಜನ ದೊರೆ ಗಾಯಿ ಮುದುಕರು ಸಂಕಟ ಪಡುತ್ತಾರೆ! ಸರಿಗೈಯ್ಯುವುದ ಕ್ಕಾಗಿ ಏನೆಲ್ಲ ಶ್ರಮವನ್ನು ವಹಿಸುತ್ತಾರೆ!

ಇದೇ ರೀತಿ ನಮ್ಮದು ಎಂದುಕೊಂಡಿರುವ ಹಣ ಆಸ್ತಿ ಗಳು ಹೋದರೂ ಮನಸ್ಸಿಗೆ ನೋವಾಗುತ್ತದೆ. ಅಂದಮೇಲೆ ನಮ್ಮದು ಎಂದು ಧೃಢವಾಗಿ ನಂಬಿರುವ ಈ ಜನ್ಮವು, ಮುಗಿ ಯುತ್ತದೆ ಎಂದರೆ ಎಂತಹ ನೋವು ಉಂಟಾಗಬೇಕು? ಮರಣ

ಸಂಕಟವೆಂದು ಅತಿಯಾದ, ದುರ್ಭರವಾದ, ನೋವನ್ನು ಕರೆಯುವಂತಾಗಿದೆ.

ಸಂಭವಿಸಿರುವ, ಸಂಭವಿಸಬಹುದಾದ, ಸುಖವು ಕೂಡ ದೈಹಿಕವಾಗಿರಬಹುದು. ಉದಾಹರಣೆ: ತುಂಬಿದ ಹೊಟ್ಟೆ; ಬಿಸಿಲಿನ ಝಳದ ಕಾಲದಲ್ಲಿ ಕುಡಿದ ಥಂಡಿ ಪಾನಕ; ಛಳಿಗಾಲದಲ್ಲಿ ಹೊದ್ದುಕೊಂಡ ಕಂಬಳಿ; ಎಳೆಯ ಮಗುವಿನ ತೋಳಿನ ಆಲಿಂಗನ ಮತ್ತು ಸುಲಭವಾಗಿ ಊಹಿಸಬಹುದಾದ ಈ ರೀತಿಯ ಇತರ ಸಂತೋಷ ಕೊಡುವಂತಹವು ಇತ್ಯಾದಿ.

ಮಾನಸಿಕವಾಗಿಯೂ ಸುಖವು ಉಂಟಾಗುವ ಕಾರಣಗಳಲ್ಲಿ ನಮ್ಮದು ಎಂದಂದುಕೊಂಡು ಸಂಪಾದಿಸಿಕೊಂಡವುಗಳು ಮುಖ್ಯ. ನೆಂಟರಿಷ್ಟರ ಸ್ನೇಹಿತರ ಸಂಪಾದನೆಯೇ ಆಗಲೀ, ಆಸ್ತಿಪಾಸ್ತಿಗಳ ಸಂಪಾದನೆಯೇ ಆಗಲೀ, ಮನ್ನಣೆಯ ಗಳಿಕೆಯೇ ಆಗಲೀ, ಸಂತೋಷದ ಮನೋಭಾವಗಳನ್ನುಂಟು ಮಾಡುತ್ತದೆ.

ಭಯವಿಲ್ಲದಿರುವ ಅವಸ್ಥೆಗಳು

ಭಯವು ಹುಟ್ಟುಗುಣ ಒಂದಾದುದರಿಂದ ಸಾಮಾನ್ಯವಾಗಿ ಎಲ್ಲ ಮನುಷ್ಯರಲ್ಲಿಯೂ ಅದರ ಪ್ರಭಾವವನ್ನು ಕಾಣುತ್ತೇವೆ. ಆದರೆ ಕೆಲವೊಂದು ಅವಸ್ಥೆಗಳಲ್ಲಿ ಭಯವು ಇಲ್ಲ

ದಂತೆ ಕಾಣಬರುತ್ತದೆ. ಅಂತಹ ಅವಸ್ಥೆಗಳು ಯಾವುವು? ಅದೇಕೆ ಹಾಗಾಯಿತು? ಎಂದು ವಿಚಾರ ಮಾಡೋಣ.

೧ ಶೈಶವಾವಸ್ಥೆಯಲ್ಲಿ, ಅನಿರೀಕ್ಷಿತವಾದ ಭಾರಿ ಸದ್ದಾದರೆ ಶಿಶುವು ಬೆದರಿ ಅಳುತ್ತದೆ. ಅಪರಿಚಿತ ಮುಖವನ್ನು ಕಂಡರೂ ಕೆಲವು ಶಿಶುಗಳು ಹೆದರಿ ಅಳುತ್ತವೆ. ಕಿವಿಗೆ ಸಾಮಾನ್ಯವಾಗಿ ಕೇಳಿಸುತ್ತಿದ್ದ ಸದ್ದುಗಳ ಹಾಗಿರದೆ ಜೋರಾಗಿರುವ ಸದ್ದು ಶಿಶುವಿನ ಕಿವಿಗೆ ಬಿದ್ದಾಗ, ಅದರ ಅರಿವು ಹಿಂದೆ ಇಲ್ಲದಿದ್ದ ಕಾರಣ, ಅದು ಹೆದರಿ ಕಿರುಚುತ್ತದೆ. ಆತನಕ ಕಾಣದೆ ಇದ್ದ ಹೊಸ ಮುಖವು ಕಂಡಾಗ, ಇದು ಯಾವುದೋ ತಿಳಿಯದೆ ಇದ್ದ ಮುಖ ಎಂದು ಹೆದರುವುದು ಸ್ವಾಭಾವಿಕ. ಕೇಳಿಸಿಕೊಳ್ಳುವುದೂ, ನೋಡುವುದೂ, ಎರಡು ರೂಢಿಸಿಕೊಂಡ ಕಾರ್ಯಕ್ರಮಗಳು. ಎಳೆಯ ಶಿಶುವು ಹುಟ್ಟಿದ ಕೆಲವೇ ದಿನಗಳಲ್ಲಿ ಕಂಡು ಕೇಳಲು ತೊಡಗುತ್ತದೆ. ೮-೧೦ ವಾರಗಳಲ್ಲಿ ಕಂಡುದುದನ್ನು ನೆನಪಿನಲ್ಲಿಟ್ಟುಕೊಂಡು, ಗುರುತಿಸುವ ಹಂತವನ್ನು ಮುಟ್ಟುತ್ತದೆ. ಆನಂತರ ಕಂಡುದುದು ಶಿಶುವಿಗೆ ಭಯವನ್ನು ಉಂಟುಮಾಡುವುದಿಲ್ಲ. ಹಾಗಾಗಿ ಕಣ್ಣಿಗೆ ಸ್ಪಷ್ಟ ಕಂಡುದುದನ್ನು ಕೈಯ್ಯಲ್ಲಿ ಹಿಡಿಯ ಹೋಗುತ್ತದೆ. ಹಾಗೆ ಮಾಡಿದಾಗ, ಹಿಡಿದುದು ಮುಳ್ಳೋ ಚೇಳೋ ಆದರೆ, ಅದರಿಂದ ದೇಹಕ್ಕೆ ಯಾತನೆಯು ಉಂಟಾದರೆ, ಇಂತಹುದನ್ನು ಇನ್ನು ಮುಂದೆ ಮುಟ್ಟಬಾರದು ಎಂದು ಕಲಿಯುತ್ತದೆ. ಈ ಅರಿವು

ಅದರ ಸ್ಮೃತಿ ಪಟಲದಲ್ಲಿ ಸ್ಥಿರವಾಗಿ ಉಳಿಯುತ್ತದೆ. ಕಲಿಯು ವಿಕೆಯ ಮಾರ್ಗವೇ ಇದು, ಪ್ರಪಂಚದಲ್ಲಿ.

ಅಂದರೆ ಶೈಶವಾವಸ್ಥೆಯಲ್ಲಿ ಕೆಲವು ಕಂಡು ಕೇಳಿದ ವಸ್ತುಗಳು, ಯಾತನೆಯನ್ನು ಕೊಡುವುವುದಾದರೂ, ಶಿಶುವಿನ ಅಜ್ಞಾನದಿಂದಾಗಿ, ಭಯವನ್ನು ಹುಟ್ಟಿಸುವುದಿಲ್ಲ.

೨ ಕಾಮಾತುರಾಣಾಂ ನ ಭಯಂ ನ ಲಜ್ಜಾ ಎಂದು ಬಾಲ ಸಂನ್ಯಾಸಿಗಳಾದ ಶಂಕರರು ಹೇಳಿದರು. ಸ್ವಾನುಭವದಿಂದ ನುಡಿಯದೇ ಇದ್ದರೂ ಈ ಹೇಳಿಕೆಯು ಶತಾಂಶ ಸತ್ಯವಾದುದ್ದು.

ಕಾಮಾತುರನಾದವನು ವಿವೇಚನಾ ಶಕ್ತಿಯನ್ನು ಆ ಕಾಲದಲ್ಲಾದರೂ ಕಳೆದುಕೊಂಡಿರುತ್ತಾನೆ. ಕಾಮವು ಮನುಷ್ಯನ ಮುಖ್ಯವಾದ ಹುಟ್ಟು ಗುಣಗಳಲ್ಲೊಂದು : ಸಮಾಜದ ಮುಂದುವರಿಕೆಗೆ ಅತ್ಯಗತ್ಯವಾದ ಈ ಹುಟ್ಟುಗುಣವು ಜ್ವಲಿಸಲಾರಂಭಿಸಿದಾಗ, ಮನುಷ್ಯನ ಇತರ ಮಾನಸಿಕ ಚಟುವಟಿಕೆಗಳೆಲ್ಲವೂ, ಕಾಮಪೂರೈಕೆಗಾಗಿ, ಆ ಧ್ಯೇಯ ಸಾಧನೆಗಾಗಿ, ಮಾಡಲಾಗುತ್ತವೆ. ಅಂತಹ ಅವಸ್ಥೆಯಲ್ಲಿ ಅವ ನಿರ್ಲಜ್ಜನಾಗುತ್ತಾನೆ.

ಸಮಾಜದ ಭದ್ರತೆಗೆ ಕಟ್ಟುಪಾಡುಗಳನ್ನು ನಿಯಮಿಸಗೊಳ್ಳಲಾಗುತ್ತದೆ. ಅವುಗಳನ್ನು ಅತಿಕ್ರಮಿಸಿದಾಗ ಸಮಾಜವು ಶಿಕ್ಷಿಸುತ್ತದೆ. ಆದುದರಿಂದ ಅತಿಕ್ರಮಿಸಿದವನಿಗೆ ಶಿಕ್ಷೆಯು

ಭಯವು ಉಂಟಾಗುವುದು ಸಹಜ. ಅಂತಹವನನ್ನು ಸಮಾಜವು ಶಿಕ್ಷಿಸುವುದಲ್ಲದೆ, ಮೂದಲಿಸಿ, ನಿಕೃಷ್ಟವಾಗಿ ಕಾಣುತ್ತದೆ. ಆಗ ಲಜ್ಜೆ, ನಾಚಿಕೆ ಇತ್ಯಾದಿ ಮನೋಭಾವಗಳಿಂದ ಅವ ನರಳುತ್ತಾನೆ.

ಕಾಮಾತುರನಾದವನು, ಸಮಾಜದ ಕಟ್ಟುಪಾಡುಗಳನ್ನು ಗಣನೆಗೆ ತಂದುಕೊಳ್ಳುವುದೇ ಇಲ್ಲ. ದಿಟವಾಗಿಯೂ "ನ ಭಯಂ,ನ ಲಜ್ಜಾ" ಆಗುತ್ತಾನೆ. ಮಾನವಾಗಿ ಬಲು ಕಾಲ ಬಾಳಿದ ಮುದುಕ, ಮುಪ್ಪಿನಲ್ಲಿ ಹುಡುಗಿಯ ಮೋಹಕ್ಕೊಳಗಾಗಿ, ಮಾನಾಪಮಾನಗಳನ್ನು ಕಡೆಗಣಿಸಿ, ನಗೆಪಾಟಲು ಸ್ಥಿತಿಗೆ ಬರುವುದನ್ನು ಯಾರು ತಾನೇ ಕಂಡಿಲ್ಲ! ಪ್ರೇಯಸಿಯನ್ನು ಕಾಣಲೋಸುಗ, ಹಾವನ್ನೇ ಹಗ್ಗವೆಂದು ಭ್ರಮಿಸಿ, ಅದನ್ನು ಹಿಡಿದು, ಮಹಡಿಯನ್ನು ಹತ್ತಿ ಹೋದ ಕಾಮಾತುರನ ಕತೆಯನ್ನು ಕೇಳಿದ್ದೇವಲ್ಲ! ಅವನಿಗೆ ಭಯವೇನಾದರೂ ಆ ಸಮಯದಲ್ಲಿ ಇದ್ದಿತೇ?

ಕಾಮಾವಸ್ಥೆಯು ಉಗ್ರವಾದಾಗ ಭಯವು ಇಲ್ಲವಾಗುತ್ತದೆ.

೩ ಸಮಾಜದ ಕಟ್ಟುಪಾಡುಗಳಿಗೆ ವಿಧೇಯವಾಗಿ ನಡೆದುಕೊಳ್ಳಲು ಕೆಲವೊಮ್ಮೆ ಕೆಲವರಿಗೆ ಅಸಾಧ್ಯವಾಗುತ್ತದೆ. ಅಂತಹವರು, ಆಳಮನಸ್ಸಿನ ಧಗಧಗಿಸುವ ಆಸೆ ಆಕಾಂಕ್ಷೆಗಳನ್ನು ಸಮಾಜದ ಕಟ್ಟುಪಾಡುಗಳ ಸೀಮಿತದಲ್ಲಿ, ಪೂರೈಸಿಕೊಳ್ಳಲು

ಸಾಧ್ಯವಾಗುವುದಿಲ್ಲ. ಆದರೆ ಸಮಾಜದ ಕಟ್ಟುಪಾಡುಗಳನ್ನು ಪಾಲಿಸುವುದು ಅಗತ್ಯ ಎಂಬ ಅರಿವೂ ಅವರಲ್ಲಿ ಧೃಡವಾಗಿರುತ್ತದೆ. ಇಂತಹ ಗೊಂದಲದಲ್ಲಿ ಸಿಕ್ಕಿ ಅವರ ಮನಸ್ಸು, ಎತ್ತು ಏರಿಗೆ ಎಳೆಯಿತು, ಕೋಣ ನೀರಿಗೆ ಇಳಿಯಿತು, ಎನ್ನುವಂತೆ ಪೇಚಾಡುತ್ತದೆ. ಇಂತಹ ನಿವಾರಿಸಲಾಗದ ಪೇಚಾಟ ಬಂದಾಗ, ಪರಿಹರಿಸಲಾಗದ ಸಮಸ್ಯೆಯು ಎದ್ದಾಗ, ಹುಚ್ಚು ಹಿಡಿಯುತ್ತದೆ. ಆಗ ವ್ಯಕ್ತಿಯು ಸಮಾಜದ ಕಟ್ಟುಪಾಡುಗಳನ್ನು ನಿರ್ಲಕ್ಷಿಸುತ್ತಾನೆ. ತನಗೆ ತೋಚಿದ ಅಸಂಭದ್ಧವನ್ನು ಮಾಡಿಯೇ ಬಿಡುತ್ತಾನೆ. ಅಂತಹ ಕೆಲಸದ ದುಷ್ಪರಿಣಾಮದ ಅರಿವೂ ಅವನಿಗಿರುವುದಿಲ್ಲ.

ಹುಚ್ಚು ಹಿಡಿದವರಿಗೆ ಭಯವು ಇರುವುದಿಲ್ಲ

ಆದರೆ ಕೆಲವು ತರಹ ಹುಚ್ಚು ಹಿಡಿದವರು, ಹುಚ್ಚರಂತೆ ಸಮಾಜದಲ್ಲಿ ಕಾಣಿಸಿಕೊಳ್ಳಬೇಕಾಗಿಲ್ಲ. ನಾಲ್ಕೈದು ಒಳ್ಳೆಯ ಅಂಶಗಳನ್ನು ಅವರು ತಮ್ಮ ಬದುಕಿನಲ್ಲಿ ಪ್ರತ್ಯಕ್ಷ ಕಾಣಿಸುತ್ತಾರೆ. ಹಾಗಾಗಿ ಅವರುಗಳನ್ನು ಸಮಾಜವು ನಾಯಕರೆಂದು ಪರಿಗಣಿಸಲೂ ಸಾಧ್ಯ. Megalomania "ನಾನೊಬ್ಬ ಅತಿ ದೊಡ್ಡ ಮಾನವ, ದೈವೀಸಂಕಲ್ಪದಂತೆ, ನನ್ನವರ ಉದ್ಧಾರಕ್ಕಾಗಿ, ನಾನು ಅವತರಿಸಿದ್ದೇನೆ" ಎಂಬ ಹುಚ್ಚು ಅವರಿಗೆ ಹಿಡಿದಿರುತ್ತದೆ. ಜರ್ಮನಿಯ ಹಿಟ್ಲರ್ ಇದಕ್ಕೆ ನಿದರ್ಶನ. ಈ ಹುಚ್ಚು ಹಿಡಿದವರಿಗೆ ಕೆಲಕಾಲ ಯಾವ ಭಯವೂ ಇರುವುದಿಲ್ಲ. ಅವರು ಆಡಿದ್ದೇ ಆಟವಾಗಿ ಬಿಡುತ್ತದೆ. ಯಾವುದೋ ನಿಮಿ

ತ್ತದಿಂದಾಗಿ ಮೊದಲು ಮೊದಲು ಅವರುಗಳಿಗೆ ಜಯವೂ ಲಭಿಸುತ್ತದೆ. ಆಗ ಹುಚ್ಚನಿಗೆ ಹೆಂಡ ಕುಡಿಸಿದಂತಾಗುತ್ತದೆ. ಅಂದಮೇಲೆ ಆ ಅವಸ್ಥೆಯಲ್ಲಿ ಭಯವು ಇಲ್ಲವಾಗುತ್ತದೆ.

೪ ಕೆಲವು ಮಾದಕ ವಸ್ತುಗಳನ್ನು ಸೇವಿಸಿದಾಗ, ಸಾಧಾರಣವಾಗಿ ಕಾಣಬರುವ ಭಯವು ತುಂಬಾ ಕಡಿಮೆಯಾಗುತ್ತದೆ. ಹೆಂಡ, ಸಾರಾಯಿ ಇತ್ಯಾದಿ ಮಧ್ಯಗಳು ಈ ಪರಿಣಾಮವನ್ನು ಬೀರುತ್ತವೆ. ಖೂನಿಯನ್ನಾಗಲೀ ದರೋಡೆಯನ್ನಾಗಲೀ ಮಾಡ ಹೋಗುವವರು, ಸಾಮಾನ್ಯವಾಗಿ ಹೆಂಡ ಕುಡಿದು, ಆ ಅಮಲಿನಲ್ಲೇ ತಮ್ಮ ನಿರ್ದಿಷ್ಟ ಕಾರ್ಯವನ್ನು ಮಾಡುತ್ತಾರೆ. ಸಾಮಾನ್ಯ ಸ್ಥಿತಿಯಲ್ಲಿ ಯಾವ ಕಾರ್ಯವನ್ನು ಮಾಡಲು ಭೀಭತ್ಸ್ಯದಿಂದ ಹೇಸುವರೋ, ಅಂತಹ ಸಭ್ಯಸ್ಥರು ಕೂಡ, ಮದ್ಯಪಾನದ ಅಮಲಿನಲ್ಲಿ, ನಿರ್ಲಜ್ಜೆಯಿಂದ, ನಿರ್ಭಯದಿಂದ ಮಾಡಬಾರದ್ದನ್ನು ಮಾಡಿಬಿಡುತ್ತಾರೆ.

೫ ಮೆದುಳಿನ ಒಂದು ಭಾಗವನ್ನು (Cingular Gyrus; Area 24; ಎಂಬ ಭಾಗವನ್ನು,) ಪ್ರಯೋಗಕ್ಕೆ ಒಳಗಾದ ಪ್ರಾಣಿಗಳಲ್ಲಿ, ಶಸ್ತ್ರ ಚಿಕಿತ್ಸೆಯಿಂದ ಸುಟ್ಟರೆ ಅಥವಾ ಕತ್ತರಿಸಿಟ್ಟರೆ, ಆನಂತರ ಆ ಪ್ರಾಣಿಗಳು ಸ್ವಾಭಾವಿಕ ಲಜ್ಜೆಯನ್ನೂ, ಸಾಮಾನ್ಯ ಭಯವನ್ನೂ ಪ್ರದರ್ಶಿಸುವುದಿಲ್ಲ.

ಕೆಲವು ವೇಳೆ ಮನುಷ್ಯರಲ್ಲಿ, ಸಿಫಿಲಿಸ್ ಎಂಬ ಕಾಮ ಬೇನೆಯು ಬಡಿದಾಗ, ವಿಷಕ್ರಿಮಿಗಳು ಮೆದುಳಿನ ಈ ಭಾಗ

ವನ್ನು ತಿಂದುಹಾಕಿಬಿಡುತ್ತವೆ. ಇದೊಂದೇ ಮೆದುಳಿನ ಭಾಗವನ್ನಲ್ಲ. ಇತರ ಕಡೆಗಳಲ್ಲೂ ಹಾವಳಿಯನ್ನು ಮಾಡುತ್ತವೆ. ಇಂತಹ ರೋಗಿಗಳು ನಿರ್ಭಯವನ್ನೂ ನಿರ್ಲಜ್ಜೆಯನ್ನೂ ತಮ್ಮ ನಡವಳಿಕೆಯಲ್ಲಿ ಕಾಣಿಸುತ್ತಾರೆ. General Paralysis of the Insane ರೋಗದಲ್ಲಿ ಈ ಪರಿಣಾಮಗಳನ್ನು ಕಾಣಬಹುದು. ಒಂದು ಆಶ್ಚರ್ಯದ ಸಂಗತಿಯೆಂದರೆ ಇಂತಹ ರೋಗಿಗಳಲ್ಲೂ "ನಾನು ಬಲು ದೊಡ್ಡವ" ಎಂಬ Megalo Maniac ಭಾವನೆಯು ಮೂಡಿರುತ್ತದೆ.

ಮೆದುಳಿನ area 24 ಎಂಬ ಭಾಗವು ಹಾನಿಗೊಳಪಟ್ಟರೆ ಭಯವು ಇಲ್ಲವಾಗುತ್ತದೆ. ಇಂತಹವರು ದೈಹಿಕ ಕಾರಣಗಳಿಂದಾಗಿ ಹುಚ್ಚು ಹಿಡಿದವರು ಎನ್ನಬೇಕು. ಇವರದೂ ಹುಚ್ಚರ ನಡವಳಿಕೆಯೇ!

೬

ಪ್ರಕೃತಿಯಲ್ಲಿ ಭಯದ ಅಗತ್ಯ

ಪ್ರಾಣಿಗಳ ಹುಟ್ಟು ಗುಣಗಳಲ್ಲಿ ಭಯವು ಮುಖ್ಯವಾದುದು ಎಂದು ವಿವರಿಸಲಾಯಿತು. ಪ್ರಕೃತಿಯು ಹೀಗೆ ಮಾಡಲು ಯಾವುದೋ ಅಗತ್ಯವಾದ ಕಾರಣವು ಇದ್ದೇ ಇರಬೇಕು. ಈ ವಿಷಯವನ್ನು ಸ್ಥೂಲವಾಗಿ ಪರಿಶೀಲಿಸೋಣ.

ಹುಟ್ಟಿದ ಶಿಶುವಿಗೆ ಹುಟ್ಟು ಗುಣಗಳು Instincts ಎಂಬುವು ಆಜನ್ಮ ಬಳುವಳಿಯಾಗಿ ಬಂದವುಗಳು. ಆನಂತರ ಅದು ಸುತ್ತಲಿನ ಪ್ರಪಂಚದಲ್ಲಿ ಬಾಳಬೇಕಾದಾಗ, ಪ್ರಪಂಚದ ಅರಿವನ್ನು ಪಡೆಯಲು ಯತ್ನಿಸುತ್ತದೆ. ಈ ಪ್ರಯತ್ನಗಳಲ್ಲಿ ಯಾವು ಯಾವುದು ಅದಕ್ಕೆ ಸುಖದ ಅನುಭವವನ್ನು ಕೊಡುತ್ತದೆ, ಯಾವು ಯಾವುದು ನೋವಿನ ಅನುಭವವನ್ನು ಕೊಡುತ್ತದೆ ಎಂದು ಗಮನಿಸುತ್ತೆ. ನಂತರ ಸುಖ ಕೊಡುವ ಕಾರ್ಯಗಳನ್ನು ಮಾಡಲು ತೊಡಗುತ್ತದೆ. ಯಾವ ಆಹಾರವನ್ನು ತಿಂದರೆ ಬಾಯಿಗೆ ರುಚಿಯಾಗಿರುತ್ತದೋ ಅವನ್ನು ರೂಢಿಸಿಕೊಳ್ಳುತ್ತದೆ. ಯಾವ ಆಹಾರ ಸೇವನೆಯಿಂದ ಹೊಟ್ಟೆನೋವು ವಾಂತಿ ಭೇದಿಗಳಾಗುತ್ತವೋ ಅವನ್ನು ತ್ಯಜಿಸುತ್ತವೆ., ಅದೇ ರೀತಿಯಲ್ಲಿ ಮನಸ್ಸಿಗೆ ಸಂತೋಷವನ್ನು ಕೊಡುವ ಕೆಲಸಗಳನ್ನು ಮಾಡುತ್ತದೆ. ಮನಸ್ಸಿನ ನೆಮ್ಮದಿಯನ್ನು ಕೆಡಿಸುವ ಕೆಲಸಗಳನ್ನು ದೂರೀಕರಿಸುತ್ತದೆ.

ಈ ಎಲ್ಲ ಕಲಿಯುವಿಕೆಯಲ್ಲೂ, Promise of a Reward, ಬಹುಮಾನದ ಸಂಭವವಿರುವುದು ಮತ್ತು Fear of Punishment, ಶಿಕ್ಷೆಯ ಭಯ, ಇವೆರಡೇ ಮೂಲಭೂತವಾದ ಪ್ರೇರಕಗಳು.

ಆಹಾರ ಸೇವನೆಯನ್ನಾಗಲೀ, ವಿಸರ್ಜನೆಯನ್ನಾಗಲೀ, ಅಮ್ಮ ಹೇಳಿದಂತೆ ಅಥವಾ ನಿರೀಕ್ಷಿಸಿದಂತೆ ಮಗುವು ಮಾಡಿ

ದರೆ, ಅಮ್ಮ ಮುದ್ದಿಡುತ್ತಾಳೆ ಎಂದು ತಿಳಿದ ಮಗು, ಅಮ್ಮನ ಮೇಲೆ ಕೋಪ ಬಂದಾಗ, ಆಹಾರ ಸೇವನೆಯನ್ನಾಗಲೀ, ವಿಸರ್ಜನೆಯನ್ನಾಗಲೀ ಸರಿಯಾಗಿ ಮಾಡುವುದಿಲ್ಲ. ಅಮ್ಮನಮೇಲೆ ತೀರಿಸಿಕೊಳ್ಳುವ ಸೇಡಿನಂತೆ, ಈ ಕಾರ್ಯಕ್ರಮ. ತೋರಮನಸ್ಸಿನಲ್ಲಿ ಯೋಚಿಸಿ, ವಿಚಾರ ಮಾಡಿ ಮಗುವು ಹೀಗೆ ಮಾಡುತ್ತದೆ ಎಂದಲ್ಲ. ಆಳಮನಸ್ಸಿನಲ್ಲಿ ಈ ತೆರನ ಕಾರ್ಯಕ್ರಮಗಳು ಸಾಗುತ್ತವೆ ಎಂದು ಅರ್ಥ. ಮಕ್ಕಳ ಮನಃಶಾಸ್ತ್ರಜ್ಞರು ವಿಚಾರ ಮಾಡಿ ಈ ಸೂತ್ರವನ್ನು ಸಿದ್ಧಾಂತ ಮಾಡಿದ್ದಾರೆ. ಅಮ್ಮ ಮುದ್ದಿಟ್ಟಾಗ ಮಗುವಿನ ಮನಸ್ಸಿನಲ್ಲಿ ಹಿಗ್ಗು ಉಂಟಾಗುತ್ತದೆ. ನನ್ನ ಕಂಡರೆ ಅಮ್ಮನಿಗೆ ಪ್ರೀತಿ, ಎಂಬ ಭಾವನೆಯು ಮಗುವಿನ "**ನನ್ನ**" ತನಕ್ಕೆ ಬಲು ಆಪ್ಯಾಯಮಾನವಾಗಿರುತ್ತದೆ. Ego Satisfaction–ಈ ಬಹುಮಾನವನ್ನು ಅಮ್ಮನಿಂದ ಪಡೆಯಲು, ಮಗುವು, ಅಮ್ಮ ಕಲಿಸಿದಂತೆ, ನಿರೀಕ್ಷಿಸಿದಂತೆ, ಮಾಡಲು ಕಲಿಯುತ್ತದೆ.

ಅದೇ ರೀತಿಯಲ್ಲಿ, ಮುಟ್ಟಬಾರದುದನ್ನು ಮುಟ್ಟಿ, ಇದ್ದ ಸಾಮಾನನ್ನು ಚೆಲ್ಲಾಡಿದಾಗ ಅಮ್ಮ ಮಗುವನ್ನು ಹೆದರಿಸುತ್ತಾಳೆ, ರೇಗಿ ಬೈಯ್ಯುತ್ತಾಳೆ. ಕೊನೆಗೆ ಎರಡು ಪೆಟ್ಟು ಹಾಕಿದರೂ ಹಾಕುತ್ತಾಳೆ. ಇವುಗಳಿಂದ ಮಗುವಿಗೆ ಭಯವಾಗುತ್ತದೆ. ಇಂತಹ ಶಿಕ್ಷೆಗಳ ಭಯವೇ ಇನ್ನು ಮುಂದೆ ಅಂತಹ ಚೆಲ್ಲಾಟಗಳನ್ನು ಮಾಡಬಾರದು ಎಂದು, ಮಗುವಿಗೆ ಕಲಿಸುತ್ತದೆ.

ಬೆಳೆದ ಮೇಲೆ ಕೂಡ ಸಮಾಜದಲ್ಲಿ, ಸಮಾಜದ ಭದ್ರತೆಗಾಗಿ, ಸಮಾಜದ ಒಳಿತಕ್ಕಾಗಿ, ಸುತ್ತಲಿರುವ ಸಮಸ್ತರ ಸುಖಕ್ಕಾಗಿ ಏನಾದರೂ ಕೆಲಸ ಮಾಡಿದರೆ ಸಮಾಜವು ಅಂತಹವರನ್ನು ಮನ್ನಣೆ ಮಾಡುತ್ತದೆ, ಎಂಬ ಅರಿವು ಇರುತ್ತದೆ. ಮನಸ್ಸಿಗೆ ಹಿಗ್ಗನ್ನುಂಟುಮಾಡುವುದರಲ್ಲಿ ಇತರರ ಮನ್ನಣೆಯು ಅತಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಮನ್ನಣೆಯ ದಾಹ ಅತಿ ತೀಕ್ಷ್ಣ ತರಮಯ್ಯ ಎಂದು ಕವಿಯು ನುಡಿದಾಗ, ಈ ವೈಜ್ಞಾನಿಕ ಸತ್ಯವನ್ನಷ್ಟೇ ಸ್ವಲ್ಪವೂ ಉತ್ಪ್ರೇಕ್ಷೆಯಿಲ್ಲದೆ ಹೇಳಿದರು. ನೆರೆಹೊರೆಯುವರ ಮನ್ನಣೆಯೇ ಮಾನವನನ್ನು ದೊಡ್ಡವನಾದ ಮೇಲೆ ನಡಸುವ ಪ್ರೇರಣೆ. Promise of a Reward ಮನ್ನಣೆ.

ಅಂತೆಯೇ ಕಾನೂನಿನ ಶಿಕ್ಷೆಯ ವಿವರಗಳು, ಮಾಡಬಾರದುದನ್ನು ಮಾಡಿ ಸಿಕ್ಕಿಹಾಕಿಕೊಂಡರೆ, ಶಿಕ್ಷೆಯು ಖಂಡಿತ ಮತ್ತು ಭೀಕರ ಎಂದು ತೋರಿಸಿಕೊಡುತ್ತವೆ. ದೈಹಿಕ ಶಿಕ್ಷೆಗಿಂತ, ಹಣದ ಜುಲ್ಮಾನೆಗಿಂತ ಜನರ ಮೂದಲಿಕೆಯ ಭಯವೇ ಬೆಳೆದ ಮನುಷ್ಯನನ್ನು ನಡಸುತ್ತದೆ.

ಅಂದರೆ, ಮಗುವಾಗಲೀ, ಶಾಲೆಯ ವಿದ್ಯಾರ್ಥಿಯಾಗಲೀ ಸಂಸಾರದ ಜೀವಿಯಾಗಲೀ, ಸಮಾಜದ ಪ್ರಜೆಯಾಗಲೀ, ಯಾವ ಹಂತದಲ್ಲಿ ಕೂಡ, ಬಹುಮಾನದ ನಿರೀಕ್ಷೆ, ಮತ್ತು ಶಿಕ್ಷೆಯ ಭಯ ಇವೆರಡೇ ಮೂಲಭೂತವಾಗಿ ಮನುಷ್ಯನನ್ನು ನಡಸುವುದು.

ಮೂಲಭೂತವಾಗಿ ಎಂಬ ಮಾತನ್ನು ಉಪಯೋಗಿಸಿದೆವು. ಇದು ಅತಿ ಮುಖ್ಯವಾದ ವಾಕ್ಯ. ಗಮನಿಸಬೇಕಾದ ವಿಷಯ.

ಏಕೆಂದರೆ, ಬಡ ವಿದ್ಯಾರ್ಥಿಯನ್ನು ಕಂಡು, ಅನುಕಂಪದಿಂದ, ಯಾರಿಗೂ ತಿಳಿಯದಂತೆ, ಸಮಾಜದ ಮನ್ನಣೆಯನ್ನು ತೃಣೀಕರಿಸಿ, ಉದಾರ ಸಹಾಯ ಮಾಡುವ ಮಹನೀಯರು ಇದ್ದಾರೆ. ಆದರೆ ಅಂತಹವರಲ್ಲಿ ಬಹಳ ಮಂದಿಗೆ, ತಮ್ಮ ಕೆಲಸದಿಂದ, ತಮ್ಮ ಮೇಲೆ, ತಮ್ಮ ಮನಸ್ಸಿನಲ್ಲಿ, ತಮ್ಮಿಂದಲೇ ಮನ್ನಣೆಯು ದೊರೆಯುತ್ತದೆ. ಇತರರ ಕಣ್ಣಿಗೆ ಬೀಳದಂತೆ, ಎಲೆಯ ಮರೆಯ ಕಾಯಿನಂತೆ, ಸುಸಂಸ್ಕೃತ ರೀತಿಯಲ್ಲಿ ಸಹಾಯ ಮಾಡಿದೆ, ಪುಣ್ಯದ ಕೆಲಸವನ್ನು ಮಾಡಿದೆ ಎಂಬ ಆತ್ಮಮನ್ನಣೆಯು, ಅತಿ ಸುಖಕಾರಿಯಾದುದು. ಆದರೆ ಅದೂ ಮನ್ನಣೆಯೇ ! ಮೂದಲಿಸಬೇಕಾದ ಮನ್ನಣೆಯಲ್ಲ, ದಿಟ.

ಸಕಲ ಮಾರ್ಗಗಳಲ್ಲಿಯೂ ಹಣವನ್ನು ಸಂಪಾದಿಸಿ; ಕಾನೂನಿನ ಕಟ್ಟು ನಿಯಮಗಳ ಬಂಧನದಲ್ಲಿಯೇ ಹಣವನ್ನು ಸಂಪಾದಿಸಿದವನು, ಧರ್ಮಕಾರ್ಯಕ್ಕಾಗಿ ಉದಾರದಾನವನ್ನು ಮಾಡುತ್ತಾನೆ. ಅಂತಹವನಿಗೆ ಕಾನೂನು ಶಿಕ್ಷಿಸುತ್ತದೆ ಎಂಬ ಭಯವಿರುವುದಿಲ್ಲ. ಅದಕ್ಕೆ ಸರಿಯಾಗಿ ನಡದುಕೊಂಡಿರುತ್ತಾನೆ. ಆದರೆ ಅವನ ಮನಸ್ಸು ಹುಳ್ಳ ಹುಳ್ಳಗೆ ಇರುತ್ತದೆ.

ಸಾಕ್ಷಿಗಳು, ಪುರಾವೆಗಳು ಇಲ್ಲದ ಕಾರಣ'. ಅವರ ಹಣವನ್ನು ವ್ಯಾಪಾರದ ನೆಪ ಹೂಡಿ ನಾನು ದಕ್ಕಿಸಿಕೊಂಡೆ. ಸಮಾಜ ವಾಗಲೀ, ನ್ಯಾಯ ಸ್ಥಾನಗಳಾಗಲೀ ಈ ಮರ್ಮವನ್ನು, ಈ ಗುಟ್ಟನ್ನು ಅರಿತಿಲ್ಲ. ಆದರೂ ಭಗವಂತನಿಗೆ ತಿಳಿದಿರುತ್ತಲ್ಲ. ಅವ ಯಾವುದಾದರೂ ಘೋರ ಶಿಕ್ಷೆಯನ್ನು, ನೀಡುತ್ತಾ ನೇನೋ, ಲಕ್ವ ಬಡಿದು ಅಂಗ ವಿಕಲನಾಗುತ್ತೇನೆಯೋ, ಬೆಳೆದ ಮಗನಿಗೆ ಆಘಾತವಾಗಬಹುದೋ, ಮುದ್ದು ಮಗಳು ಮದುವೆ ಯಾದ ಕೆಲ ಕಾಲದಲ್ಲೇ, ನನ್ನ ಮನೆಗೆ ಹಿಂತಿರುಗುವಂತಾಗು ತ್ತದೆಯೋ, ಎಂಬೆಲ್ಲ ಭಯವು ಮುತ್ತುತ್ತದೆ. ಆಳ ಮನಸ್ಸಿನ ಅಂತಹ ಭಯವನ್ನು ನಿವಾರಿಸಲೋಸುಗ ಅವ ದಾನ ಧರ್ಮ ಗಳನ್ನು ಮಾಡುತ್ತಾನೆ. ಅಂದರೆ ಧರ್ಮರತ್ನಾಕರರೆಂದು, ಧರ್ಮ ಸಾಗರಗಳೆಂದು, ಧರ್ಮ ಸರೋವರಗಳೆಂದು ಮನ್ನಣೆ ಯನ್ನು ಸಮಾಜದಲ್ಲಿ ಪಡೆದ ಧರ್ಮಿಷ್ಟರನ್ನು ಅವರ ಆಳ ಮನಸ್ಸಿನ ಭಯವೇ, ಆ ರೀತಿಯಲ್ಲಿ, ನಡಸಿತು ಎನ್ನಬಹುದು. ಸಮಾಜದ ಸೇವೆಯನ್ನು ಮಾಡಿದ ಇಂತಹ ಧರ್ಮಿಷ್ಟರನ್ನು ಅಲ್ಲಗಳೆಯಬೇಕೆಂದು ಹೀಗೆ ಬರೆದಿಲ್ಲ. ಅಂತಹವರ ಮನಸ್ಸಿನ ವಿಶ್ಲೇಷಣೆಯಲ್ಲಿ ಇದೊಂದು ಹಂತ. ಒಂದು ಅಂಶ. ಯಾರಿಗೂ ತಿಳಿಯದೆ ಇದ್ದರೂ, ತಾವು ಮಾಡಿದ್ದು ಸರಿಯಲ್ಲ, ಇದಕ್ಕೆ ಪಶ್ಚಾತ್ತಾಪ ಪಟ್ಟು, ಪ್ರಾಯಃಶ್ಚಿತ್ತ ಮಾಡಿಕೊಳ್ಳುವಂತೆ ಧರ್ಮದಾನಾದಿಗಳನ್ನು ಮಾಡಿದವರು, ಮನ್ನಣೆಗೆ ಅರ್ಹರು. ಅವರನ್ನು ಹೊಗಳಲೇಬೇಕು. ಆದರೂ ಅಂತಹವರ ಆಳ

ಮನಸ್ಸಿನ ವಿಕಾರ ವೃತ್ತಿಗಳನ್ನು ವೈಜ್ಞಾನಿಕವಾಗಿ ವ್ಯಾಸಂಗಕ್ಕೆ ಗುರಿಪಡಿಸಲೂ ಬೇಕು.

ಇಂತಹ ನಿದರ್ಶನಗಳನ್ನು, ಅಸಂಖ್ಯಾತವಾಗಿ, ಕೊಡಬಹುದು. ಆಳ ಆಳವಾಗಿ ವಿಚಾರ ಮಾಡಿದಂತೆಲ್ಲ,ಮನುಷ್ಯನ ನಡವಳಿಕೆಯನ್ನು ರೂಪಿಸುವ ಎರಡು ಮೂಲಭೂತ ಪ್ರೇರಕಗಳೆಂದರೆ, ಒಂದು, ಬಹುಮಾನದ ನಿರೀಕ್ಷೆ; ಎರಡು ಶಿಕ್ಷೆಯ ಭಯ. ವಿಶಾಲವಾದ ಬಾಳ ಜಗತ್ತಿನಲ್ಲಿ ಇವುಗಳ ವಿರಾಡ್ರೂಪವನ್ನು, ವಿಧ ವಿಧ, ವಿವಿಧ ಮುಖಗಳಲ್ಲಿ ಕಾಣಬಹುದು. ಆದರೆ ಇವೆಲ್ಲಾ ಮುಖವಾಡಗಳ ಹಿಂದೆ ಇರುವ ಮುಖಗಳು ಮೂಲಭೂತವಾದ ಎರಡೇ.

ಮನೋನಿಯಂತ್ರಣ

ಕಲಿಸುವಿಕೆಯ ಈ ಎರಡು ಮೂಲಭೂತ ನಿಯಮಗಳನ್ನು ಬಳಸಿಕೊಂಡು ಕೆಲವು ದಶಕಗಳ ಹಿಂದೆ ರಷ್ಯಾದಲ್ಲಿ ಜನರ ಮನಸ್ಸನ್ನು ಆಡಳಿತಗಾರರ ಧ್ಯೇಯಗಳಿಗನುಸಾರವಾಗಿ, ನಿಯಂತ್ರಿಸಲಾರಂಭಿಸಿದರು. **Brain washing** ಎಂದು ಪ್ರಸಿದ್ಧವಾದ ಈ ಪ್ರಯೋಗದಿಂದ, ಬಾಲ್ಯದಲ್ಲಿ ಕಲಿತು ರೂಢಿಸಿಕೊಂಡ ನಂಬಿಕೆಗಳನ್ನು, ಪಾಪ ಪುಣ್ಯ ಇತ್ಯಾದಿ ಕಲ್ಪನೆಗಳನ್ನು ತೊಡೆದು ಹಾಕಲು ಸಾಧ್ಯವಾಯಿತು. ಮನಸ್ಸಿನ ಅಂತಹ ದುರ್ಬಲ ಸ್ಥಿತಿಯಲ್ಲಿದ್ದವರನ್ನು ಹೊಸ ಸಿದ್ಧಾಂತದ ಉಪದೇಶಕ್ಕೆ

ಒಳಪಡಿಸಲಾಯಿತು. ಬಲು ಬೇಗ ಅಂತಹವರು, ಹೊಸ ಉಪದೇಶದ ಉಗ್ರ ಶಿಷ್ಯರಾದರು.

Brain washing ನಲ್ಲಿ ಇಪ್ಪತ್ತು ನಾಲ್ಕು ತಾಸುಗಳೂ ವ್ಯಕ್ತಿಯನ್ನು ಏಕಾಂತದಲ್ಲಿಟ್ಟು, ಮನವನ್ನೂ ದೇಹವನ್ನೂ ದಣಿಯುವಂತೆ ಮಾಡುತ್ತಿದ್ದರು. ಹೊಸ ಸಿದ್ಧಾಂತವನ್ನು ಒಪ್ಪಿದರೆ ಇಂತಿಂತಹ ಸ್ವರ್ಗಸಿಗುತ್ತದೆ ಎಂದು ಆಶೆಯನ್ನು ತೋರಿಸುವುದು. ಅದನ್ನು ಒಪ್ಪದಿದ್ದರೆ ಇಂತಿಂತಹ ಘೋರ ಯಾತನೆಯನ್ನು ಕೊಡುವ ಶಿಕ್ಷೆ ವಿಧಿಸಲಾಗುತ್ತದೆ, ಎಂದು ಶಿಕ್ಷೆಯನ್ನೂ ಕೊಡುವುದು. ತನ್ನ ಮನದ ಕ್ಲೇಶವನ್ನು ಹೇಳಿ ಕೊಳ್ಳಲು ವ್ಯಕ್ತಿಗೆ ಅವಕಾಶವಿರುವುದಿಲ್ಲ. ಇತರರೊಡನೆ ಸಂಪ ರ್ಕವನ್ನೂ ಬೆಳೆಸುವಂತಿಲ್ಲ. ಹೀಗಾಗಿ ಕೆಲಕಾಲದ ಮೇಲೆ ಆತ ಹೊಸ ಸಿದ್ಧಾಂತಗಳನ್ನು ಒಪ್ಪಿಕೊಳ್ಳುತ್ತಿದ್ದ. ಒಪ್ಪಿ ಕೊಂಡ ಎಂದರೆ ಮನಸಾರೆ ಒಪ್ಪಿದ ಎಂದು. ಆ ನಂತರ ಅಂತಹ ಸಿದ್ಧಾಂತವನ್ನು ಪ್ರತಿಪಾದಿಸುವವರಲ್ಲಿ ಅವ ಅತಿ ಕ್ರೂರಿಯೂ ಅಗ್ರಗಣ್ಯನೂ ಆಗುತ್ತಿದ್ದ.

ರಷ್ಯಾದಲ್ಲಿ ಇಂತಹ ಪ್ರಯೋಗಕ್ಕೆ ೧೮-೨೪ ತಿಂಗಳುಗಳು ಬೇಕಾಗುತ್ತಿತ್ತೆಂದು ವರದಿಯಾಗಿದೆ. ಇಂತಹ ವಿಷಯಗಳಲ್ಲಿ ಸತ್ಯ ಸಂಗತಿಗಳು ಸುಲಭವಾಗಿ ಹೊರಬೀಳುವುದಿಲ್ಲ. ಆದರೂ ನಂಬಬಹುದಾದ ಅವಧಿ ಅದು.

ಆದರೆ ರಷ್ಯನ್ನರಿಂದ ಈ ಪ್ರಯೋಗವನ್ನು ಕಲಿತ ಚೀಣೀಯರು ಕೇವಲ ೩–೪ ತಿಂಗಳುಗಳಲ್ಲಿ ಯಶಸ್ವಿಯಾಗಿ ಮನೋನಿಯಂತ್ರಣವನ್ನು ಮಾಡುವಷ್ಟು ಪ್ರಗತಿಯನ್ನು ಸಾಧಿಸಿದರು.

ಕೋರಿಯಾ ಸಮರದಲ್ಲಿ ಸೆರೆಸಿಕ್ಕ ಅಮೆರಿಕನ್ ಸಿಪಾಯಿಗಳನ್ನು ಈ ಪ್ರಯೋಗಕ್ಕೆ ಚೀಣಿಯರು ಗುರಿಪಡಿಸಿ, ಉಗ್ರ ಕಮ್ಯೂನಿಸ್ಟ್ ಸಿದ್ಧಾಂತಗಳನ್ನು ಉಪದೇಶಿಸಿದರು. ಶಾಂತಿ ಏರ್ಪಟ್ಟಾಗ ಇಂತಹ ಅಮೆರಿಕನ್ ಸಿಪಾಯಿಗಳು ಬಿಡುಗಡೆಯಾದರು. ಅಮೆರಿಕಾಕ್ಕೆ ಹಿಂತಿರುಗಿದರು. ಅಲ್ಲಿ ಕಮ್ಯೂನಿಸಂ ಅನ್ನು ಉಗ್ರವಾಗಿ ಭೋದಿಸಲಾರಂಭಿಸಿದರು. ಇದರಿಂದಾಗಿ ಅಮೆರಿಕಾದ ಸಮಾಜದ ಭದ್ರತೆಗೆ ಧಕ್ಕೆಯುಂಟಾಗುವಂತಾಯಿತು. ಇವರನ್ನು ಮರಳಿ ಅಮೆರಿಕನ್ ಸೈನ್ಯವು ವಾಪಸ್ಸು ಕರೆಸಿಕೊಂಡು, Re Brain wash ಮಾಡುವುದಕ್ಕೆ ಒಂದೆರಡು ವರ್ಷಗಳ ಅವಧಿ ಬೇಕಾಯಿತು. ಈ ಪ್ರಯೋಗದಲ್ಲಿ ಚೀಣೀಯರ ಪಾಂಡಿತ್ಯದ ಮುಂದೆ, ಅಮೆರಿಕನ್ನರು ಕೇವಲ ಬಾಲಕರು !

ಇಂತಹ ಪರಿಸ್ಥಿತಿಯು ಯಾವ ದೇಶಕ್ಕಾದರೂ ಸಂಭವಿಸಬಹುದು. ಸಮಾಜವನ್ನು ಒಳಗೊಳಗಿನಿಂದಲೇ ಛಿದ್ರಿಸುವ ಇಂತಹ ಪ್ರಯೋಗವು, ಶತ್ರು ಸೈನ್ಯಕ್ಕಿಂತಲೂ ಅತಿ ವಿಪತ್ಕಾರಿಯಾದುದು. ಸಾಮಾನ್ಯ ವಿದ್ಯಾಭ್ಯಾಸಕ್ಕೆ ಬಳಸಲ್ಪಟ್ಟ ಎರಡು ಮೂಲಭೂತ ನಿಯಮಗಳೇ Brain washing ಇಗೂ ಉಪಯೋಗವಾಗುತ್ತಿದೆ.

ನಮ್ಮ ದೇಶಕ್ಕೆ ಈಗ ಶತ್ರುಗಳಾಗಿರುವ ಯಾರೇ ಆದರೂ ಎಂದಾದರೂ ಈ ಪ್ರಯೋಗವನ್ನು ನಮ್ಮ ಮೇಲೆ ಸಾಧಿಸಲು ಸಾಧ್ಯ. ನಾವು ಯಾವುದನ್ನು ಸಹಸ್ರಾರು ವರ್ಷಗಳಿಂದಲೂ ಸಂಸ್ಕೃತಿ ಎಂದು ತಿಳಿದು ಹೆಮ್ಮೆ ಪಡುತ್ತಿದ್ದೇವೆಯೋ, ಆ ಕಲ್ಪನೆಯಿಂದಾಗಿ ಮನಸ್ಸಿನಲ್ಲಿ ನೆಮ್ಮದಿ ಮತ್ತು ಸಂತಸವನ್ನು ಪಡೆದಿದ್ದೇವೆಯೋ, ಅಂತಹ ಹಿರಿಯ ಸಂಸ್ಕೃತಿಗೇ ತೀವ್ರವಾದ ಧಕ್ಕೆ ತಾಕಬಹುದು. ನಮ್ಮ ಸಮಾಜದ ಅಸ್ತಿತ್ವವೇ ವಿರೂಪಗೊಳ್ಳಬಹುದು.

ಶಿಕ್ಷೆಯ ಭಯದಿಂದ ಇಂತಹ ಪ್ರಯೋಗಗಳು ಸುಲಭಸಾಧ್ಯ ಎಂದು ತಿಳಿದಾಗ. ಭಯದ ಪರಿಣಾಮವಾಗಿ ಇಂತಹ ವಿಷಗಳೂ ಹರಡಬಹುದೆಂದು ತಿಳಿದಾಗ, ಭಯದ ವಿರಾಡ್ರೂಪದ ಒಂದು ಗಹನವಾದ ರಾಕ್ಷಸೀ ರೂಪು ಕಾಣಿಸುತ್ತದೆ. ಆಗ ಭಯದ ಭಯವೇ ಉತ್ಪನ್ನವಾಗುತ್ತದೆ. ಭಯದ ಸಂತತಿಯು ಈ ರೀತಿ, ನ್ಯೂಕ್ಲಿಯರ್ ರೀಆಕ್ಷನ್ ಇದ್ದಂತೆ, ತನ್ನಿಂದ ತಾನೇ ಉತ್ಪನ್ನವಾಗಿ ಭಯಂಕರ, ಭಯಾನಕ ವಾಗುತ್ತದೆ.

೭

ಕೆಲವು ಬಾಳ ನಿದರ್ಶನಗಳು

ಆದಿ ಮಾನವನ ಕಾಲದಲ್ಲಿ ಅರಣ್ಯವಾಸಿಯಾಗಿದ್ದಾಗ, ಮನುಷ್ಯನಿಗೆ ಅಂದು ಅಂದಿನ ಭಯವು ಇರುತ್ತಿತ್ತು. ಆದರೆ ಆನಂತರ ಬುದ್ಧಿಯ ಪ್ರಗತಿಯಾದಮೇಲೆ, ಸಮಾಜದ ರಚನೆಯನ್ನು ಮಾಡಿಕೊಂಡು, ಅಂದು ಅಂದಿನ ಸುರಕ್ಷತೆಯನ್ನು ಸಾಧಿಸಿಕೊಂಡಮೇಲೆ, ಅಂದಿನ ಭಯವು ನಿವಾರಣೆಯಾಯಿತು. ಆದರೆ ಯಾವ ಬುದ್ಧಿಯ ಪ್ರಗತಿಯಿಂದ ಈ ಸುರಕ್ಷತೆಯನ್ನು ಸಾಧಿಸಿಕೊಂಡನೋ ಅದೇ ಬುದ್ಧಿಯು ನಾಳಿನ ಕಲ್ಪನೆಯನ್ನೂ, ಆಗ ಸಂಭವಿಸಬಹುದಾದ ಅಪಾಯಗಳ ಸುರಿಮಳೆಗಳನ್ನೂ ಅವನಿಗೆ ಮನದಟ್ಟು ಮಾಡಿ ತೋರಿಸಿತು. ಈ ಕಾರಣದಿಂದಾಗಿ ನಾಗರಿಕನೆನೆಸಿಕೊಂಡ, ಪ್ರಗತಿಯ ಹಂತದಲ್ಲಿ ಮೇಲು ಮೆಟ್ಟಲು ಮುಟ್ಟಿರುವನೆಂದುಕೊಂಡಿರುವ, ಇಂದಿನ ಮಾನವನು ಇಂದೆಲ್ಲವನ್ನೂ ನಾಳೆ ಏನಾಗಬಹುದೆಂಬ ಭಯದಲ್ಲಿ ಕಳೆಯುವಂತಾಗಿದೆ.

ಭಯ ೧

"ಅಂದು ಕಾಡಿನಲಿ"

ಹಿಂದೊಮ್ಮೆ ಮುಂಜಾನೆ ಬಿಲ್ಲ ಹಿಡಿದಿದ್ದೆ
ಕಂಡ ಬೇಟೆಗೆ ಅಂದು ಬಾಣವನು ಬಿಟ್ಟೆ.

ಸಿಂಹ ಬಂದುದ ಕಂಡು ಓಡಿಹೋಗಿದ್ದೆ
ಅಂದಿನೂಟವು ಆಗ ತಪ್ಪಿಹೋಗಿತ್ತು.
ಅಂದು ಕೂಟಕೆ ಎಂದು ಹೆಣ್ಣ ಹಿಂದೋಡಿದೆ,
ಅವಳ ಮೆಚ್ಚಿಸಲೆಂದು ಗಾನ ಹಾಡಿದ್ದೆ.
ಬಲಶಾಲಿ ಎದುರಿಳಿದ, ಅವಳನೆಳೆದೊಯ್ದ,
ಕಾಡೆಲ್ಲ ಗಿಡವೆಲ್ಲ ನನ್ನೊಡನೆ ಅತ್ತಿತ್ತು.
ಅಂದಿತ್ತು ಕಾಡಿನಲಿ ಅಂದಿನದ ಭಯವು
ಊಟ ಕೂಟ ತಪ್ಪಿದರು, ಕೆಳೆತನವು ಸುತ್ತು.

ಆದಿ ಮಾನವನ ಅಂದು ಅಂದಿನ ದೇಹಾಗತ್ಯಗಳ ಪೂರೈಕೆಗೆ ಅಡಚಣೆಗಳಿದ್ದುವು. ಅಂತಹ ಅಡಚಣೆಗಳ ಭಯವು ಇತ್ತು. ಆದರೆ ತಾನಿದ್ದ ಕಾಡಿನಲ್ಲಿ ಅವ ಪ್ರಕೃತಿಯ ಮಗುವಾಗಿ, ಪ್ರಕೃತಿಯ ಮಡಲಿನಲ್ಲಿದ್ದ. ವಾಸಿಸುತ್ತಿದ್ದ ವಾತಾವರಣಕ್ಕೂ ಅವನ ಸಹಜ ಪ್ರಕೃತಿಗೂ ಅನ್ಯೋನ್ಯ ಕೆಳತನವಿತ್ತು. ಹಾಗಾಗಿ ಅಂದಿನ ಭಯದೊಂದಿಗೆ ಅಂದಿನ ಕೆಳತನದ ನೆರವೂ ಇದ್ದಿತು.

ಆದರೆ ಪ್ರಗತಿಹೊಂದಿದ ನಾಗರಿಕನಾದವನು.

ಇಂದು ನಾಡಿನಲಿ

ಇಂದೊಮ್ಮೆ ಸಂಜೆಯಲಿ ಸುಡಿಯಸ್ತ್ರ ಹಿಡಿದು
ಸಂಘದಲಿ ಎಲ್ಲರನು ಅಂದಾಡುತಿರುವೆ.

ಮುಂಬರುವ ಬಾಳಿಗೂ ಸುಖದೂಟ ಕೂಟಕ್ಕು
ನೆರವಾಗಲೆಂದೆನುತ ನುಡಿಬಾಣ ಬಿಡುವೆ.

ಇಂದು ಸಿಕ್ಕಿತು ಊಟ, ಕೂಟವೂ ಕೂಡ
ಸಂಘದಲ್ಲಿ ಹೆದರುವರು ನುಡಿಬಾಣ ಬಿಡುವೆನಗೆ.

ಮುಂದೆ ಇವರುಗಳೆಲ್ಲ ಕೂಡಿ ಎದುರಿದರೆ
ಮುಂಬಾಳು ಎಂತದೋ ಎನುವ ಭಯ ಈಗ.

ಇಂದಿಹುದು ನಾಡಿನಲಿ ಮುಂದಿನದ ಭಯವು
ಊಟ ಕೂಟ ಇದ್ದರೂ ಕೆಳೆತನಕೆ ಶೂನ್ಯ.

ಇಂದಿನ ಪರಿಸ್ಥಿತಿಯಲ್ಲಿ ಗೆಳೆಯನಂತಿರುವವನು, ನಾಳಿನ ಬದಲಾಯಿಸಿದ ಪರಿಸ್ಥಿತಿಯಲ್ಲಿ ಮಿತ್ರನಾಗಿ ಉಳಿಯುತ್ತಾನೆಯೋ ಎಂಬ ಭಯವು ಇಂದು ಕಾಡುತ್ತದೆ. ಬಾಳಿನಲ್ಲಿ ಪ್ರತಿಯೊಬ್ಬನಿಗೂ ಸಂಭವಿಸುವ ಕೆಲವು ಅನುಭವಗಳು ಇಂತಹ ಭಯವನ್ನು ಪ್ರಜ್ವಲಗೊಳಿಸುತ್ತದೆ.

೨

ಅರ್ಜುನನ ಬಾಳನ್ನು ನೋಡಿ. ಕೆಚ್ಚೆದೆಯ ಬಿಲ್ಗಾರನೆಂದು ಪ್ರಸಿದ್ಧನಾಗಿದ್ದವ. ಮತ್ಸ್ಯ ಯಂತ್ರವನ್ನು ಭೇದಿಸುವಂತಹ ಕೈ ಚಳಕದವ, ಕಿರಾತನ ರೂಪುಧರಿಸಿದ್ದ ಪಶುಪತಿಯನ್ನು ಎದುರಿಸಿ ಹೋರಾಡಿ, ಪಾಶುಪತಾಸ್ತ್ರವನ್ನು ಪಡೆದ ಧೀರ. ವಿರಾಟನಗರದಲ್ಲಿ ನಪುಂಸಕನಾಗಿ ಬಾಳುತ್ತಿದ್ದ ಕಾಲದಲ್ಲಿ ಗಡಿಮೀರಿ ಬಂದ ಕೌರವರನ್ನು ಒಬ್ಬನೇ ಎದುರಿಸಿ

ಹೋರಾಡಿ ಜಯಗಳಿಸಿದ ಸಾಹಸಿ. ಆಗ ಅವನ :ನೆರವಿಗೆ ಉತ್ತರಕುಮಾರ !

ಇಂತಹ ಸತ್ವಶಾಲಿಯು ಕುರುಕ್ಷೇತ್ರದಲ್ಲಿ ಸಮರ ಸಮ್ಮುಖನಾಗಿದ್ದಾನೆ, ಶ್ರೀ ಕೃಷ್ಣ ಪರಮಾತ್ಮ ಸ್ವಯಂ ಸಾರಥಿಯಾಗಿದ್ದಾನೆ. ಅಪ್ರತಿಮ ಸಾಹಸೀ ಸೋದರರು ನೆರವಿಗಿದ್ದಾರೆ· ಅಂತಹ ಸಮಯದಲ್ಲಿ ಗಾಂಢೀವಿಯು ಬಿಲ್ಲನ್ನು ಕೆಳಗಿರಿಸಿ "ಕೃಷ್ಣ ನನಗೆ ಕ್ಲೈಬ್ಯವುತ್ತಿದೆ" ಎಂದು ವಿಶಾದವನ್ನು ತೋಡಿಕೊಳ್ಳುತ್ತಾನೆ.

ಭಯವಾಗುತ್ತಿದೆ ಕಣ್ಣಾ
ಕ್ಲೈಬ್ಯವುತ್ತಿದೆ ನನ್ನ
ತೋಯ್ದಿರುವ ಕೈಯ್ಯಲ್ಲಿ ಜಾರುತಿದೆ ಬಿಲ್ಲು
ಮೈಯೆಲ್ಲ ನಡುಗುತಿದೆ, ಉಡುಗುತಿದೆ ಝುಂಗಾಲು

ಎನುತ ಬಿಲ್ಲನು ಇಳಿಸಿ ಕುಸಿದು ಕುಳಿತಿದ್ದ
ಗಣಗುರುವನೆದುರಿಸುತ ಹೋರಾಡಿದಾ ಪಾರ್ಥ.

ಕೃಷ್ಣ ಸಾರಥಿಯವಗೆ ಬಳಗವೆಲ್ಲವು ಸುತ್ತ
ಪರಿಕಿಸುವ ಸಮಯದಲಿ ಬೆದರಿ ತೊಳಲುತಲಿದ್ದ.

೨

ಹಿಂದೊಮ್ಮೆ ಅವನೆಯೇ ಗೆಜ್ಜೆಕಟ್ಟಿ
ಗಂಡು ಹೆಣ್‌ತನ ಮರೆತು ಕುಣಿಯುತಿದ್ದ

ಷಂಡಬಾಳನು ನಡಸಿ ನಟುವನಾಗಿ
ಅರಸು ಬಾಲೆಯರಿಗೆ ನೃತ್ಯ ಕಲಿಸುತಿದ್ದ
ಆಳು ಅವನಾಗ, ಒಡೆಯ ವಿರಾಟ
ಧಾಳಿನಡಸುವ ಶತ್ರು ಗಡಿಯ ಮುತ್ತಿತ್ತು
ಉತ್ತರನ ಮುಂದಿರಿಸಿ ರಥವೇರಿ ಹೊರಟು
ಒಬ್ಬನೇ ಹೋರಾಡಿ ವಿಜಯಗಳಿಸಿದ್ದ.
ಧರ್ಮ ಸಮರಕೆ ಎನುತ ನಿಂತಿರಲು ಪಾರ್ಥ
ಭಯವವನ ಅಪ್ಪಿತ್ತು ತುಂಬಿತ್ತು ಸ್ವಾರ್ಥ
ವಿರಾಟನಗರದಲಂದು ಕೌರವನ ಜಯಿಪಾಗ
ಇರಲಿಲ್ಲ ಭಯ ಅವಗೆ, ಇದ್ದಿಲ್ಲ ಸ್ವಾರ್ಥ.

ವಿರಾಟನಗರದಲ್ಲಿದ್ದಾಗ ಅರ್ಜುನನ ಆಳಾಗಿದ್ದ. ಒಡೆಯನ ರಕ್ಷಣೆಗಾಗಿ ಧೈರ್ಯದಿಂದ ಹೋರಾಡಿದ. ಯುದ್ಧ ಮಾಡಿ ಗೆದ್ದರೆ ರಾಜ್ಯವು ನನಗೆ ಸಿಕ್ಕುತ್ತದೆ ಎನ್ನುವ ಸ್ವಾರ್ಥದ ಆಸೆಯು ಇತ್ತಿಲ್ಲ. ಒಡೆಯನಿಗಾಗಿ ಹೊಡೆದಾಡುವುದು ತನ್ನ ಕರ್ತವ್ಯ ಎಂದು ಅವ ಧೃಡವಾಗಿ ನಂಬಿದ್ದ. ಆದಕಾರಣ ಅವನಿಗೆ ಭಯದ ಸೋಂಕೂ ಇರಲಿಲ್ಲ. ಹಾಗಾಗಿ ನಿಷ್ಕಲ್ಮಶ ಮನಸ್ಸಿನಿಂದ ಸಮರಗೈದು ವಿಜಯಿಯಾದ,

ಆದರೆ ಕುರುಕ್ಷೇತ್ರದಲ್ಲಿ, ರಾಜ್ಯವನ್ನು ಗೆದ್ದು, ತನ್ನ ಅಣ್ಣ ಯುಧಿಷ್ಠಿರನನ್ನು ಚಕ್ರವರ್ತಿಯನ್ನಾಗಿ ಪಟ್ಟಾಭಿಷೇಕ ಮಾಡಿಸಬೇಕು ಎಂಬ ಸ್ವಾರ್ಥವು ತುಂಬಿತ್ತು. ಸ್ವಾರ್ಥದ ಸೆಳೆತವು

ಉಗ್ರವಾದಾಗ; ಅದರೊಡನೆಯೆ ಭಯವೂ ಹೆಡೆಯಾಡಿಸುತ್ತದೆ. ಭವಿಷ್ಯದಲ್ಲಿ ಜಯವು ಸಾಧ್ಯವೋ ಅಥವಾ ಸೋಲೇ ಸಿದ್ಧವೋ ಎಂಬ ಅನುಮಾನವು ಸ್ವಾಭಾವಿಕ. ಸಂಶಯದ ಹಿಂದೆಯೇ ಭಯವೂ ಕಾಳ ನೆರಳಿನಂತೆ ಹಿಂಬಾಲಿಸುತ್ತದೆ. ಹೀಗಾಗಿ ಕ್ಲೈಬ್ಯವು ಅವನನ್ನು ಮುತ್ತಿ ಷಂಡನಂತಾದ ಅಂದು ಅವನ ಆಗಿನ ಸ್ಥಿತಿಯನ್ನು ಗೀತೆಯಲ್ಲಿ ಈರೀತಿ ವರ್ಣಿಸಿದೆ.

ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸಂ ಸಮುಪಸ್ಥಿತಂ
ಸೀದಂತಿ ಮಮ ಗಾತ್ರಾಣಿ, ಮುಖಂ ಚ ಪರಿಶುಷ್ಯತಿ
ವೇಪಥುಶ್ಚ ಶರೀರೇಮೇ ರೋಮ ಹರ್ಷಶ್ಚ ಜಾಯತೇ
ಗಾಂಢೀವಂ ಸ್ರಂಸತೇ ಹಸ್ತಾತ್ ತ್ವಕ್‌ಚೈವ ಪರಿದಹ್ಯತೇ
ನಚ ಶಕ್ನೋಮಿ ಅವಸ್ಥಾತುಂ ಭ್ರಮತೀವ ಚಮೇಮನಃ
ನಿಮಿತ್ತಾನಿಚ ಪಶ್ಯಾಮಿ ವಿಪರೀತಾನಿ ಕೇಶವ

ಕೃಷ್ಣ ! ಯುದ್ಧಸಿದ್ಧರಾಗಿ ನಿಂತಿರುವ ಸ್ವಜನರನ್ನು ನೋಡಿ
ಕೈಕಾಲುಗಳು ಕುಸಿಯುತ್ತಿವೆ, ಬಾಯಿ ಒಣಗುತ್ತಿದೆ
ಶರೀರವು ಥರಥರ ನಡಗುತ್ತಿದೆ, ರೋಮಗಳೆಲ್ಲವು ಬೆದರಿ ನಿಂತಿವೆ
ಕೈಯ್ಯಿಂದ ಗಾಂಢೀವವು ಜಾರುತ್ತಿದೆ, ಚರ್ಮವೆಲ್ಲ ಸುಡುತ್ತಿದೆ.

ಎಲ್ಲೈ ಕೇಶವ ನಿಂತುಕೊಂಡಿರಲು ಶಕ್ತಿಯಿಲ್ಲದಂತಾಗಿದೆ. ನನ್ನ ಮನಸ್ಸೂ ವಿಹ್ವಲವಾಗಿ ಎತ್ತಿತ್ತಲೋ ಸೆಳೆದಾಡುತ್ತಿದೆ. ಕೆಟ್ಟ ಕೆಟ್ಟ ಶಕುನಗಳನ್ನು ಕಾಣುತ್ತಿದ್ದೀನಿ.

ಎಂದು ವಿವರಿಸಲಾಗಿದ.

Anxiety syndrome ಆತಂಕದ ಆಕ್ರಮಣವಾದಾಗ, ಇಂತಹ ಚಿಹ್ನೆಗಳನ್ನು ರೋಗಿಯಲ್ಲಿ ಕಾಣಬಹುದು ಎಂದು ವೈದ್ಯ ವಿಜ್ಞಾನದ ಇಂದಿನ ಪುಸ್ತಕಗಳಲ್ಲಿ ಓದಬಹುದೋ, ಅವೆಲ್ಲವನ್ನೂ ಈ ಶ್ಲೋಕಗಳಲ್ಲಿ ೨೦೦೦ ವರ್ಷಗಳ ಹಿಂದೆಯೇ ವಿಶಾಲಬುದ್ಧಿಯವರೆಂದು ಅನ್ವರ್ಥನಾಮರಾದ ವ್ಯಾಸಮಹರ್ಷಿಗಳು ವಿಶದೀಕರಿಸಿದ್ದಾರೆ. ಮನಃಶಾಸ್ತ್ರದ ಆಳ ಅಭ್ಯಾಸವನ್ನು ಋಷಿಗಳು ಮಾಡಿದರೆಂಬುದೂ, ಅತಿ ಯಶಸ್ವಿಯಾಗಿ ಸಿದ್ಧಾಂತಗಳನ್ನು ರೂಪಿಸಿದರೆಂಬುದೂ ಈ ನಿದರ್ಶನದಿಂದ ಶತಃಸಿದ್ಧವಾಯಿತು.

Anxiety syndrome ಇಗೆ ಆಳಮನದ ಭಯವೇ ಕಾರಣ. ಅದು ತೋರಮನಸ್ಸಿಗೆ ಪಸರಿಸಿದಾಗ ಹಾವಳಿಯನ್ನು ಉಂಟುಮಾಡಿಯೇ ಮಾಡುತ್ತದೆ. ತೋರಮನಸ್ಸಿಗೆ ಹೇಡಿ ನಾನು ಎಂದು ಒಪ್ಪಿಕೊಳ್ಳುವುದು ಸುಲಭವಲ್ಲ. ಆದುದರಿಂದ ಬುದ್ಧಿಯು ಯಾವುದಾದರೂ ಸಮಂಜಸವಾದ ನೆಪಗಳನ್ನು ಹೂಡಿ ತೋರಮನಸ್ಸಿಗೆ ಸಮಾಧಾನವನ್ನು ಕೊಡುತ್ತದೆ. ತಾನು ಮಾಡಬೇಕಾದ ಕಾರ್ಯವನ್ನು ಭಯದಿಂದಾಗಿ ಬಿಟ್ಟಿಲ್ಲ.

ಆದರೆ ಇತರ ಕಾರಣಗಳಿಂದ ಎಂದು ಬುದ್ಧಿಯು ಸೂಚಿಸುವ ನೆಪಗಳನ್ನು, ಮುಂದಿಡುತ್ತಾನೆ.

ಅಂದರೆ anxiety neurosis ಅಥವಾ ಆಳಮನಸದ ಭಯವು ತಾಂಡವವಾಡಿದಾಗ, ಅದು ಸ್ವಾರ್ಥದಿಂದಾಗಿ ಜನಿತ ವಾಗಿದ್ದುದು ಎಂಬುದು ಸ್ಪಷ್ಟ. ಇಂತಹ ಭಯವನ್ನು ನಿವಾರಿಸಿ ದರೆ ಆಗ ಆತಂಕದ ಹಾವಳಿಯು ಕಡಿಮೆಯಾಗುತ್ತದೆ.

ಆತಂಕದ ದುಷ್ಪರಿಣಾಮವನ್ನು ಶಮನಮಾಡಲು ನಾವು ಈಗ (tranquillisers) ಮನಃಶಾಂತಿಕಾರಕ ಔಷಧಿಗಳನ್ನು ಉಪಯೋಗಿಸುತ್ತಿದ್ದೇವೆ. ಹಾವನ್ನು ಹೊಡೆಯುವ ಬದಲು ಹುತ್ತವನ್ನು ಬಡಿಯುತ್ತಿದ್ದೇವೆ. ನಮ್ಮ ಬಡಿತದ ಸದ್ದಿಗೆ ಹೆದರಿ ಹಾವು ಹೊರಕ್ಕೆ ಬರುವುದಿಲ್ಲ ಎಂದು ತಿಳಿದಿದ್ದೇವೆ. ಆದರೆ ಸ್ವಲ್ಪ ಎಚ್ಚರ ತಪ್ಪಿದರೆ ಔಷಧಿಗಳನ್ನು ನಿಲ್ಲಿಸಿದರೆ, ಹುದುಗಿದ್ದ ಹಾವು ಹರಿದು ಬಂದು ಕುಟುಕಿಯೇ ಕುಟುಕುತ್ತೆ.

ಈ ತಾತ್ಕಾಲಿಕ ಚಿಕಿತ್ಸೆಯ ಜತೆಗೆ ಭಯದ ನಿವಾರಣೆ ಯನ್ನು ಮಾಡಲೇಬೇಕು. ಅದನ್ನು ಸಾಧಿಸಬೇಕಾದರೆ "ಸ್ವಾರ್ಥದ" ಪರಿಚಯವನ್ನು ಚೆನ್ನಾಗಿ ಅಭ್ಯಾಸಮಾಡಿ, ಸ್ವಾರ್ಥವನ್ನು ಹತೋಟಿಯಲ್ಲಿಡಲೇಬೇಕು.

೩

ಹೊಟ್ಟೆಯ ಮಾಂಸಖಂಡಗಳನ್ನು ಆರೋಗ್ಯದಿಂದಿಡಲು, ನೌಳಿ, ಉಡ್ಯಾಣ ಎಂಬ ಹಠಯೋಗದ ವ್ಯಾಯಾಮದ ಪ್ರಕಾ

ರಗಳನ್ನು ಅಭ್ಯಸಿಸುತ್ತಾರೆ. ಹೊಟ್ಟೆಯ ಮಾಂಸಖಂಡಗಳನ್ನು ಬಿಡಿ ಬಿಡಿಯಾಗಿ, ನಮ್ಮ ಮನಸ್ಸಿನ ಇಚ್ಛೆಯಂತೆ, ಕುಣಿಸ ಬಹುದು. ಆರೋಗ್ಯದ ದೃಷ್ಟಿಯಿಂದ ಜೀರ್ಣಶಕ್ತಿಯ ದೃಷ್ಟಿ ಯಿಂದ, ಮಲವಿಸರ್ಜನೆಯ ದೃಷ್ಟಿಯಿಂದ, ಇಂತಹ ವ್ಯಾಯಾ ಮವು ಬಲು ಪರಿಣಾಮಕಾರಿಯಾದುದು.

ಆದರೆ ಚೆಂದ ಕಾಣುವ ಸುಂದರ ತರುಣಿಯು ತನ್ನ ಹೊಟ್ಟೆಯ ಮಾಂಸಖಂಡಗಳನ್ನು ಕುಣಿದಾಡಿಸಿದರೆ, ಕಂಡ ವರಿಗೆ ಇನ್ನೆಂತದೋ ಖುಷಿಯು ಉಂಟಾಗುತ್ತದೆ. ಸಿನೀಮಾ ಗಳಲ್ಲಿ ಪ್ರೇಕ್ಷಕರನ್ನು ಒಲಿಸಿಕೊಳ್ಳಲೋಸುಗ ಇಂತಹ ಕುಣಿತ ಗಳನ್ನು ಪ್ರದರ್ಶಿಸುತ್ತಾರೆ. ಹೊಟ್ಟೆಪಾಡಿಗಾಗಿ ಎಂತೆಂತಹ ಆಟಗಳನ್ನೂ ಕಟ್ಟಬೇಕು, ಮತ್ತು ಪ್ರದರ್ಶಿಸುವ ವ್ಯವಸ್ಥೆಯನ್ನೂ ಮಾಡಬೇಕು.

ಪಾಶ್ಚಾತ್ಯ ಸಿನಿಮಾ ಸುಂದರಿಯರಲ್ಲಿ ೨-೩ ದಶಕಗಳ ಹಿಂದೆ ಮ್ಯಾರಿಲಿನ್ ಮನ್ರೊ ಎಂಬ ತರುಣಿಯು ಇಂತಹ ಹೊಟ್ಟೆಯ ಕುಣಿತವನ್ನು, ಉತ್ತಮ ರೀತಿಯಲ್ಲಿ ಪ್ರದರ್ಶಿಸು ತ್ತಿದ್ದಳು. ಹೊಟ್ಟೆಯ ಜತೆಗೆ ದೇಹದ ಇತರ ಅಗತ್ಯವಾದ ಭಾಗಗಳೂ ಹಿಮ್ಮೇಳದ ನೃತ್ಯವನ್ನು ಮಾಡುತ್ತಿದ್ದುದು ಸ್ವಾಭಾ ವಿಕವಾಗಿತ್ತು. ತೋರಮನಸ್ಸಿನಲ್ಲಿ ಆಕೆಯು ಕಲಾ ಪ್ರದರ್ಶನ ವನ್ನು ಬದುಕಿನ ಸಂಪಾದನೆಗಾಗಿ ಮಾಡುತ್ತಿದ್ದೇನೆ ಎಂದು ಅಂದುಕೊಂಡಿರಬಹುದು. ಆದರೆ ಆಳಮನಸ್ಸಿನಲ್ಲಿ ಇದೆಲ್ಲ

ಸೌಭಾಗ್ಯವೂ ತಾತ್ಕಾಲಿಕವಾದುದು, ಮುಂದೆ ಮೈ ಸುಕ್ಕು ಸುಕ್ಕಿದಾಗ ಗತಿ ಏನು ಎಂಬ ಭೀಕರವಾದ ಭಯವೂ ಕಾಡುತ್ತಿರಲೇಬೇಕು.

ಮ್ಯಾರಿಲಿನ್ ಮನ್ರೊ ಕುಣಿಸುತ್ತ ನಡೆದಾಗ
ಪರದೆ ಕಂಡವರೆಲ್ಲ ಹುಚ್ಚು ಮೆಚ್ಚಿದರು.
ಕಡಲ ಅಲೆಗಳನೆಲ್ಲ ಚಂದ್ರ ಕುಣಿಸುವಂತೆ
ಒಡಲ ಕಲೆಗಳನೆಲ್ಲ ಚಂದ್ರಮುಖಿ ತೋರೆ
ಬಡವ ಬಲ್ಲಿದರೆಲ್ಲ ಇಂದ್ರನಂತಾಗಿ
ಕಣ್ಣು ಸಾವಿರ ಮಾಡಿ ನೆಟ್ಟು ನೋಡಿದರು.
ಸುಕ್ಕು ನೆರಿಯನು ಎಂದು ಒಡಲು ತೋರುವುದೋ
ಎನುವ ಭಯ ಹುದುಗಿ ಆಳ ಮನದಲ್ಲಿದ್ದು
ಸಿನಿ ತೆರೆಯ ಅಡ್ಡುದ್ದ ಅವಳೊಡಲ ಕುಣಿಸಿತೋ
ಕಣ್ ಸೆಳೆವ ತಳೋದರವ ತಾನೆ ಕಡೆಯಿತೋ
ಮ್ಯಾರಿಲಿನ್ ಮನ್ರೊ ಕುಣಿಸುತ್ತ ನಡೆದಾಗ
ಆಳಮನ ಭಯವೇನೆ ಕಚಗುಳಿಯ ನಿಡುತಿತ್ತು.

೪

ಮಹಾ ಭಾರತದ ಹಿರಿಯ ಪಾತ್ರಗಳಲ್ಲಿ ಕರ್ಣನದು ಅತಿ ದುರಂತವಾದ ಪಾತ್ರ. ಉದಾತ್ತ ಉದಾರತೆಯೇ ಅವನಿಗೆ ಉರುಲಾಯಿತು. ತಾನು ಕಲಿತ ವಿದ್ಯೆಯನ್ನು ಸಮಯ ಬಂದಾಗ ಉಪಯೋಗಿಸಿಕೊಳ್ಳಲು ಅಸಮರ್ಥನಾದ.

ವಿಪ್ರಶಾಪ

ಹೆತ್ತವಳು ಇದ್ದರೂ ತಬ್ಬಲಿಯು ಕರ್ಣ
ಪ್ರೀತಿಯಲಿ ಸಾಕಿದಳು ಸಲಹಿದಳು ರಾಧೆ.
ಕಲಿವ ಪ್ರಾಯದಲವನು ಭಾರ್ಗವನ ಬಳಿ ಹೋಗಿ
ಸುಳ್ಳೊಂದ ನುಡಿದು ವರ ಶಿಷ್ಯನಾದನು.

ವಿದ್ಯೆಯೆಲ್ಲವ ಕಲಿಸಿ, ಕಳಿಸಿ ಕೊಡುವಾಗ
ಬಯಲು ಆಯಿತು ಸುಳ್ಳು. ಕೋಪದಲಿ ವಿಪ್ರ
ಶಾಪವನು ನುಡಿದು ಶಿಷ್ಯಮನಸಲಿ ನೆಟ್ಟ.
" ಮರೆತು ಹೋಗಲಿ ಮಂತ್ರ, ಸಮಯದಲಿ " ಎನುತ.

ವಿಪ್ರಶಾಪದ ಭಯವು ಬೇರೂರಿ ಮರವಾಯ್ತು
ವಿಪ್ರ ನುಡಿಯನು ಕರ್ಣ ಮರೆಯದಂತಾಯ್ತು
ಹೆದರಿಸುತ ಬೆದರಿಸುತ ಮನವ ಕಂಗೆಡಿಸಿ
ಕದನದಲಿ ಶೂರನನು ನಿರ್ಬಲನ ಮಾಡಿತು.

ಶೂರ ಕರ್ಣನ ರಥವ ನಡೆಸುತಿದ್ದ ಶಲ್ಯ
ಕರುಳು ಕುಯ್ಯುವ ಮಾತುಗಳನಾಡುತ್ತಿದ್ದ
ಭಯವ ನೀಗಿಸಿ ಮನವ ಅಣಿಗೊಳಿಸ ಸಾರಥಿಯು
ಇರಲಾಗ ವಿಪ್ರನುಡಿ ಫಲಿಸುತಿರಲಿಲ್ಲ.

ಭಾರ್ಗವಾಸ್ತ್ರದ ಮೂಲ ಮಂತ್ರವನ್ನು ಕಲಿಸಿಕೊಟ್ಟ ಗುರುವು ಶಾಪವನ್ನೂ ಕೊಟ್ಟ. ಮಂತ್ರವು ಕರ್ಣನ ನೆನಪಿನಲ್ಲಿ

ಪ್ರತಿಷ್ಠಿತವಾದ ಹಾಗೆಯೇ ಈ ಶಾಪವೂ ಅಲ್ಲಿ ಬೇರೂರಿ ಸ್ಥಿರವಾಯಿತು. ಇದೊಂದು ರೀತಿಯ Brain wash· ಯಶಸ್ವಿಯಾದ ಮನೋ ನಿಯಂತ್ರಣ. ಅಗತ್ಯಬಿದ್ದ ಸಮಯದಲ್ಲಿ ಭಾರ್ಗವಾಸ್ತ್ರವನ್ನು ಕರ್ಣ ಸ್ಮರಿಸಿಕೊಂಡಾಗ ಶಾಪವೂ ನೆನಪಾಗುತ್ತಿತ್ತು. ಹಾಗಾಗಿ ಮೂಲ ಮಂತ್ರವು ಮರೆತೇ ಹೋಗುತ್ತಿತ್ತು.

ಕೃಷ್ಣನಂತಹ ಸಾರಥಿಯು ಸಿಕ್ಕಿ Re brain wash ಮಾಡುವಂತೆ ಉಪದೇಶಿಸಿದ್ದರೆ ಆಗ ಶಾಪದ ಪರಿಣಾಮವು ಶೂನ್ಯವಾಗುತ್ತಲಿತ್ತು. ಆದರೆ ತಬ್ಬಲಿ ಕರ್ಣನ ಹೀನ ಅದೃಷ್ಟ. ಮೂದಲಿಸಿ, ಇದ್ದ ಆತ್ಮವಿಶ್ವಾಸವನ್ನು ಕಳೆದುಕೊಳ್ಳುವಂತೆ, ಸಾರಥಿಯಾದ ಶಲ್ಯ ಮಾತನಾಡಿದ.

ಯಾವುದೋ ಪುರಾಣದ ಕತೆಗಳು, ಇಂದಿನ ಜೀವನದಲ್ಲಿ ಅಂತಹ ಕಟ್ಟುಕತೆಗಳ ನಿದರ್ಶನವು ಅಪ್ರಯೋಜಕ ಎಂದು ಅನ್ನಿಸಬಹುದು. ಆದರೆ ಕತೆಗಳನ್ನು ಬರೆದವರು ತಮ್ಮ ಮನಸ್ಸಿನಲ್ಲಿ ಊಹಿಸಲ್ಪಟ್ಟುದನ್ನೇ ಬರೆಯಲು ಸಾಧ್ಯ. ಅಂತಹ ಊಹೆಗಳುಕೂಡ ಅವರ ಅನುಭವ, ಆಳಮನಸ್ಸಿನ ನೆನಪು. ಇವುಗಳನ್ನು ಆಧರಿಸಿಕೊಂಡಿರುತ್ತದೆ. ಹಾಗಾಗಿ ಬರೆದಾಗ ಊಹೆಗಳು ಎಂದು ಕಂಡರೂ ಭವಿಷ್ಯದಲ್ಲಿ ಅವು ದಿಟವಾಗಿ ಸಂಭವಿಸುವುದು ಸಾಧ್ಯ. ಹಾಗೆ ಚಿರಂಜೀವಿಯಾದಂತಹ ಬರೆವಣಿಗೆಗಳನ್ನು ದೃಷ್ಟಾರರು ಕಲ್ಪನೆ ಮಾಡುತ್ತಾರೆ. ಮನನ ಮಾಡಿದರೆ ದೃಷ್ಟಾರರಾಗಲು ಸುಲಭ.

ಅಲ್ಲದೆ ಇಂದಿನ ಜೀವನಕ್ಕೆ, ನಮ್ಮ ಬಾಳಿಗೆ, ಪುರಾಣದ ಕತೆಗಳ ನಿದರ್ಶನಗಳು, ಆದರಲ್ಲೂ ಮನಸ್ಸಿಗೆ ಸಂಬಂಧಪಟ್ಟುವು ಶತಾಂಶ ಅನ್ವಯವಾಗುತ್ತದೆ.

ಆದಿಮಾನವನಂತೆ ಇಂದೂ ಬಡವರಿಗೆ "ಇಂದಿನ" ಭಯವೇ! ಕೆಳಿತನವು ಅವರಲ್ಲಿ ಏರ್ಪಟ್ಟು ಅವರುಗಳು ಸುಸಂಘಟಿತವಾಗಿ ರುವುದನ್ನು ನಾವು ಪ್ರಪಂಚದಲ್ಲಿ ಪ್ರತ್ಯಕ್ಷ ಕಾಣುತ್ತಿದ್ದೇವೆ. ಲಕ್ಷ ಜನ ಬಡವರಿದ್ದರೆ ಒಬ್ಬ ಶ್ರೀಮಂತನಿರಲು ಸಾಧ್ಯ. ಅಂತಹ ಶ್ರೀಮಂತನಿಗೆ ಇಂದಿನ ಭಯವು ಈಗಲೂ ಇಲ್ಲ. ಆದರೆ ನಾಳೆ ಸುಸಂಘಟಿತರಾದ ಬಡವರು ಬಂಡು ಎದ್ದರೆ ನಮ್ಮ ಪಾಡೇನು ಎಂದು ಇಂದು ಅವರು ಭಯಗ್ರಸ್ತರಾಗಿದ್ದಾರೆ. ಭಯಗ್ರಸ್ಥರಾದವರು ಬುದ್ಧಿಪೂರ್ವಕ ವಿವೇಚನೆಮಾಡಿ ವಿಚಾರ ನಡೆಸಲು ಅನರ್ಹರು. ವ್ಯಕ್ತಿಗೆ ಭಯದ ಕಾಟವು ಇದ್ದಂತೆ ಜನಾಂಗಗಳಿಗೂ ಭಯವು ಹರಡುತ್ತದೆ.

ಶ್ರೀಮಂತ ರಾಷ್ಟ್ರವಾದ ಅಮೆರಿಕಾವು ಕಮ್ಯೂನಿಸಂಇನ ಭವಿಷ್ಯ ಪರಿಣಾಮವನ್ನು ಊಹಿಸಿಕೊಂಡು ಇಂದು ತೀವ್ರ ಭಯದಿಂದ ನರಳುತ್ತಿದೆ. ಆದರೆ ನಮಗೆ ಭಯವಿಲ್ಲ, ಇದೆಲ್ಲ ಮುಂಜಾಗ್ರತೆ ಎಂದು ಅವರ ಬುದ್ಧಿಯು ತೋರಮನಸ್ಸಿಗೆ ನೆಪ ಗಳನ್ನು ನೀಡುತ್ತದೆ. ಭಯ ವಿಹ್ವಲರಾದವರು ಹಿಂಸಾ ಪ್ರವೃತ್ತಿ ಯನ್ನು ಹೊಂದಿರುತ್ತಾರೆ. ಭಯವು ಹಿಂಸೆಯ ಶಕುನಿಮಾವ. ನಿರ್ಭಯರಾದವರು ಮಾತ್ರ ಅಹಿಂಸೆಯ ಕಲ್ಪನೆಯನ್ನು ಮಾಡಲು ಸಾಧ್ಯ. ನಮ್ಮ ರಾಜಕೀಯ ಗೊಂದಲಗಳಿಗೂ

ಸಮಸ್ಯೆಗಳಿಗೂ ಪರಸ್ಪರ ಭಯವೇ ಮೂಲ ಕಾರಣ. ಅದರಿಂದಾಗಿ ಅಪನಂಬಿಕೆ, ಹಿಂಸೆ, ಮೋಸ, ಕಟವಟ ಇತ್ಯಾದಿ. ಇಂದೂ ನಾವು ಆಳಮನಸ್ಸಿನಲ್ಲಿ ಆದಿಮಾನವರಂತೆಯೇ ನಡೆದುಕೊಳ್ಳುತ್ತಿದ್ದೇವೆ. ಆದರೆ ತೋರ ನಡವಳಿಕೆಯಲ್ಲಿ ಸೌಜನ್ಯದ ಮುಸುಕನ್ನು ಹಾಕಿಕೊಂಡು ಮೆರೆಯುತ್ತಿದ್ದೇವೆ. ಸ್ವಲ್ಪ ಭಯವಾದರೂ, ಈ ಮುಸುಕು ಹರಿದು ನಮ್ಮ ಪಶು ಪ್ರವೃತ್ತಿಯು ತಾಂಡವವಾಡುತ್ತದೆ. ಆದರೆ ದೇಹವನ್ನು ಹಿಂಸಿಸುವುದಕ್ಕಿಂತ ಮನಸ್ಸನ್ನು ಚಿತ್ರಹಿಂಸೆಗೆ ಗುರಿಮಾಡುತ್ತೇವೆ.

ಕುರುಕ್ಷೇತ್ರದಲ್ಲಿ ಅರ್ಜುನನು ಭಯದಿಂದ ಕ್ಲೈಬ್ಯ ಮೂಡಿದವನಾದಂತೆ ದಿನ ದಿನವೂ ಸಮಾಜದ ಸಮಸ್ಯೆಗಳನ್ನು ಎದುರಿಸಬೇಕಾದಾಗ ನಾವೂ ಹೆದರದೆ ಬಾಳಲು ಅಸಮರ್ಥರಾಗುತ್ತೇವೆ. ಕಲಿತ ಪಾಠಗಳು, ಸಹಜ ಸ್ವಭಾವ ಇವೆರಡೂ ನಮ್ಮ ಮನಸ್ಸಿನಲ್ಲಿ ಕುರುಕ್ಷೇತ್ರವನ್ನು ನಡಸುತ್ತಲೇ ಇವೆ. ಸ್ವಾರ್ಥವು ನಾನು ಎಂಬುದರಿಂದ ಆರಂಭವಾಗಿ, ನನ್ನ ಮನೆ, ನನ್ನ ಗ್ರಾಮ, ನನ್ನ ಊರು, ನನ್ನ ದೇಶ ಎಂಬಷ್ಟು ಹರಡಿದೆ. ನನ್ನ ಪ್ರಪಂಚ ಅನ್ನುವ ಹಂತಕ್ಕೆ ಇನ್ನೂ ಮುಟ್ಟಿಲ್ಲ. ಸಹಜ ಸ್ವಭಾವದ ಅಜ್ಞಾನವೂ ಕಲಿತ ಪಾಠಗಳ ಹಿಡಿತವೂ, ಮನಸ್ಸಿನ ಕುರುಕ್ಷೇತ್ರಕ್ಕೆ ಕಾರಣ. ಆದುದರಿಂದಲೇ ಆಳಮನಸ್ಸಿನ ಭಯ. ಮಿಕ್ಕ ವಿಷಚಕ್ರವನ್ನು ವಿವರಿಸಿಯಾಗಿದೆ.

ಅರ್ಜುನನನ್ನು Brainwash ಮಾಡಿ, ಕೃಷ್ಣ ಭಯವನ್ನೂ ಆತಂಕವನ್ನೂ ಪರಿಹರಿಸಿದ. ಅಂತೆಯೇ ನಾವೂ ತೊಳಲಾಟದಿಂದ ಸ್ವತಂತ್ರರಾಗಬೇಕು.

ಕರ್ಣನಿಗೆ ಶಾಪವನ್ನು ವಿಪ್ರ ಕೊಟ್ಟನಂತೆ. ಅದರಿಂದ ಕರ್ಣನಂತಹ ಶೂರ ಧೃತಿಗೆಟ್ಟನಂತೆ. ಎಂತಹ ಕಟ್ಟುಕತೆ ಎನಿಸಬಹುದು.

ಕಾಲೇಜಿನಲ್ಲಿ ನಾನು ಓದುತ್ತಿದ್ದಾಗ ಎರಡು ವರ್ಷ ಹಿರಿಯವನಾಗಿದ್ದ, ಜಾಣ ವಿದ್ಯಾರ್ಥಿಯೊಬ್ಬನಿದ್ದ. ಸುಮಾರು ಪರಿಚಯವಿತ್ತು ನನಗೆ. ಜಾಣತನದ ಫಲವಾಗಿ ಅವ ಅಖಿಲ ಭಾರತ ಸ್ಪರ್ಧಾ ಪರೀಕ್ಷೆಗಳಲ್ಲಿ ರ್‍ಯಾಂಕ್‌ಗಳಿಸಿ ದೊಡ್ಡ ಹುದ್ದೆಗೆ ಏರಿದ. ೫೦-೫೫ರ ಪ್ರಾಯ, ಆಗ ಅವನಿಗೆ ತಲೆನೋವು ಬರಲಾರಂಭಿಸಿತು. ಹಿರಿಯ ಡಾಕ್ಟರ ಬಳಿಗೆ ಹೋದ. ಅವರು ಪರೀಕ್ಷೆಯನ್ನು ಮಾಡಿ "ಏನೂ ಇಲ್ಲಕಣಯ್ಯಾ! ಈ ಮಾತ್ರೆ ತೆಗೆದುಕೋ" ಎಂದರು. "ಇನ್ನೊಂದು ತಿಂಗಳು ಬಿಟ್ಟುಕೊಂಡು ತಿರುಗಿ ಬಂದು ನೋಡು" ಎಂದರು. ಜಾಣನಲ್ಲವೇ ನನ್ನ ಗೆಳೆಯ. ಡಾಕ್ಟರನ್ನು ಕೇಳಿದ "ಏನೂ ಇಲ್ಲದೆ ಇದ್ದರೆ ಮಾತ್ರೆ ಯಾಕೆ? ಏನೂ ಅನುಮಾನ ನಿಮಗಿಲ್ಲದೆ ಇದ್ದರೆ ತಿಂಗಳು ಬಿಟ್ಟು ಪರೀಕ್ಷೆಗೆ ತಿರುಗಿ ಬಾ ಎಂದು ಏತಕ್ಕೆ ಹೇಳಿದಿರಿ?" ಎಂದು ಅಡಕತ್ತರಿಯ ಪ್ರಶ್ನೆ ಕೇಳಿದ. ಇವನಷ್ಟು ಬುದ್ಧಿವಂತನಲ್ಲವಲ್ಲ ಡಾಕ್ಟರ್! ಅಷ್ಟು ಬುದ್ಧಿ ಇದ್ದಿದ್ದರೆ ಅವನೂ ಐ.ಸಿ.ಎಸ್. ಪ್ಯಾಸ್‌ಮಾಡಿ ದೊಡ್ಡ ಹುದ್ದೆಯಲ್ಲಿರುತ್ತಿದ್ದ. ಬುದ್ಧಿ ತುಸು ಕಡಿಮೆಯಾದುದರಿಂಲೇ ಅವ ವೈದ್ಯನಾಗಿದ್ದ. ಸರಿಯಾಗಿ ಉತ್ತರ ಕೊಡಲು ಅಸಮರ್ಥನಾದಕಾರಣ ಅವನಿಗೆ ಕೋಪ ಬಂತು. ಕುಪಿತನಾದರೂ ಅವ ಕೋಪ ಪ್ರದರ್ಶನವನ್ನು

ಮಾಡದೆ ನಯವಾಗಿಯೇ ಸುಸಂಸ್ಕೃತನಂತೆ "ಅಯ್ಯಾ! ತಲೆ ನೋವು ಬರುವುದಕ್ಕೆ ನೂರಾರು ಕಾರಣಗಳಿರುತ್ತವೆ. ಈಗ ಯಾವ ಚಿಹ್ನೆಗಳೂ ಇಂತಹ ಕಾರಣವಿರಬಹುದು ಎಂದು ಸೂಚಿಸುತ್ತಿಲ್ಲ. ಆದುದರಿಂದ ತಿರುಗಿ ಪರೀಕ್ಷೆಗೆ ಬಾ ಎಂದೆ. ಮೆದುಳಿನಲ್ಲಿ ಕ್ಯಾನ್ಸರ್ ಬಂದರೂ ಹೀಗಾಗಬಹುದು, ತಾಪ ತ್ರಯಗಳು ಮಾನಸಿಕ ಶೋಷಣೆಯನ್ನು ಮಾಡಿದರೂ ಹೀಗಾಗ ಬಹುದು, ಪಿತ್ಥ ಹೆಚ್ಚಾದರೂ ಹೀಗಾಗಬಹುದು" ಎಂದು ಹೇಳಿದ.

ಮನೆಗೆ ಹಿಂತಿರುಗಿದ ನನ್ನ ಗೆಳೆಯ. ಅವನ ಮೊದಲ ನೆಯ ಮಗ ಆಗ ಎಂ.ಬಿ.ಬಿ.ಎಸ್ಸಿ.ನ ಕೊನೆಯ ವರ್ಷದ ವಿದ್ಯಾರ್ಥಿ. ಆ ಮಾತು ಈ ಮಾತು ಆಡುತ್ತ ಮಗನನ್ನು ಕೇಳಿದ "ಕ್ಯಾನ್ಸರ್ ಮೆದುಳಿಗೆ ಎಲ್ಲಾದರೂ ಬರುತ್ತದೆಯೇ?" ಎಂದು. ಕೊನೆಯ ವರ್ಷದ ವಿದ್ಯಾರ್ಥಿಯು ಜ್ಞಾನಸಂಪಾ ದನಾ ಪ್ರಪಂಚದಲ್ಲಿ ಹೋರಿಯಂತೆ ಹಾರಾಡುತ್ತಿರುತ್ತಾನೆ. ಸಾಕಷ್ಟು ಅನುಭವವಿಲ್ಲದಕಾರಣ ಎಗರಾಡುತ್ತಿರುತ್ತಾನೆ. ಆ ಪ್ರಕೃತಿಯಿಂದಾಗಿ ಮೆದುಳಿನ ಕ್ಯಾನ್ಸರ್ ಎಂತೆಂತಹ ಘೋರ ಯಾತನೆಯನ್ನು ಮಾಡುತ್ತದೆ, ಎಂತಹ ಭೀಕರ ಆಪರೇಷನ್ನು ಗಳನ್ನು ಮಾಡಬೇಕಾಗುತ್ತದೆ, ಎಲ್ಲವನ್ನೂ ವರ್ಣಿಸಿದ. ಮಗನ ಪಠ್ಯಪುಸ್ತಕಗಳನ್ನು ನನ್ನ ಗೆಳೆಯ ಕದ್ದು ಓದಿದ. ತನ್ನಲ್ಲಿ ಕಂಡ ಚಿಹ್ನೆಗಳು ಪುಸ್ತಕದಲ್ಲಿಯೂ ಇತ್ತು. ಒಂದು ರಾತ್ರಿ ತಲೆಗೆ ಗುಂಡಿಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡ.

ಕ್ಯಾನ್ಸರ್ ಬಂದು ಅದಕ್ಕೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು ನರಳುವುದಕ್ಕಿಂತ ಜಟ್ಟಂತ ಈಗಲೇ ಹೋಗಿಬಿಡುವುದು ಒಳಿತು ಎಂದು ಭಯಗ್ರಸ್ತನಾಗಿದ್ದ ಅವ ನಿರ್ಧರಿಸಿ, ಅಂತೆಯೇ ಆಚರಿಸಿದ.

ರೋಗಿಯು ಜಾಣ, ಸೂಕ್ಷ್ಮ ಪ್ರವೃತ್ತಿ, ಇವನಿಗೆ ಕ್ಯಾನ್ಸರ್ ಸಂಶಯವನ್ನು ಸೂಚಿಸಲೂಬಾರದು ಎಂದು ಡಾಕ್ಟರು ಸಾಮಾನ್ಯವಾಗಿ ನಿರ್ಧರಿಸುತ್ತಿದ್ದರು. ಆದರೆ ಅವರಿಗೆ ರೇಗಿತ್ತಲ್ಲ! ಜಾಣತನ ಕಡಿಮೆ ಎಂಬ ಭಾವನೆಯು ಕೊರೆದಿತ್ತಲ್ಲ! ಡಾಕ್ಟರ ಆ ಅಚಾತುರ್ಯ ಹೇಳಿಕೆಯು ವಿಪ್ರ ಶಾಪವೇ! ಆನಂತರ ವಿಷ ಚಕ್ರವು ಆರಂಭವಾಯಿತು. ಭಯ, ಭಯದಿಂದ ಆತಂಕ. ಭಯವನ್ನು ಉಗ್ರಗೊಳಿಸಿದ ಪುಸ್ತಕಗಳು, ಮಗ, ಕಾರಣ ಚಿತ್ತ ಭ್ರಮಣೆ, ಫಲಿತಾಂಶ ಆತ್ಮಹತ್ಯೆ!

ಹೆಣ್ಣುಮಗಳೊಬ್ಬಳು ನೂರೆಂಟು ಬಾಧೆಗಳನ್ನು ಹೇಳಿಕೊಳ್ಳುತ್ತಾ ಚಿಕಿತ್ಸೆಗೆಂದು ಬಂದಳು. ಪರೀಕ್ಷೆ ಮಾಡಿದನಂತರ ಆಕೆಗೂ, ಜತೆಯಲ್ಲಿ ಬಂದಿದ್ದ ಅತ್ತೆಗೂ "ಇದು ಬರೀ ಹಿಸ್ಟಿರಿಯಾ ಚಿಹ್ನೆಗಳಮ್ಮ. ದೇಹದಲ್ಲಿ ಯಾವ ಜಡ್ಡೂ ಇಲ್ಲ. ಮನಸ್ಸನ್ನು ನೆಮ್ಮದಿಯಾಗಿ ಇಟ್ಟುಕೊಂಡರೆ ಸುಲಭವಾಗಿ ಗುಣವಾಗುತ್ತದೆ" ಎಂದು ಹೇಳಿಕಳಿಸಿದೆ.

ಕೆಲ ಕಾಲದ ಮೇಲೆ ಗೊತ್ತಾಯಿತು. ಮನೆಗೆ ಹಿಂತಿರುಗಿದ ಮೇಲೆ ಅತ್ತೆಯು ಮಗನೊಂದಿಗೆ "ನಿನ್ನ ಹೆಣತೀಗೆ

ಯಾವ ಜಡ್ಡೂ ಇಲ್ಲಂತೆ. ಬರೀ ಮನಸ್ಸಿನ ತಾಪತ್ರಯವಂತೆ. ನೆಮ್ಮದಿಯಾಗಿ ಇಟ್ಕೋಬೇಕಂತೆ" ಎಂದು ಡಾಕ್ಟರು ಹೇಳಿದರು. ನೆಮ್ಮದಿಯಾಗಿ ಇಟ್ಟುಕೊಂಡಿಲ್ಲವೇನಪ್ಪ! ಹೊಟ್ಟೆಯಲ್ಲಿ ಹುಟ್ಟಿದ ಮಗಳಿಗಿಂತ ಹೆಚ್ಚಾಗಿ ಮುದ್ದಿಸ್ತೀನಿ. ನಿನಗೆ ಎಂತೆಂತಾ ಹೆಣ್ಣು ಬಂದಿತ್ತು, ೨೦–೩೦ ಸಾವಿರ ವರದಕ್ಷಿಣೆ ಕೊಡೋವರೆಲ್ಲ ಬಂದಿತ್ತಿಲ್ಲೇ! ಬೇಡ, ಈ ಬಡ ಹುಡುಗೀನ ನೀ ಮೆಚ್ಚಿದೆ ಅಂತ ತಂದುಕೊಂಡು ಮನೆತುಂಬಿಸಿಕೊಂಡರೆ, ಬೇನೆ ಬಿದ್ದ ಹುಡುಗೀನ ತಂದಹಾಗಾಯ್ತಲ್ಲೋ ಎಂದು ಮರುಕಪಟ್ಟಳಂತೆ. ಅತ್ತೆಯು ಕೊಡಬಹುದಾದ ಕಿರುಕುಳಕ್ಕೆ ಕಾರಣವೇನೋ ಗೊತ್ತಾಯಿತು. ಆದರೆ ನಾನು ಹೇಳಿದುದರ ಫಲಿತಾಂಶವೇನಾಯ್ತು? ಅತ್ತೆ ಕಾಟ ಹೆಚ್ಚಾಯ್ತು.

ಮೈ ಚೆನ್ನಾಗಿದೆ, ಮನಸ್ಸು ಕಟ್ಟಿಕೊಂಡು ನನಗೇನು ಅಂತ ಮಗ ಮೈ ಹಿಡಿದುಕೊಂಡ. ಮನಸ್ಸಿನಿಂದ ದೂರ ಮಾಡಿದ. ಇತನಕ ಆಕೆಗೆ ತೋರುತ್ತಿದ್ದ, ಆಕೆಯ ನರಳುವಿಕೆಯ ಸಹಾನುಭೂತಿಯನ್ನು, ಅನಂತರ ತುಂಡು ಮಾಡಿದ. ಅಂದ ಮೇಲೆ ಆಕೆಯ ಮನಸ್ಸಿಗೆ ನೆಮ್ಮದಿ ಕೊಡುವಂತಹ ಗಂಡನ ಸಹಾನುಭೂತಿಯನ್ನು ನಾನು ತಪ್ಪಿಸಿದೆ. ಆ ದುರ್ದೈವೀ ಹೆಣ್ಣು, ವಾಸಿ ಮಾಡುತ್ತಾನೆ ಎಂದು ನನ್ನ ಬಳಿಗೆ ಬಂದಮೇಲೆ ಇನ್ನೂ ಘಾಸಿ ಆಗುವಂತೆ ಮಾಡಿ ಕಳಿಸಿದ್ದೆ. ತುಂಬು ಅನುಕಂಪದಿಂದ, ಸಾಕಷ್ಟು ಅನುಭವ ಮತ್ತು ಜ್ಞಾನವನ್ನು ಸಂಪಾದಿಸಿಕೊಂಡಿದ್ದೇನೆ ಎಂಬ ತುಸು ಹೆಮ್ಮೆಯಿದ್ದ ನಾನು, ನುಡಿದುದು ವಿಪ್ರ ಶಾಪವೇ ತಾನೇ!

ಡಾಕ್ಟರು ನುಡಿದ ಆಕಸ್ಮಿಕ ಮಾತು ಶಾಪವಾದ ಪ್ರಕರಣಗಳು, ಮಾಟ ಮಾಡಿದಂತೆ ಕಾಡುವ ನಿದರ್ಶನಗಳು, ಹೇರಳವಾಗಿರುವುದು ನನಗೆ ಗೊತ್ತು. ನಮ್ಮ ಕಸುಬಿನಂತೆಯೇ ಜನರ ಆತ್ಮೀಯ ಸಂಪರ್ಕವನ್ನು ಹೊಂದಿರುವ, ಲಾಯರುಗಳು ರಾಜಕಾರಣಿಗಳು, ಅಧಿಕಾರದಲ್ಲಿರುವವರು, ಶಿಕ್ಷಕರು ಇಂತಹ ಉಗ್ರವಾದ "ವಿಪ್ರಶಾಪ"ಗಳನ್ನು ಅರಿಯದೆ ಎಷ್ಟು ನಯವಾಗಿ ನುಡಿಯುತ್ತಾರೋ ಎಂಬುದನ್ನು ಸಹೃದಯರು ಸುಲಭವಾಗಿ ಊಹಿಸಬಹುದು.

"ಹೃದಯದಲ್ಲಿ ಮರ್ಮರ್ ಕೇಳಿಸುತ್ತಿದೆ, ಸ್ವಲ್ಪ ಹುಷಾರಾಗಿರಿ" ಎಂದು ವೈದ್ಯನು ಪಿಸು ಮಾತಿನಲ್ಲಿ, ರೋಗಿಯ ತಂದೆಗೆ ಮರ್ಮರಿಸುವಾಗ, ರೋಗಿಯ ನರಳುವಿಕೆಯು ಅಂತಿರಲಿ, ಆ ನಂತರ ರೋಗಿಯ ತಂದೆಯೂ, ಮಗ ಮುಂದೆ ಏನಾಗುತ್ತಾನೋ ಎಂಬ ಭಯದಿಂದ ಮುತ್ತಿದವನಾಗಿ ಅವನೂ ರೋಗಿಯಾಗುತ್ತಾನೆ.

"ಏನೂ ಇಲ್ಲಪ್ಪ, ಆದರೂ ತಿಂಗಳಾದ ಮೇಲೆ ತಿರುಗಿ ಪರೀಕ್ಷೆಗೆ ಬಾ" ಎಂದು ಸಕಾರಣವಾಗಿ ಡಾಕ್ಟರು ನುಡಿದಾಗ, ಅದು ವೈದ್ಯಶಾಸ್ತ್ರದ ಇಂದಿನ ಹಂತದ ಅಜ್ಞಾನವನ್ನು ಸೂಚಿಸುತ್ತದೆ. ನನ್ನಲ್ಲಿರಬಹುದಾದ ಬೇನೆಯ ಚಿಹ್ನೆಯಲ್ಲ" ಎಂದು ರೋಗಿಗೆ ಮಂದಟ್ಟಾಗುವುದು ಹೇಗೆ?

"ಡಯಬಿಟೀಸ್ ದರಿದ್ರ ಖಾಯಿಲೆಯಪ್ಪ. ಸಾಯುವ ತನಕ ಕಾಡುತ್ತದೆ" ಎಂದು ಡಯಬಿಟೀಸ್ ಬಂದ ಡಾಕ್ಟರು,

ಆಕಸ್ಮಿಕವಾಗಿ ನುಡಿದಾಗ, ಡಯಬೀಟಿಸ್ ಬಂದ ಯುವಕ, ಸೂಕ್ತ ಚಿಕಿತ್ಸೆಯಿಂದ, ವಿಂಬಲ್‌ಡನ್ ಟೆನ್ನಿಸ್ ಚಾಂಪಿಯನ್ ಆದ, ಡಯಬೀಟೀಸ್‌ನಿಂದ ನಾಲ್ವತ್ತು ವರ್ಷ ನರಳುತ್ತಿದ್ದ ರಾಜಕಾರಣಿಯು, ದೇಶದ ಮಂತ್ರಿಯಾಗಿ ಐದು ವರ್ಷಗಳಲ್ಲಿ ಅಸಾಧ್ಯ ಪ್ರಗತಿಯನ್ನು ಸಾಧಿಸಿದ, ಎಂಬುದನ್ನು ರೋಗಿಗೆ ಮನದಟ್ಟು ಮಾಡಿಕೊಡುವವರಿರುವುದಿಲ್ಲ. ಕಾರಣ ಆ ನುಡಿಯನ್ನು ಮಾತ್ರ ಕೇಳಿದವರು ಭಯಗ್ರಸ್ತರಾಗುವುದು ಸ್ವಾಭಾವಿಕ.

ಇಂತಹ ನೂರಾರು, ಸಾವಿರಾರು, ಲಕ್ಷಗಟ್ಟಲೆ ಪ್ರಸಂಗಗಳು, ಭಯೋತ್ಪಾದನೆ ಮಾಡಿ ಆತಂಕಗೊಳಿಸುವುವು, ವಿಪ್ರಶಾಪ, ಡಾಕ್ಟರ ಶಾಪಗಳಲ್ಲದೇ ಮತ್ತೇನು ? ಇಂದಿನ ಸಮಾಜದಲ್ಲಿ ಕಂಡ ಕಂಡಲ್ಲೆಲ್ಲಾ ಕರ್ಣರೇ !

ಅನುಭವ ಸತ್ಯವಾದುದರಿಂದಲೇ ಈ ಅಧ್ಯಾಯವನ್ನು ಸೇರಿಸಿದ್ದು. ಓದಬಹುದಾದವರ ಭಯನಿವಾರಣೆಯಾಗಬಹುದೆಂಬ ಆಸೆಯಿಂದ.

ಭಯ ನಿವಾರಣೆಯ ಮಾರ್ಗಗಳು

ನಸುಗತ್ತಲಲ್ಲಿ ಕಂಡ ಬೋಳು ಮರವು ಕಳ್ಳನಿರಬಹುದು ಎಂಬ ಭಯವನ್ನು ಹುಟ್ಟಿಸಬಹುದು. ಆದರೆ ದಾರಿಯಲ್ಲಿ ಬಂದ ಲಾರಿಯ ಬೆಳಕಿನಲ್ಲಿ ಅದು ಮರ ಎಂದು ಕಂಡಾಗ ಭಯ ನಿವಾರಣೆಯಾಗುತ್ತದೆ. ಕತ್ತಲಲ್ಲಿ ಕಂಡ ಹಗ್ಗವು ಹಾವೇನೋ ಎಂಬ ಭ್ರಮೆಯನ್ನು ಉಂಟುಮಾಡಿ ಭಯವನ್ನು ಮೂಡಿಸಬಹುದು. ಟಾರ್ಚಿನ ಬೆಳಕು ಚೆಲ್ಲಿದಾಗ ಅದು ಹಗ್ಗವೆಂದು ಖಂಡಿತವಾದಾಗ ಭಯವು ಮಾಯವಾಗುತ್ತದೆ. ಅಂದರೆ ಯಾವ ವಸ್ತುವು ಭಯವನ್ನು ಉಂಟುಮಾಡುತ್ತದೋ ಅದರ ಪೂರ್ಣಪರಿಚಯವನ್ನು ಮಾಡಿಕೊಂಡಮೇಲೆ ಭಯ ನಿವಾರಣೆಯಾಗುತ್ತದೆ.

ಹಗ್ಗವಾಗಲೀ ಹಾವಾಗಿರಲಿ ಭಯವು ಏಕೆ ಬಂತು? ಹಿಂದಿನ ಅನುಭವದಿಂದ, ಅನುಭವಸ್ಥರ ನುಡಿಗಳಿಂದ, ಜ್ಞಾನ ಪ್ರಸಾರ ಮಾಡುವ ಪುಸ್ತಕಗಳನ್ನು ಓದುವುದರಿಂದ, ಹಗ್ಗ ಎಂದರೆ ಇಂತಹುದು, ಇದರಿಂದ ನಮಗೆ ನೋವುಂಟಾಗುವು ದಿಲ್ಲ, ಎಂಬ ಜ್ಞಾನವು ಬಂದಿರುತ್ತದೆ. ಅದೇ ರೀತಿಯಲ್ಲಿ ಹಾವು ಎಂದರೆ ವಿಷಜಂತು. ಅದು ಕಚ್ಚಿದರೆ ತುಂಬಾ ನೋವಾ ಗುತ್ತದೆ. ಪ್ರಾಣವೂ ಹೋಗಬಹುದು, ಎಂಬ ಜ್ಞಾನವನ್ನು ಸಂಪಾದಿಸಿಕೊಂಡಿರುತ್ತೇವೆ. ನೋವನ್ನು ಅಥವಾ ಪ್ರಾಣ

ಹಾನಿಯನ್ನು ಉಂಟುಮಾಡುವ ವಸ್ತುವನ್ನು ನಾವು ಜಾಗ್ರತೆಯಿಂದ ಸಾಯಿಸಬೇಕು, ಅದು ಸಾಧ್ಯವಾಗಿರದಿದ್ದರೆ, ಅದರಿಂದ ಅದಷ್ಟು ದೂರ ಓಡಿಹೋಗಿ ಸುರಕ್ಷಿತ ಸ್ಥಳವನ್ನು ತಲಪಬೇಕು.

ನಸುಗತ್ತಲಲ್ಲಿ ನಮ್ಮ ಇಂದ್ರಿಯಗಳು ಸಾಕಷ್ಟು ಸಾಕ್ಷ್ಯವನ್ನು ಪಡೆಯದೆ ಇರುವುದರಿಂದ, ಹಗ್ಗವೋ ಹಾವೋ ಎಂಬ ಭ್ರಮೆಯುಂಟಾಗುತ್ತದೆ. ಬರೀ ಹಗ್ಗವಾಗಿದ್ದರೂ, ನಮ್ಮ ಭ್ರಮೆಯಿಂದಾಗಿ, ಹಾವಾಗಿರಬಹುದು ಎಂಬ ಅನುಮಾನದಿಂದ ಭಯವು ಉತ್ಪನ್ನವಾಗುತ್ತದೆ. ಭ್ರಮೆಯು ಪರಿಹಾರವಾದ ಮೇಲೆ ಭಯವೂ ನಿವಾರಣೆಯಾಗುತ್ತದೆ.

ತೋರಮನಸ್ಸಿನಲ್ಲಿ ಕಾಣಬರುವ ಭಯವು, ಬಾಳಿನ ವಿವಿಧ ಅನುಭವಗಳಿಂದ ರೂಢಿತವಾದುದು. Conditioned Fear. ಇದರ ನಿವಾರಣೆಯನ್ನು ಸಂಬಂಧಪಟ್ಟ ಜ್ಞಾನದ ಸಂಪಾದನೆಯಿಂದ ಸಾಧಿಸಬಹುದು.

ಆದಿಮಾನವನು ಗ್ರಹಣಹಿಡಿದ ಚಂದ್ರನನ್ನು ಕಂಡು ಏನು ಎತ್ತ ಎಂದು ತಿಳಿಯದೆ, ಭಯಪಡುತ್ತಿದ್ದ. ಭಯ ನಿವಾರಣೆಗಾಗಿ ಗ್ರಹಣ ಹಿಡಿದಾಗ ದೇವರ ಪೂಜೆಯನ್ನೋ ಬಲಿಯನ್ನೋ ಕೊಟ್ಟು, ತನ್ನ ಮನಃಸ್ವಾಸ್ಥತೆಯನ್ನು ಕಾಪಾಡಿಕೊಳ್ಳುತ್ತಿದ್ದ. ಇನ್ನೇನು ಇಷ್ಟರಲ್ಲೇ ಚಂದ್ರನ ಮೈಮೇಲೆ ಇಳಿದು, ತಿರುಗಿ ಧರೆಗೆ ಹಿಂತಿರುಗುವ ವೈಜ್ಞಾನಿಕ ಹಂತವನ್ನು ಮುಟ್ಟಿದ್ದೇವೆ. ಭೂಮಿಯಂತೆಯೇ ಅದೂ ಒಂದು ಪೆಚ್ಚು ಪೆಚ್ಚಾದ ಗ್ರಹ. ಇಲ್ಲಿಂದ ನೋಡುವುದಕ್ಕೆ ಬಲು ಚೆಂದ.

ಹತ್ತಿರ ಹೋದರೆ ಅಸಾಧ್ಯ ಸಿಡುಬಿನ ಕಲೆ ಎಂದು ಅರಿತಿದ್ದೇವೆ. ಭೂಮಿಯ ನೆರಳು ಅದರ ಮೇಲೆ ಬಿದ್ದರೆ ಚಂದ್ರ ಗ್ರಹಣವಾಗುತ್ತದೆ ಎಂದೂ ತಿಳಿದಿದ್ದೇವೆ. ಅಂದಮೇಲೆ ಭಯವಿರಲು ಕಾರಣವೇ ಇಲ್ಲ.

ಆದರೂ ನಮ್ಮಲ್ಲನೇಕ ಸಂಪ್ರದಾಯಸ್ಥರು, ಚಂದ್ರಗ್ರಹಣದ ಭೌತಿಕ ಸ್ವರೂಪವನ್ನು ತಿಳಿದವರು ಕೂಡ, ಗ್ರಹಣ ಹಿಡಿದಾಗ, ಹಳೆಯ ಕಾಲದವರಂತೆ, ಸ್ನಾನಮಾಡುವುದು, ಗ್ರಹಣವಿರುವಾಗ ಖಾಲಿ ಹೊಟ್ಟೆಯಿರುವಂತೆ ಮಾಡಿಕೊಳ್ಳುವುದು, ಗ್ರಹಣ ಬಿಟ್ಟಮೇಲೆ, ಅಡಿಗೆ ಮಾಡಿಕೊಂಡು ನಂತರ ಉಣ್ಣುವುದು, ಇತ್ಯಾದಿ ವಿಧಿವತ್ತಾದ ಕಾರ್ಯಗಳನ್ನು ಮಾಡುತ್ತಾರೆ. ಏಕೆ ? ಹಿರಿಯರು ಮಾಡಿದುದನ್ನು ನೋಡಿ, ವಿಷಯವನ್ನು ತಿಳಿಯದೆ ಇದ್ದ ಬಾಲ್ಯದಲ್ಲಿ ಕೇಳಿದುದನ್ನು ಧೃಡವಾಗಿ ನಂಬಿದ್ದರು. ಆ ನಂಬಿಕೆಯನ್ನು ಇಂದಿನ ಜ್ಞಾನವು ನ್ಯಾಯವಾಗಿ ಸರಿಪಡಿಸಬೇಕು. ಆದರೆ ಹಾಗೆ ಸುಲಭವಾಗಿ ಆಗುವುದಿಲ್ಲ. “ ಇರಬಹುದಪ್ಪ, ಭೂಮಿಯ ನೆರಳು ಚಂದ್ರನ ಮೇಲೆ ಬಿದ್ದಾಗ ಗ್ರಹಣ ಹಿಡಿಯುತ್ತೆ. ಆದರೆ ಅಂತಹ ಸಂದರ್ಭದಲ್ಲಿ ಯಾವ Cosmic Radiation ವ್ಯತ್ಯಾಸವಾಗುತ್ತದೋ, ನಮಗಿನ್ನೂ ತಿಳಿಯದೆ ಇರುವ ಇತರ ಯಾವ ಕೆಟ್ಟ ಪರಿಣಾಮಗಳು ಆಗಬಹುದೋ, ಯಾರಿಗೆ ಗೊತ್ತಪ್ಪ. ಗೊತ್ತಿಲ್ಲದ ಕಾರಣ ಹಿರಿಯರು ಹಾಕಿಕೊಟ್ಟ ಪಂಥದಲ್ಲಿ ನಡೆಯೋಣ ” ಎಂದು ಬುದ್ಧಿಯನ್ನು ಉಪಯೋಗಿಸಿ, ತಮ್ಮ ಮೂಢ ನಂಬಿಕೆಯ ನಡ

ವಳಿಕೆಗೆ ಕಾರಣಗಳನ್ನು ಸಮಂಜಸವಾಗಿ ಸೃಷ್ಟಿಸಿಕೊಳ್ಳುತ್ತಾರೆ.

ಅಂದರೆ ತೋರಮನಸ್ಸಿನಲ್ಲಿ, ವಸ್ತುವಿನ ಅಜ್ಞಾನದಿಂದ ಉಂಟಾದ ಭಯವನ್ನು ಜ್ಞಾನ ಸಂಪಾದಿಸಿ ನಿವಾರಿಸುವುದು ಸುಲಭವಲ್ಲ. ಏಕೆಂದರೆ ಬಾಲ್ಯದಲ್ಲಿ ಮೃದುಮನದಿಂದ್ದಾಗ ರೂಢಿಸಿಕೊಂಡ ನಂಬಿಕೆಗಳು ಭಯವನ್ನು ಒಂದಲ್ಲ ಒಂದು ರೀತಿಯಲ್ಲಿ ಮುಂದುವರೆಸಿಕೊಂಡು ಹೋಗುತ್ತವೆ. ಮನಸ್ಸಿನ ಸ್ವಭಾವ ಈ ರೀತಿಯದು. ಉಗ್ರವಾಗಿ **Brainwash** ಮಾಡಿದ ಹೊರತು ರೂಢಿಸಿಕೊಂಡ ಬಾಲ್ಯದ ನಂಬಿಕೆಗಳನ್ನು ತೊಡೆದು ಹಾಕಲು ಸುಲಭ ಸಾಧ್ಯವಲ್ಲ.

ಆದರೂ ವಸ್ತುಗಳ ಜ್ಞಾನವನ್ನು ಸಂಪೂರ್ಣವಾಗಿ ಅಥವಾ ಆದಷ್ಟು ಆಳವಾಗಿ ಪಡೆಯುುವುದರಿಂದ, ಸುಮಾರು ಸಂದರ್ಭಗಳಲ್ಲಿ ಭಯ ನಿವಾರಣೆಯನ್ನುಮಾಡಿಕೊಳ್ಳಬಹುದು.

ವಸ್ತುಗಳ ಜ್ಞಾನಾರ್ಜನೆಯನ್ನು ವಿಶಾಲವಾಗಿ ಮಾಡಿಕೊಂಡಾಗ ವಿಶ್ವರೂಪದ ದರ್ಶನವನ್ನು ವೈಜ್ಞಾನಿಕವಾಗಿ ಮಾಡಿಕೊಂಡಂತೆ. ವೈಜ್ಞಾನಿಕವಾಗಿ ಎಂದರೆ, ನಾವು ಕಲಿತಿದ್ದನ್ನು ಇತರರಿಗೆ ಪ್ರಯೋಗಗಳ ಮೂಲಕ ನಡೆಸಿ, ಸಿದ್ಧಾಂತ ಮಾಡುವುದು ಎಂದರ್ಥ. ವಿಶ್ವದ ಅರಿವನ್ನು ಪಡೆಯಲು ಹಲವಾರು ಶಾಸ್ತ್ರಗಳಿವೆ. ನೂರಾರು ಉಪಶಾಸ್ತ್ರಗಳೂ ಇವೆ. ಅಂದಮೇಲೆ ಯಾವನೊಬ್ಬನೂ ಒಂದು ಜನ್ಮದಲ್ಲಿ ವಿಶ್ವದ ಎಲ್ಲ

ಅರಿವನ್ನು ಎಲ್ಲ ಹಂತಗಳಲ್ಲಿಯೂ ಪಡೆಯುವುದು ಅಸಾಧ್ಯ. ಆದರೂ ವಿಶ್ವದ ಸ್ಥೂಲಪರಿಚಯವನ್ನು, ವಿದ್ಯೆಯನ್ನು ಒಂದು ಮಟ್ಟದವರೆಗೆ ಕಲಿತವರು, ಪಡೆಯುವುದು ಸಾಧ್ಯ ಮತ್ತು ಅಗತ್ಯ. ಈ ರೀತಿಯಲ್ಲಿ unknown ಆದುದನ್ನು ಪರಿಣಾಮಕಾರೀ ಹಂತದಲ್ಲಿ ಕಡಿಮೆ ಮಾಡಿಕೊಳ್ಳಬಹುದು. Unknown ಅನ್ನು ಕಡಿಮೆಮಾಡಿಕೊಂಡು, ಅಷ್ಟರ ಮಟ್ಟಿಗೆ ಭಯವನ್ನು ನಿವಾರಿಸಿಕೊಳ್ಳಬಹುದು.

ನಹಿ ಜ್ಞಾನೇನ ಸದೃಶಂ ಪವಿತ್ರಂ ಇದಂ ವಿದ್ಯತೆ
ತತ್ ಸ್ವಯಂ ಯೋಗಸಂಸಿದ್ಧಿಃ ಕಾಲೇನಾತ್ಮನಿ ವಿಂದತಿ

ಎಂದು ವ್ಯಾಸ ಮಹರ್ಷಿಗಳು ಗೀತೆಯಲ್ಲಿ ನುಡಿದಿದ್ದಾರೆ. ಗೀತೆಯಲ್ಲಿ ಜ್ಞಾನ ಎಂಬ ಮಾತನ್ನು, ನಾವು ಈಗ ವಿಜ್ಞಾನ ಎಂದು ಕರೆಯುತ್ತೇವಲ್ಲ, ಆ ಅರಿವಿಗೆ ಉಪಯೋಗಿಸಿದ್ದಾರೆ. ಗೀತೆಯಲ್ಲಿ ವಿಜ್ಞಾನ ಎಂಬ ಪದವೂ ಉಪಯೋಗಿಸಲ್ಪಟ್ಟಿದೆ. ಆದರೆ ಆ ಪದಕ್ಕೆ ಸ್ವಅನುಭವದಿಂದ ಅರಿತ ಜ್ಞಾನ ಎಂಬ ಅರ್ಥದಲ್ಲಿ ಬಳಸಲಾಗಿದೆ. ಗೀತೆಯ ಭಾಷೆಯಲ್ಲಿ ಜ್ಞಾನ ಎಂದರೆ Scientific knowledge that can be demonstrated and proved to others ಎಂಬರ್ಥ. ಅಂತೆಯೇ ಗೀತೆಯ ವಿಜ್ಞಾನ ಪದಕ್ಕೆ Personal knowledge, that which cannot be demonstrated and proved to others ಎಂದು. ಸಕ್ಕರೆ ಎಂದರೆ ಇಂತಷ್ಟು ಇಂಗಾಲ, ಇಂತಿಷ್ಟು ಜಲಜನಕ, ಇಂತಿಷ್ಟು ಆಮ್ಲಜನಕಗಳ

ಈ ರೀತಿಯ ಸಮ್ಮೇಳನ ಎಂದು Scientific ಆಗಿ ಇತರರಿಗೆ ತೋರಿಸಬಹುದು. ಆದರೆ ಸಕ್ಕರೆಯು ಸಿಹಿ ಎನ್ನುವ ನಮ್ಮ ಅನುಭವವನ್ನು ಇತರರಿಗೆ ತೋರಿಸಿಕೊಡುವುದು ಹೇಗೆ. ಸಕ್ಕರೆಯನ್ನು ತಿಂದು ಬಾಯಿ ಚಪ್ಪರಿಸಿ ಸಿಹಿ ಎಂದಾಗ, ಅದೇ ಸಕ್ಕರೆಯನ್ನು ಅವನ ಬಾಯಿಗೆ ಹಾಕಿ, ಅವನೂ ಚಪ್ಪರಿಸಿದಾಗ, "ನೋಡು! ಅದೇ ಸಿಹಿ" ಎನ್ನುವುದು ಎಂದು ಕಲಿಸಬಹುದು. ಆದರೆ ಸಿಹಿಯ ಅನುಭವವನ್ನು prove ಮಾಡಲು ಸಾಧ್ಯವಿಲ್ಲ. ಮುಸಲ ಸಕ್ಕರೆಯನ್ನು ಬಾಯಿಗೆ ಹಾಕಿಕೊಂಡವನಿಗೆ taste buds ವಿಕಾರಹೊಂದಿದ್ದಕಾರಣ ರುಚಿಯೇ ಅನುಭವವಾಗದಿರಬಹುದು. ಅನುಭವಿಸದೆ ಇದ್ದ ಇಲ್ಲದ ರುಚಿಯನ್ನು ಅವ, ನಮ್ಮ ಕಲಿಸುವಿಕೆಯಿಂದಾಗಿ ಸಿಹಿ ಎಂದು ಹೇಳಲು ತೊಡಗುತ್ತಾನೆ. ಇಂತಹವನ್ನು personal knowledge ಎಂದು ಹೇಳಬೇಕು.

ಜ್ಞಾನಾರ್ಜನೆಯನ್ನು ಎರಡೂ ವಿಧಗಳಿಂದ ಪೂರ್ಣಗೊಳಿಸಬೇಕು. ೧) Scientific knowledge, ಅಂದರೆ ಗೀತೆಯಲ್ಲಿ ಹೇಳಿದ ಜ್ಞಾನವನ್ನೂ ಪಡೆಯಬೇಕು. ಹಾಗೂ ೨) Personal knowledge, ಗೀತೆಯ ಬಳಕೆಯಲ್ಲಿನ ವಿಜ್ಞಾನವನ್ನೂ ಹೊಂದಬೇಕು. ಇನ್ನು ಮುಂದೆ ಜ್ಞಾನ, ವಿಜ್ಞಾನ ಎಂದಾಗ ಇಂದಿನ ಬಳಕೆಯ ಅರ್ಥದಲ್ಲಿ ಉಪಯೋಗಿಸುತ್ತೇನೆ.

ಈ ವಿವರವನ್ನು ಬರೆಯಲು, ವಿಶದೀಕರಿಸಲು ಒಂದು ಮಹತ್ತರ ಕಾರಣವಿದೆ ಇನ್ನು ಮುಂದೆ personal knowledgeಇನಿಂದ ಆಳಮನಸ್ಸಿನ ಭಯವನ್ನು ನಿವಾರಿಸುವ ವಿಧಾನಗಳನ್ನು ಚರ್ಚಿಸಲಾಗುತ್ತದೆ. ಆ ಸಂದರ್ಭದಲ್ಲಿ ಗೀತೆಯಿಂದ ಉದಹರಿಸಬೇಕಾಗುತ್ತದೆ. ಆಗ ಈ ಪದಗಳ ಅರ್ಥವ್ಯತ್ಯಾಸವು ಗೊಂದಲವನ್ನು ಉಂಟುಮಾಡಬಹುದು. ಆ ಕಾರಣ ಇಲ್ಲಿ ವಿಶದೀಕರಿಸಲಾಗಿದೆ.

ಅಂದರೆ **ವಿಶ್ವರೂಪದ** ದರ್ಶನವನ್ನು ಹೆಚ್ಚು ವಿಶಾಲವಾಗಿ ಮಾಡಿದಂತೆಲ್ಲ, ವಿಶ್ವದ ವಿಷಯದಲ್ಲಿ ನಮ್ಮ ಅಜ್ಞಾನವು ಕಡಿಮೆಯಾದಂತೆಲ್ಲ, ತೋರಮನಸ್ಸಿನಲ್ಲಿ ಕಾಣಬರುವ ಭಯವು ಕಡಿಮೆಯಾಗುತ್ತ ಹೋಗುತ್ತದೆ.

ಸಾಮಾನ್ಯವಾಗಿ ಮಾನವನಿಗೆ ತುಂಬಾ unknown ಅಂದರೆ ಏನೂ ತಿಳಿಯದೆ ಇರುವ ವಿಷಯವೆಂದರೆ, "ಸಾವು". ಆ ಕಾರಣದಿಂದಲೇ ಸಾವಿನ ಭಯವು ಒಂದಲ್ಲ ಒಂದು ಹಂತದಲ್ಲಿ ಎಲ್ಲ ಪ್ರಾಣಿಗಳನ್ನೂ ಕಾಡುತ್ತದೆ. ಸಾವಿನ ವಿಷಯವು ಏನೇನೂ ತಿಳಿಯದು ಎಂದಾಗ, ಸತ್ತವನ ಲಕ್ಷಣಗಳು ತಿಳಿದಿಲ್ಲ ಎಂದಲ್ಲ. ಹೃದಯದ ಬಡಿತವು ನಿಂತುಹೋದರೆ ಸತ್ತುಹೋದ ಅನ್ನುತ್ತಿದ್ದರು. ಆದರೆ ಈಗ ಕೃತಕ ಪ್ರೇರಣೆಗಳಿಂದ ಹೃದಯದ ಬಡಿತವನ್ನು ಸ್ವಲ್ಪಕಾಲ ಮುಂದುವರಿಸಬಹುದೆಂದು ಗೊತ್ತಾಗಿದೆ. ಉಸಿರಾಡುವುದು ನಿಂತಾಗ ಸತ್ತ ಎನ್ನುತ್ತಿದ್ದರು. ಆದರೆ ಉಸಿರನ್ನು ಹತೋಟಿಯಲ್ಲಿಟ್ಟುಕೊಂಡು ಕೆಲ

ಕಾಲ ಉಸಿರಾಡದೇ ಇದ್ದರೂ ಬದುಕಿರಬಹುದು ಎಂದು ತಿಳಿದು ಬಂದಿದೆ. Hibernating ಪ್ರಾಣಿಗಳು ಸುಮಾರು ಕಾಲ ಉಸಿರಾಡುವುದನ್ನು ಇಲ್ಲವೇ ಇಲ್ಲ ಎನ್ನುವ ಹಂತಕ್ಕೆ ಇಳಿಸುತ್ತವೆ. ಇತ್ತೀಚಿನ ವೈಜ್ಞಾನಿಕ ಪ್ರಯೋಗಗಳಿಂದಾಗಿ, ಮೆದುಳಿನ ಕ್ರಿಯೆಯು ಪುನಶ್ಚೇತನಗೊಳ್ಳದಿರುವಷ್ಟು ಕಾಲ ನಿಂತುಹೋದರೆ, ಆಗ ಸತ್ತ ಎಂದು ನಿರ್ಧರಿಸಬೇಕು. ಅವನ ಹೃದಯದ ಅಥವಾ ಶ್ವಾಸಕೋಶದ ಅಥವಾ ಇತರ ಅಂಗಗಳ ಕಾರ್ಯದಿಂದಲ್ಲ ಎಂದು ವೈದ್ಯ ವಿಜ್ಞಾನಿಗಳಲ್ಲಿ ಬಹುಮತವಿದೆ.

ವೈಜ್ಞಾನಿಕರ ತಾಪತ್ರಯಗಳು ಹೇಗೇ ಇರಲಿ, ಹೆಣ ಬಿದ್ದಿದೆ ಎಂದು ಸಾಮಾನ್ಯ ಮನುಷ್ಯನೂ ಸ್ವಲ್ಪ ಹೊತ್ತು ಆದ ಮೇಲೆ ನಿಸ್ಸಂಶಯವಾಗಿ ಹೇಳಬಹುದು. ಕೆಲವು ಅತಿ ವಿರಳವಾದ ಸಂದರ್ಭಗಳಲ್ಲಿ ಸತ್ತ ಎಂದು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡು, ಶ್ಮಶಾನಕ್ಕೆ ಹೊತ್ತುಕೊಂಡು ಹೋದರೆ, ಅಲ್ಲಿ ಅವನೋ ಅವಳೋ ಎದ್ದು ಕುಳಿತಿದು ಉಂಟು. ಆದರೆ ಶತಾಂಶ ೯೯.೯ ರಲ್ಲಿ ಸತ್ತುದನ್ನು ಸಾಮಾನ್ಯ ಜನರೂ ಗುರ್ತಿಸುತ್ತಾರೆ.

ಸಾವಿನ ವಿಚಾರದಲ್ಲಿ ಇಷ್ಟು ಜ್ಞಾನವೇನೋ ಇದೆ. ಆದರೆ "ಅನಂತರ ಏನು?" ಎನ್ನುವ ವಿಷಯದಲ್ಲಿ ಅಪರಿಮಿತ ಅಜ್ಞಾನವು ತುಂಬಿಕೊಂಡಿವೆ. ಅದರಿಂದಲೇ ಭಯವೂ ವಿಪರೀತವಾಗಿರುವುದು.

ದಿನವೆಲ್ಲಾ ದುಡಿದು ದಣಿದು ಮಲಗಿದವನಿಗೆ ಗಾಢ ನಿದ್ರೆಯು ಹತ್ತುತ್ತದೆ. ತಿರುಗಿ ಬೆಳಿಗ್ಗೆ ಏಳುವತನಕ ಸುತ್ತ ಮುತ್ತಲೂ ಏನಾಗುತ್ತದೆ ಎಂಬ ಪರಿವೆಯೇ ಇರುವುದಿಲ್ಲ. ಕಳ್ಳತನವೇ ಆಗಲಿ ಮನೆಯಲ್ಲಿ, ಹೊರಗೆ ಮಳೆಯೇ ಬೀಳಲಿ ಅಥವಾ ಲಘು ಭೂಕಂಪವೇ ಆಗಲಿ, ಕುಂಬಕರ್ಣನಿಗೆ ಪರಿವೆಯೇ ಇರುವುದಿಲ್ಲ. ಹೆಚ್ಚುಕಡಿಮೆ ಹೆಣದಂತೆಯೇ ಬಿದ್ದಿರುತ್ತಾನೆ. ಆದರೆ ಮಲಗುವಾಗ ಅವನಿಗೆ ಬೆಳಗಾಗುತ್ತಲೂ ಎಚ್ಚರವಾಗುತ್ತದೆ ಎನ್ನುವ ಧೃಡ ವಿಶ್ವಾಸವಿರುತ್ತದೆ. ಬೆಳಿಗ್ಗೆ ಎದ್ದಾಗ, ಅತಿ ಪ್ರಿಯವಾದ ನನ್ನ ದೇಹ ಈಗಿದ್ದಂತೆಯೇ ಇರುತ್ತದೆ. ಯಾವ ಭಾಗವೂ ಕಳೆದುಹೋಗಿರುವುದಿಲ್ಲ ಎಂಬ ವಿಶ್ವಾಸವಿರುತ್ತದೆ. ಅದೇ ರೀತಿ, ನನ್ನ ಕೇರಿ, ನನ್ನ ಊರು, ನನ್ನ ಸ್ನೇಹಿತರು, ನನ್ನ ಸಂಸಾರ, ಎಲ್ಲ ನನ್ನವೂ ಇದ್ದೇ ಇರುತ್ತದೆ ಎನ್ನುವ ನಂಬಿಕೆಯೂ ಇರುತ್ತದೆ. ಎಲ್ಲದಕ್ಕಿಂತಲೂ ಮಿಗಿಲಾಗಿ, ತಾನು ಆತನಕ ಬಾಳಿದ ಬಾಳಿನ ಸ್ಮರಣೆಯು ಮುಂದೆಯೂ ಇರುತ್ತದೆ, ತಾನು ಗಳಿಸಿದ ಅನುಭವಗಳನ್ನು ಮುಂದೆಯೂ ಉಪಯೋಗಿಸಿಕೊಳ್ಳಬಹುದು. ಹಾಗಾಗಿ ಮುಂಬಾಳನ್ನು ಇನ್ನೂ ಚೆಂದಗೊಳಿಸಬಹುದು ಎನ್ನುವ ಸಂಪೂರ್ಣವಾದ ಧೈರ್ಯವಿರುತ್ತದೆ.

ಆದರೆ ಗಾಢ ನಿದ್ರೆ ಮಾಡುವಾಗ, ಅವನಿಗೆ ಹೃದಯದ ಬಡಿತದ ಅರಿವೂ ಇರುವುದಿಲ್ಲ. ಉಸಿರಾಡುತ್ತಿದ್ದೇನೆ, ಗೊರಕೆ ಹುಯ್ಯುತ್ತಿದ್ದೇನೆ ಎನ್ನುವ ಜ್ಞಾನವೂ ಇರುವುದಿಲ್ಲ.

ಸಾಯುತ್ತಿರುವವನ ಮನಸ್ಸಿನಲ್ಲಿ ಯಾವ ಯಾವ ಆಲೋಚನೆಗಳು ಬರುತ್ತವೋ, ಅದನ್ನು ಸತ್ತವರು ತಿರುಗಿ ಎದ್ದು ಬಂದು ಹೇಳುವುದಿಲ್ಲ. ಮಸಲ ಹಾಗೆ ಸತ್ತವರು ತಿರುಗಿ ಬದುಕಿ ಬಂದು ಹೀಗೆ ಹೀಗೆ ಅನುಭವವಾಯಿತು ಎಂದರೆ, ಅವನು ನಿಜವಾಗಿ ಸತ್ತೇ ಇರಲಿಲ್ಲ. ಉಗ್ರವಾದ ಸನ್ನಿ ಬಡೆದ ವರಂತೆ ಭ್ರಮಾಪೂರ್ಣನಾಗಿದ್ದ ಕಾರಣ, ಭ್ರಮೆಯಲ್ಲಿ ಕಂಡು ದನ್ನು ನಿಜವಾದುದಲ್ಲವನ್ನು ಹೇಳುತ್ತಿದ್ದಾನೆ ಎಂದನ್ನುತ್ತೇವೆ. ಅಂತಹವರ ಹೇಳಿಕೆಯನ್ನು ಸಾಮಾನ್ಯವಾಗಿ ಯಾರೂ ನಂಬು ವುದಿಲ್ಲ. ಏಕೆಂದರೆ ಎಲ್ಲರ ಮನಸ್ಸಿನಲ್ಲಿಯೂ ಅಚಲವಾದ ನಂಬಿಕೆಯು ರೂಢಿಸಿಕೊಂಡು ಬಂದಿರುತ್ತದೆ :—ಸತ್ತಾಗ, ಈ ಬಾಳಿನ ಸ್ಮರಣೆಗಳೆಲ್ಲವೂ ನಾಶವಾಗುತ್ತವೆ. ಆನಂತರ ಮುಂದೆ ಯಾವ ಬಾಳೋ? ಮುಂದೆ ಎನ್ನುವುದು ಇದೆಯೋ ಇಲ್ಲವೋ ಎಂಬ ನಂಬಿಕೆ. ಇದರಿಂದಾಗಿ ಈ ಬಾಳಿನಲ್ಲಿ ನಾನು, ನನ್ನ ಸ್ಮರಣೆಗಳು, ನನ್ನ ಸಂಸಾರ, ನನ್ನ ಮನೆ, ಕೇರಿ, ದೇಶ ಇತ್ಯಾದಿಗಳೆಲ್ಲವೂ ಸತ್ತಾಗ ನನ್ನಿಂದ ಕಳಚಿಕೊಳ್ಳುತ್ತವೆ. ನನ್ನದು ಎನ್ನುವ ಅತಿ ಪ್ರಿಯವಾದುದನ್ನೆಲ್ಲ ಒಂದೇ ಘಟನೆ ಯಲ್ಲಿ ಸಂಪೂರ್ಣವಾಗಿ ಕಳೆದುಕೊಂಡುಬಿಡುತ್ತೇನೆ ಎನ್ನುವ ದುಃಖ ಪೂರ್ಣವಾದ, ಯಾತನೆಯಿಂದ ತುಂಬಿದ, ಯೋಚ ನೆಯು ಹೊರಹೊಮ್ಮುತ್ತದೆ. ಸಂಕಟಕಾರಿಯಾದ ಈ ಘೋರ ಯೋಚನೆಯೇ ಭಯಕ್ಕೆ ಮೂಲ ಕಾರಣ. ಸಾವಿನ ಭಯವು ಮರಣ ಭೀತಿಯು, ಎಲ್ಲ ಭೀತಿಗಳಿಗಿಂತಲೂ ಭಯಾನಕವಾ ದುದು. ಈ ಭಯವು ಮನಸ್ಸನ್ನು ಹೊಕ್ಕರೆ ಆನಂತರ ಆ

ಮನಸ್ಸಿನಲ್ಲಿ ಇನ್ನು ಯಾವ ಯೋಚನೆಗಳೂ ವಿಹಿತವಾಗಿ ಕೆಲಸ ಮಾಡಲಾರವು.

ಸಾವು ಎಂದರೇನು?

ನಾನು ಸಾಯುತ್ತೇನೆ ಎಂದಾಗ, ನಾನು ಎಂದರೆ ಶಿವರಾಮ್ ಎಂಬ ಒಬ್ಬ ಮನುಷ್ಯ. ಇಂತಹ ಊರಿನಲ್ಲಿ, ಇಂತಹ ಕಸುಬನ್ನು ನಡೆಸುತ್ತಿರುವ, ಇಂತಹ ಬೀದಿಯ, ಇಷ್ಟನೇ ಮನೆಯಲ್ಲಿರುವ, ನನಗೆ ಅತಿ ಪ್ರಿಯವಾದ ಒಬ್ಬ ವ್ಯಕ್ತಿ ಎಂದು ತಿಳಿಯುತ್ತೇನೆ. ಕನ್ನಡಿಯಲ್ಲಿ ನೋಡಿಕೊಂಡರೆ ಕಾಣಿಸುತ್ತೆ, ನನ್ನ ದೇಹ. ಇದು ನನ್ನದು ಎನ್ನುತ್ತೇನೆ. ಹೆಮ್ಮೆ ಪಡುತ್ತೇನೆ. ಆದರೆ ಹೆಮ್ಮೆ ಪಡುವುದು ದೇಹವಲ್ಲ, ಅದರಲ್ಲಿ ಅಡಗಿರುವ ನನ್ನ ಮನಸ್ಸು. ಇದೆಲ್ಲವೂ ನಾನು ಎಂಬ ಕಲ್ಪನೆಯನ್ನು ಮನಸ್ಸಿನಲ್ಲಿ ಗ್ರಹಿಸುತ್ತೇನೆ.

ಬೆಳಿಗ್ಗೆ ಎದ್ದು ಮುಖ ಕ್ಷೌರವನ್ನು ಮಾಡಿಕೊಂಡಾಗ, ಒಂದು ದಿನ ಬೆಳೆದ, ತುರಿಕೆಯನ್ನು ಮುಖಕ್ಕೆ ಹಚ್ಚಿರುವ, ಗಡ್ಡ ಮೀಸೆಗಳನ್ನು ಬೋಳಿಸುತ್ತೇನೆ. ಈ ಗಡ್ಡ ಮೀಸೆಗಳೂ ನನ್ನ ಒಂದು ಪ್ರಮುಖವಾದ ಭಾಗವೇ ದಿಟ. ಅದು ಹೋಗಿಬಿಡುತ್ತಲ್ಲ, ಅದನ್ನು ಕಳೆದುಕೊಳ್ಳುತ್ತೇನಲ್ಲ ಎಂದು ನನಗೆ ವ್ಯಥೆಯೇನೂ ಆಗುವುದಿಲ್ಲ. ಏಕೆಂದರೆ, ದರಿದ್ರಮುಂಡೇವು, ತಿರುಗಿ ಬೆಳೆದುಕೊಳ್ಳುತ್ತಲ್ಲ ಎಂಬ ಧೈರ್ಯವಿದ್ದೇ ಇರುತ್ತದೆ. ಕಳೆದುಕೊಂಡಿದ್ದನ್ನು ಬೇಕಾದಾಗ ಪಡೆಯಬಹುದೆಂಬ ಧೈರ್ಯವಿರು

ವುದರಿಂದ, ಇದ್ದುದು ಕಳೆದು ಹೋಯಿತು ಎನ್ನುವ ದುಃಖ ವಾಗುವುದಿಲ್ಲ.

ಕೈ, ಕಾಲು ಬೆರಳುಗಳಲ್ಲಿ ಉಗುರು ಬೆಳೆಯುತ್ತದೆ. ಪ್ರಾಣಿವರ್ಗದ ಹಲವಾರು ಪ್ರಾಣಿಗಳಲ್ಲಿ ಉಗುರುಗಳು ಆಯುಧಗಳು. ಆತ್ಮರಕ್ಷಣೆಗಾಗಲೀ, ಶತ್ರು ಮರ್ದನಕ್ಕಾಗಲೀ ಅವುಗಳನ್ನು ಉಪಯೋಗಿಸಲು ಸಾಧ್ಯವಿತ್ತು. ನರಸಿಂಹ ದೇವರು ಶತ್ರುವಿನ ಹೊಟ್ಟೆಯನ್ನು ಉಗುರುಗಳಿಂದಲೇ ಬಗೆದಿದ್ದು. ಆದರೆ ಇಂದು ಮಾನವನು ಉಗುರುಗಳನ್ನು ಆತ್ಮರಕ್ಷಣೆಗೆ ಉಪಯೋಗಿಸುವುದಿಲ್ಲ. ಸ್ವಲ್ಪ ಯಾತನೆಯಿದ್ದರೆ ಸುಖವು ಹೆಚ್ಚುವ ಮದನಕೇಳಿಯಲ್ಲಿ ಉಗುರುಗಳನ್ನು ಬಳಸಿಕೊಳ್ಳಬಹುದು. ಕೆಲವೊಮ್ಮೆ ಮಡಚಿದ ಚಾಕುಗಳಿಂದ ಅಲುಗನ್ನು ಹೊರಕ್ಕೆ ಎಳೆಯಲು ಉಗುರುಗಳನ್ನು ಸಾರ್ಥಕಗೊಳಿಸಬಹುದು. ಅಷ್ಟೇ! ಅಗತ್ಯವಿರದ ಈ ಉಗುರುಗಳಿಗೆ ಅದೇನೆಲ್ಲ ಶೃಂಗಾರ, ಅದೇನೆಲ್ಲ ರಂಗು ಹಚ್ಚಿ ಹೆಣ್ಣು ತನ್ನ ವಶೀಕರಣ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತದೆ. ಅಥವಾ ಹೆಚ್ಚಿಸಿಕೊಂಡೆ ಎಂದು ಆತ್ಮ ವಿಶ್ವಾಸವನ್ನು ಪಡೆಯುತ್ತದೆ.

ಇಂತಹ ಉಗುರುಗಳನ್ನು, ಅಧಿಕವಾಗಿ ಬೆಳೆದಾಗ ಕತ್ತರಿಸಿ ಹಾಕುತ್ತೇನೆ. ಅದೂ ನನ್ನವೇ? ಆದರೆ ತಿರುಗಿ ಬೆಳೆಯುತ್ತದಲ್ಲ ಎನ್ನುವ ಭರವಸೆಯಿರುವುದರಿಂದ, ಎಂದೆಂದಿಗೂ ಕಳೆದುಕೊಂಡೆ ಎಂಬ ಭಾವನೆಯು ಬರುವುದಿಲ್ಲ. ಹಾಗಾಗಿ ದುಃಖವೂ ಆಗುವುದಿಲ್ಲ.

ಉಗುರುಗಳನ್ನು ಕತ್ತರಿಸಿಕೊಳ್ಳಲು ಹೋದಾಗ ಕೆಲವೊಮ್ಮೆ ಬೇಹುಷಾರಾಗುತ್ತೇನೆ. ಆಗ ಒಂದೆರಡು ತೊಟ್ಟು ರಕ್ತವು ಸುರಿಯುತ್ತದೆ. ರಕ್ತ ವೃದ್ಧಿಯಿದ್ದವನೇ ಆರೋಗ್ಯವಂತ ಎಂದು ಬಾಲ್ಯದಿಂದಲೂ ಕೇಳಿದ್ದೇನೆ. ರಕ್ತ ಸಮೃದ್ಧಿಯೇ ಮನುಷ್ಯನ ಶಕ್ತಿಗೆ ಅಗತ್ಯವಾದುದು. ಅಂತಹ ರಕ್ತವು ಅನ್ಯಾಯವಾಗಿ ಸುರಿದುಹೋದರೆ ಸಂಕಟವಾಗುತ್ತದೆ. ಆದಕಾರಣ ಬೇಗ ಬೆರಳನ್ನು ಬಾಯಿಗಿಟ್ಟುಕೊಂಡು, ರಕ್ತ ಸುರಿಯುವುದು ನಿಂತುಹೋಗಬಹುದು ಎಂದಂದುಕೊಳ್ಳುತ್ತೇನೆ.

ಆದರೆ ಒಂದೆರಡು ತೊಟ್ಟು ರಕ್ತ ಸುರಿದು ಹೋದರೆ, ಕೂದಲು ಉಗುರುಗಳಂತೆ ಅದೂ ತಿರುಗಿ ಉತ್ಪನ್ನವಾಗುವುದಿಲ್ಲವೇ ? ಕಳೆದು ಹೋದುದು ಹಿಂತಿರುಗಿ ಬಾರದೆ ಇದ್ದರೂ, ಹೊಸ ರಕ್ತವು ಬಂದು ಕೂಡಬಹುದಲ್ಲ. ಹಾಗೆ ಹೊಸ ರಕ್ತವು ಉತ್ಪನ್ನವಾಗದೆ ಇದ್ದರೆ, ರಕ್ತಭೇದಿಯಿಂದ ತೀವ್ರವಾಗಿ ನರಳಿದವರ ಪಾಡೇನು ? ವರ್ಷ ವರ್ಷಗಳು ಆಗಿಂದಾಗ್ಗೆ ಮೂಲವ್ಯಾಧಿಯ ಪರಿಣಾಮವಾಗಿ ರಕ್ತವನ್ನು ಕಳೆದುಕೊಂಡರೂ, ಅಂತಹ ರೋಗಿಗಳು ಆರೋಗ್ಯವಾಗಿ, ಶಕ್ತಿಯುತರಾಗಿ ಇದ್ದೇ ಇರುತ್ತಾರಲ್ಲ! ರಕ್ತದ ಪರಿಚಯವನ್ನು ಮಾಡಿಕೊಳ್ಳೋಣ. ಬಲು ಸ್ಥೂಲವಾಗಿ.

ಒಂದು ಕ್ಯುಬಿಕ್ ಮಿಲಿಮೀಟರಿನಲ್ಲಿ ಅರ್ಧ ತೊಟ್ಟು ರಕ್ತಕ್ಕಿಂತಲೂ ಕಡಿಮೆ ರಕ್ತವಿರುತ್ತದೆ. ಇಷ್ಟು ರಕ್ತದಲ್ಲಿ

ಸುಮಾರು ಐದು ಮಿಲಿಯನ್, ಅಂದರೆ ಐವತ್ತು ಲಕ್ಷ ಕೆಂಪು ರಕ್ತಕಣಗಳಿರುತ್ತವೆ. ರಕ್ತದ ಕೆಂಪು ಬಣ್ಣವು ಈ ರಕ್ತಕಣಗಳಿಂದಲೇ. ಶ್ವಾಸಕೋಶಗಳಿಂದ ಆಮ್ಲಜನಕವನ್ನು ಹೀರಿ ದೇಹದ ಎಲ್ಲೆಲ್ಲಿಗೂ ಸರಬರಾಜಿಸುವ, ಹಾಗೂ ಇಂಗಾಲಾಮ್ಲವನ್ನು ದೇಹದ ಎಲ್ಲೆಲ್ಲಿಂದಲೂ ತೆಗೆದುಕೊಂಡು ಹೋಗಿ ಶ್ವಾಸಕೋಶಗಳಲ್ಲಿ ವಿಸರ್ಜಿಸುವ ಮುಖ್ಯ ಕಾರ್ಯ ಇವುಗಳದು. ಇಂತಹ ಪ್ರಮುಖ ಕಾರ್ಯವನ್ನು ಮಾಡಲು ಮೀಸಲಾಗಿರುವ ಕೆಂಪು ರಕ್ತಕಣಗಳು, ಮೂಳೆಗಳ ಒಳಭಾಗದಲ್ಲಿರುವ ಬೋನ್ ಮ್ಯಾರೋ ಎಂಬ ಸ್ನಾಯುಗಳಲ್ಲಿ ಹುಟ್ಟುತ್ತವೆ. ಅಲ್ಲಿಯೇ ಶೈಶವ ಬಾಲ್ಯವನ್ನು ಕಳೆದು, ಪ್ರಾಯವು ಮೂಡಿದ ಮೇಲೆ ತನ್ನ ಬಾಳನ್ನು ನಡೆಸಲು ದಿಗ್ವಿಜಯ ಹೊರಟು, ರಕ್ತಕ್ಕೆ ಪ್ರವೇಶಮಾಡುತ್ತದೆ. ಆನಂತರ ಮೂರರಿಂದ ಆರು ದಿನಗಳ ವರೆಗೆ, ಅಹರ್ನಿಶಿ, ಬಿಡುವಿಲ್ಲದೆ ತನ್ನ ಕರ್ತವ್ಯವನ್ನು ಮಾಡುತ್ತದೆ. ಆನಂತರ ಅದಕ್ಕೆ ಮುಪ್ಪು ಮೂಡಿ ಸಾವು ಬರುತ್ತದೆ. ಇದರ ಅರಿವಾದಾಗ ಅದು ಅಬ್ಡಮನ್, ಅಂದರೆ ಉದರದ ಎಡಗಡೆಯಿರುವ ಸ್ಪ್ಲೀನ್ ಎಂಬ ಗ್ರಂಥಿಗೆ ಕೊನೆಯ ಯಾತ್ರೆಯನ್ನು ಕೈಗೊಳ್ಳುತ್ತದೆ. ಕೆಂಪು ರಕ್ತಕಣಗಳಿಗೆ ಸ್ಪ್ಲೀನು ಮಹಾಶ್ಮಶಾನ. ಅಲ್ಲಿಗೆ ಮುಪ್ಪು ಮೀರಿದ ಕೆಂಪು ರಕ್ತಕಣಗಳು ಹೋದಾಗ, ಸ್ಪ್ಲೀನಿನಲ್ಲಿರುವ ಹಲವಾರು ಎನ್‌ಝೈಮುಗಳು, ಕೆಂಪು ರಕ್ತಕಣಗಳ ಹೆಣಗಳನ್ನು ಹರಿದು ಛಿದ್ರ ಛಿದ್ರ ಮಾಡುತ್ತವೆ. ಪಾರಸೀಯರ ಶವಗಳನ್ನು ರಣಹದ್ದುಗಳು ಮುಕ್ಕುವಂತೆ. ದೇಹಕ್ಕೆ ಅಗತ್ಯವಾದ ಅಂಶಗಳನ್ನು ಹೀರಿ

ಕೊಂಡ ಮೇಲೆ, ಮಿಕ್ಕ ಹೆಣದ ಭಾಗವು ಸ್ಪ್ಲೀನಿನ ಅಂತರ ಕಂದರಗಳಲ್ಲಿ, ಸಮಾಧಿಯಾಗುತ್ತವೆ.

ಅಂದರೆ ಕೆಂಪು ರಕ್ತಕಣಗಳ ಬಾಳೆಲ್ಲಾ ೩ ರಿಂದ ೬-೭ ದಿನಗಳಷ್ಟು ಮಾತ್ರ. ವರ್ಷವೊಂದರಲ್ಲಿ ೫೦–೬೦ ಸರ್ತಿ ಹೊಸ ರಕ್ತಕಣಗಳು ಉದ್ಭವವಾಗಿ, ಹಳೆಯದನ್ನೆಲ್ಲಾ ಶ್ಮಶಾನಕ್ಕೆ ಕಳಿಸಲಾಗುತ್ತದೆ. ಹೀಗಾಗುವುದು ನಮ್ಮ ಪ್ರಜ್ಞೆಗೆ ಸಾಮಾನ್ಯವಾಗಿ ಬಾರದೆ ಇರುವುದರಿಂದ, ಉಗುರುಕಣ್ಣು ಕತ್ತರಿಸಿಕೊಂಡು ಒಂದೆರಡು ತೊಟ್ಟು ರಕ್ತವು ಸುರಿದರೆ ವ್ಯಥೆ ಪಡುತ್ತೇನೆ, ಭಯವಾಗುತ್ತದೆ. ಈಗ, ಈ ಜ್ಞಾನವನ್ನು ಸಂಪಾದಿಸಿದ ಮೇಲೆ "ಸ್ವಲ್ಪ ರಕ್ತ ಹೋದರೆ ಹೋಯಿತು. ಕಳೆದುಕೊಂಡರೂ ಪರವಾಗಿಲ್ಲ, ಬೇರ ರಕ್ತವು ಹೇಗೂ ಉತ್ಪನ್ನವಾಗುತ್ತದೆ" ಎಂಬ ಧೈರ್ಯವು ಮೂಡುತ್ತದೆ.

ದೇಹದೊಳಕ್ಕೆ ಶತ್ರು ಆಕ್ರಮಣವಾದರೆ, ಬಿಳಿಯ ರಕ್ತಕಣಗಳು ಮೊದಲು ಸಮರಕ್ಕೆ ತೊಡಗುತ್ತವೆ. ಒಂದು ಕ್ಯೂಬಿಕ್ ಮಿಲಿಮೀಟರಿನಲ್ಲಿ ಐದಾರುಸಾವಿರ ಬಿಳಿಯ ರಕ್ತಕಣಗಳು ಸಾಮಾನ್ಯವಾಗಿ ಇರುತ್ತವೆ. ಇವುಗಳು ಕೂಡ ಬೋನ್ ಮ್ಯಾರೋದಲ್ಲಿ ಮತ್ತು ಇತರ ಗ್ರಂಥಿಗಳಲ್ಲಿ ಜನ್ಮತಾಳಿ, ಪ್ರವರ್ಧಮಾನಕ್ಕೆ ಬಂದಮೇಲೆ ತಮ್ಮ ಬಾಳನ್ನು ೩–೪ ವಾರಗಳು ನಡಸುತ್ತವೆ. ನಂತರ ಸತ್ತು ಶ್ಮಶಾನಕ್ಕೆ ಹೋಗುತ್ತವೆ.

ಇದೇ ರೀತಿ ನನ್ನ ದೇಹದಲ್ಲಿರುವ ಪ್ರತಿಯೊಂದು ಟಿಷ್ಯುವೂ, ನನ್ನ ಜೀವಮಾನ ಕಾಲದಲ್ಲಿ ಎಷ್ಟೆಷ್ಟೋಬಾರಿ ಹುಟ್ಟಿ, ಬಾಳಿ ಸತ್ತಿದೆ.

ಅಂದರೆ ನಾನು ಹುಟ್ಟಿದಾಗ ನನ್ನ ದೇಹದಲ್ಲಿ ಯಾವ ಟಿಷ್ಯೂಗಳನ್ನು ಬಳುವಳಿಯಾಗಿ ಪಡದಿದ್ದೆನೋ ಅವೊಂದೂ ಕೆಲ ಕಾಲಾನಂತರ. ಇಲ್ಲವಾಗುತ್ತವೆ. ನನ್ನದು ಎಂದುಕೊಂಡ ಆ ಟಿಷ್ಯೂಗಳು ಹೋದುದರಿಂದ ನನಗೇನೂ ವ್ಯಥೆಯಾಗಲೀ ದುಃಖವಾಗಲೀ ಆಗಲೇ ಇಲ್ಲ. ಹೊಸದಾಗಿ ಬಂದ ಟಿಷ್ಯೂಗಳು ಕೂಡ ನನ್ನವೇ ಎಂದು ನಿಸ್ಸಂಶಯವಾಗಿ ನಂಬಿದ್ದೇನೆ.

ನನ್ನ ದೇಹದಲ್ಲಿ ಸಾವಿರಾರು ವಿಧವಿಧ ಟಿಷ್ಯೂಗಳಿವೆ. ಒಂದೊಂದೂ ಒಂದೊಂದು ತರಹ ಚೆಂದ. ಕುಂದಿದೆ ನನ್ನಲ್ಲಿ ಎಂದು ಒಂದು ಟಿಷ್ಯೂವೂ ಅಂದುಕೊಳ್ಳುವುದಿಲ್ಲ. ವಿವಿಧ ಸ್ವರೂಪು, ವಿಧ ವಿಧ ಕಾರ್ಯ, ವಿಧ ವಿಧವಾದ ಬಾಳನ್ನು ನಡೆಸುವ ಈ ಟಿಷ್ಯೂಗಳೆಲ್ಲವೂ ದಿನಂಪ್ರತಿ ನನ್ನಲ್ಲಿ ಸಾಯುತ್ತಲೇ ಇವೆ. ಬೇರೆ ಟಿಷ್ಯೂಗಳು ಹುಟ್ಟುತ್ತಲೇ ಇವೆ. ಇಷ್ಟು ಹೆಣಗಳು ನನ್ನ ದೇಹದಲ್ಲಿ ಕ್ಷಣ ಕ್ಷಣವೂ ಬೀಳುತ್ತಿದ್ದರೂ. ನಾನೇನೂ ದುಃಖಪಡುತ್ತಿಲ್ಲ. ಶವರಾಮ್ ಅಲ್ಲ, ನನ್ನ ಹೆಸರು ಇನ್ನುಮೇಲೆ ಶವರಾಮ. ಶವಗಳ ಮಧ್ಯೆ ಆರಾಮವಾಗಿ ನಗುನಗುತ್ತಾ ಇದ್ದೇನೆ ಎಂದು ಧೈರ್ಯವಾಗಿ ಹೇಳಿಕೊಳ್ಳಬಹುದು.

ಇಷ್ಟು ಹೆಣಗಳ ಮಧ್ಯೆ "ನಾನು" ಎಂದು ಅಂದು ಕೊಳ್ಳುತ್ತೇನಲ್ಲ, ನಾನು ಎಂದು ನಲಿದಾಡುತ್ತೇನಲ್ಲ! ಆ ನಾನು ಎನ್ನುವ ಕಲ್ಪನೆಯು ನನ್ನ ಬಾಳಿನ ಪೂರ್ಣ ಅವಧಿಯಲ್ಲಿ ಧೃಢ ವಾಗಿ ನಿಂತಿದೆ.

ನನ್ನ ಬಾಳಮುಟ್ಟಗಾದರೂ ಶಾಶ್ವತವಾಗಿರುವ ಈ "ನಾನು" ಎಂಬ ಕಲ್ಪನೆಯು, ಮಾನಸಿಕವಾಗಿ ವಿಶ್ಲೇಷಣೆ ಯನ್ನು ಮಾಡಿದಾಗ, ಬಾಳಿನಲ್ಲಿ ರೂಢಿಸಿಕೊಂಡ ಕೆಲವು ಪದರ ಗಳಿರುವುದನ್ನು ಗುರುತಿಸುತ್ತೇನೆ. ಈ ಪದರಗಳನ್ನು, ಈ ಕವಚಗಳನ್ನು. ಪೂರ್ಣ ಪ್ರಜ್ಞೆಯಿಂದ, ಹರಿದು ಹಾಕಿದವರು, ಹೇಳುತ್ತಾರೆ:- ಒಳತಿರುಳೊಂದಿದೆ ಶಾಶ್ವತನಾದ, ಕಾಲಾತೀತ ವಾದ ದೇಶಾತೀತವಾದ ದೇಹಾತೀತವಾದ, ಅಂಶವೊಂದಿದೆ. ಆ ಅಂಶವನ್ನು ಪ್ರತ್ಯಕ್ಷ ಕಂಡರೆ ಅಮಿತಾನಂದದ ಅನುಭವ ವಾಗುತ್ತದೆ; ಎಂದು.

ಋಷಿಗಳು ಸಾವಿನ ಅನಂತರದ ಮನನ ಮಾಡಿದುದೇಕೆ?

ಭಾರತೀಯರು ಪರಲೋಕದ ವಿಚಾರವನ್ನೇ ಮಾಡುತ್ತ ಇಹಲೋಕದ ಸುಖ ಬಾಳುವೆಯನ್ನು ತೃಣೀಕರಿಸಿದರು ಎಂದು ವಿಚಾರವಂತರು ಅನ್ನುವುದುಂಟು. ಆದರೆ ಆಳಮನಸ್ಸಿನ, ಹಾಗೂ ತೋರಮನಸ್ಸಿನ ಭಯವನ್ನು, ಅದರಲ್ಲಿಯೂ "ಸಾವಿ"ನ ಭಯವನ್ನು ನಿರ್ಮೂಲಮಾಡಲು, ಸಾವಿನ ನಂತರದ ಬಾಳನ್ನು ಊಹೆ ಮಾಡಿ ನಂಬುವಂತೆ ಜನಸಾಮಾನ್ಯರಿಗೆ ತಿಳಿಸಿ

ದರು. ಕ್ರಿಶ್ಚಿಯನ್ ಮತವಾಗಲೀ, ಇಸ್ಲಾಂ ಧರ್ಮದಲ್ಲಾಗಲೀ, ಯಾವುದೇ ಮತದಲ್ಲಿಯೂಕೂಡ Life Hearafter ಅನ್ನು ಕುರಿತು ಸೊಬಗಿನ ವರ್ಣನೆಗಳಿವೆ. ಆ ಆಶೆಯಿಂದ ಈ ಲೋಕದಲ್ಲಿ ನ್ಯಾಯ ಬಾಳನ್ನು ನಡೆಸಿ ಎಂಬ ಬೋಧನೆಯೂ ಇದೆ.

ಅಂದರೆ ನಮ್ಮ ನಾಡಿನಲ್ಲಿ ವೇದಗಳ ಕಾಲದಿಂದ, ಸಾವಿನ ನಂತರದ ವಿವರಣೆಗಳನ್ನು ಕೊಟ್ಟಿದುದು, "ಭಯ" ನಿವಾರಣೆಗಾಗಿ ಎಂದು ಹೇಳಬಹುದು. ಇದು ಜನಸಾಮಾನ್ಯರಿಗೆ ಅನ್ವಯಿಸುವಂತುದು.

ಆದರೆ ವಿಚಾರ ಮಾಡುವ ಯೋಗ್ಯತೆ ಇದ್ದ ಬಲು ಅಲ್ಪ ಸಂಖ್ಯಾತರಿಗೆ ವಿಚಾರದಿಂದಲೇ ಭಯ ನಿವಾರಣೆಯಾಗಲೂ ಸಾಧ್ಯ. ಅವರುಗಳಿಗೆ ಸ್ವರ್ಗ, ನರಕ ಇತ್ಯಾದಿ ಕಲ್ಪನೆಗಳ ಅಗತ್ಯವಿರುವುದಿಲ್ಲ ಎನ್ನಬಹುದು.

"ನನ್ನ" ಸ್ಥೂಲ ಪರಿಚಯವನ್ನು ಈ ರೀತಿ ಪಡೆದಾಗ, ಆಹಾರದಿಂದ ಬೆಳೆದ ದೇಹವೆಂಬ ಒಂದು ಚೀಲವನ್ನು ಮೊದಲು ಕಾಣುತ್ತೇವೆ. ಇದರೊಳಗೆ ಪ್ರಾಣವೆಂಬುದುದೊಂದು ಓಡಾಡುತ್ತಿರುವುದರಿಂದ, ನಾನು ಬದುಕಿದ್ದೇನೆ. ಕಾಣಲಾಗದ ಅದು ಅದೃಶ್ಯವಾದರೆ, ನಾನು ಹೆಣವಾಗುತ್ತೇನೆ ಎಂಬುದನ್ನು ತಿಳಿದೆ. ಈ ತಿಳುವಳಿಕೆಯನ್ನೆಲ್ಲಾ ಮನಸ್ಸು ಎಂಬುದೊಂದು ಸಾಧಿಸಿಕೊಟ್ಟಿದೆ ಎಂಬುದನ್ನೂ ಮನಸ್ಸೇ ಬಿಡಿಸಿ ತೋರಿಸಿದೆ.

ಈ ಅರಿವನ್ನು ವಿಚಾರಮಾಡಿ ತಿಳಿದಮೇಲೆ, ಪುನಃ ಪುನಃ ಮನನ ಮಾಡಿದ ಮೇಲೆ ಅರಿವು "ನನ್ನ" ಅನುಭವವಾಗಿ ಪರಿಣಮಿಸುತ್ತದೆ. ಅನುಭವವಾದ ಅರಿವನ್ನು ಋಷಿಗಳ ಕಾಲದಲ್ಲಿ ವಿಜ್ಞಾನವೆಂದು ಕರೆಯುತ್ತಿದ್ದರು. ಅವರ ಭಾಷೆಯಲ್ಲಿ ಅನ್ನಮಯ ಕೋಶ. ಅದರೊಳಗೆ ಪ್ರಾಣಮಯ ಕೋಶ, ಅದರ ಒಳಗಡೆ ಮನೋಮಯ ಕೋಶ, ಅದರ ಅಂತರದಲ್ಲಿ ವಿಜ್ಞಾನಮಯ ಕೋಶ, ಈ ಕೋಶಗಳ ಒಳಾ ಒಳಗೆ ಇರುವುದು, ದ್ವಂದ್ವರಹಿತವಾದ ಆನಂದಮಯವಾದ ಅನುಭವ. ಆನಂದ ಮಯ ಕೋಶವಿದು ಎಂದರು. ಪಂಚ ಕೋಶಾಧ್ಯಕ್ಷನಾಗಿ ಚೇತನವು ಒಂದು ಇರಬೇಕು, ಅದು ಸದಾ ಸರ್ವದಾ ಆನಂದ ಮಯವಾದುದು ಎಂದರು.

ನನ್ನ ದೇಹದಲ್ಲಿ ಪಂಚ ಕೋಶಾಧ್ಯಕ್ಷನು ಇದ್ದುಗೊಂಡು ಎಲ್ಲವನ್ನೂ ನಡಸುವ ಚೇತನನಾಗಿರುವಹಾಗೆ, ಇಡೀ ಬ್ರಹ್ಮಾಂಡಕ್ಕೂ ಒಂದು ಹಿರಿಯದಾದ, ಅನುಪಮವಾದ ಚೇತನವು ಇರಲೇಬೇಕು ಎಂದು ಯೋಚಿಸುವುದು ಸೂಕ್ತ. ನನ್ನಲ್ಲಿರುವ ಪಂಚಕೋಶಾಧ್ಯಕ್ಷನಿಗೂ ಈ ಹಿರಿಯ ಚೇತನಕ್ಕೂ ತುಂಬಾ ಹತ್ತಿರದ ನೆಂಟು ಇರಬೇಕು ಎಂದು ಅನ್ನುವುದೂ ನ್ಯಾಯ. ಹಿರಿಯ ಚೇತನವೂ ಆನಂದಮಯ; ಪಂಚಕೋಶಾಧ್ಯಕ್ಷನೂ ಆನಂದಮಯಿ.

ಇಡೀ ವಿಶ್ವಕ್ಕೆ ಈ ಆನಂದಮಯಿಯಾ ಚೇತನವೇ ಒಡೆಯ, ಅವನೇ ವಿಶ್ವೇಶ್ವರ ಎಂದನ್ನಲು ಯಾವ ಅಡ್ಡಿಯೂ ಇಲ್ಲ.

ತೋರಮನಸ್ಸಿನ ಭಯವನ್ನು **ವಿಶ್ವರೂಪ** ದರ್ಶನದಿಂದ, ವಿಶ್ವದ ಪರಿಚಯಜ್ಞಾನದಿಂದ ನಿವಾರಿಸಿಕೊಳ್ಳಬಹುದು. ಏಕೆಂದರೆ ವಿಶ್ವದ ಪರಿಚಯವಾದರೆ unknown ಉಳಿಯುವುದಿಲ್ಲ. ಹಾಗಾಗಿ fear of the unknown ಕಾಣಿಸುವ ಅಗತ್ಯವಿರುವುದಿಲ್ಲ.

ಆಳಮನಸ್ಸಿನ ಭಯವು, instinct—ಹುಟ್ಟುಗುಣ. ಇದನ್ನು ನಿವಾರಿಸಬೇಕಾದರೆ **ವಿಶ್ವೇಶ್ವರನ** ದರ್ಶನದಿಂದ; ಅವನನ್ನು ಸಾಕ್ಷಾತ್ ಅರಿಯುವುದರಿಂದ—ಆಗ "ನಾನು" ಎನ್ನುವುದರ ಅರಿವು ಮೂಡುತ್ತದೆ. ಆ ಅಜ್ಞಾನವು ನಿವಾರಣೆಯಾಗುತ್ತದೆ.

ಆದುದರಿಂದಲೇ ಉಪನಿಷತ್ಕಾರರು

ಯತೋ ವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ
ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕದಾಚಿನ

ಎಂದು ಅನುಭವಾಮೃತವನ್ನು ನುಡಿದರು.

ಮನಸ್ಸು ಮತ್ತು ಮಾತು ಯಾವುದನ್ನು ಪಡೆಯಲಾಗದೆ ಹಿಂತಿರುಗಿದವೊ, ಆ ಆನಂದವೇ ಬ್ರಹ್ಮ ಎಂದು ಯಾರು ಅರಿಯುತ್ತಾರೋ, ಅವರು ಎಂದೆಂದಿಗೂ "ನ ಬಿಭೇತಿ" ಭಯಪಡುವುದೇ ಇಲ್ಲ.

ಭಯವು, ತೋರ ಮತ್ತು ಆಳ ಮನಸ್ಸುಗಳಿಂದ ನಿವಾರಣೆಯಾದ ಮೇಲೆ, ಯಾವ ರೋಗವೂ ತಾಕುವುದಿಲ್ಲ. ಯಾವ ಆತಂಕವೂ ಕಾಡುವುದಿಲ್ಲ.

ವಂದನಾರ್ಪಣೆ

ಬೆಂಗಳೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಮಾಲೆಯಲ್ಲಿ "ಭಯ"ದ ವಿಶ್ಲೇಷಣೆಯನ್ನು ಮಾಡಲು ಅವಕಾಶ ವನ್ನಿತ್ತುದಕ್ಕೆ ಹಾಗೂ ಉಪನ್ಯಾಸವನ್ನು ಕಿರು ಹೊತ್ತಗೆಯ ರೂಪದಲ್ಲಿ ಹೊರತಂದುದಕ್ಕೆ, ಸಮಿತಿಯ ಅಧ್ಯಕ್ಷರಾದ ಮಾನ್ಯ ಮಿತ್ರ ಡಾ|| ರಂ. ಶ್ರೀ. ಮುಗಳಿಯವರಿಗೆ;

ಉಪನ್ಯಾಸವನ್ನು ಮಾಡಲು ಸಹಕರಿಸಿ ಎಡೆಯಿತ್ತ ಎಚ್. ಎಂ. ಟಿ. ಕರ್ಣಾಟಕ ಸಂಘದವರಿಗೆ;

ಅಚ್ಚಾಗುವಾಗ ತುಂಬು ಒಲವಿನಿಂದ ಶ್ರದ್ಧೆವಹಿಸಿದ ಶ್ರೀ ಶಿವಬಸಪ್ಪನವರಿಗೆ; ಹಾಗೂ ಸಡಗರದಿಂದ ಸಹಕರಿಸಿದ ಚೇತನ ಪ್ರಿಂಟರ್ಸ್ ಅವರಿಗೆ ಹೃದಯಪೂರ್ವಕ ವಂದನೆಗಳು.

17-6-69
ಮಲ್ಲೇಶ್ವರ
ಬೆಂಗಳೂರು-3

ಎಂ. ಶಿವರಾಂ

ಬೆಂಗಳೂರು ವಿಶ್ವವಿದ್ಯಾಲಯದ
ಪ್ರಚಾರೋಪನ್ಯಾಸಮಾಲೆ

ಪ್ರಕಟಣೆಗಳು

೧ **ನಗೆಯ ನೆಲೆ**–ಪ್ರೊ. ಎಸ್. ಕೆ. ರಾಮಚಂದ್ರರಾವ್

೨ **ನಕ್ಷತ್ರ ಲೋಕ**–ಜಿ. ಟಿ. ನಾರಾಯಣರಾವ್

೩ **ಆಕಾಶಯಾನ**–ಪಿ. ಶ್ರೀನಿವಾಸರಾವ್ (ಅಚ್ಚಿನಲ್ಲಿದೆ)

೪ **ಭಯ–ಸರಳ ವಿಶ್ಲೇಷಣೆ**–ಡಾ|| ಎಂ. ಶಿವರಾಂ

ಪ್ರತಿಗಳು ದೊರೆಯುವ ವಿಳಾಸ:

ಅಧ್ಯಕ್ಷರು,

೧ ಬೆಂಗಳೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಶಾಖೆ
ಕನ್ನಡ ವಿಭಾಗ
ಬೆಂಗಳೂರು–೯

೨ ಬೆಂಗಳೂರು ವಿಶ್ವವಿದ್ಯಾಲಯದ ಬಳಕೆದಾರರ
ಸಹಕಾರ ಸಂಘ, ಬೆಂಗಳೂರು.